ಗೌರಿ ಲಂಕೇಶರ

ಲಂಕೇಶ್

ಫೆಬ್ರವರಿ 28, 2007


ರಂಜನೆ ◆ ಬೋಧನೆ ◆ ಪ್ರಬೋಧನೆ

ಬೆಲೆ ರೂ. 10/-

ರವಿ ಪೂಜಾರಿ ಜಾಡು ಹಿಡಿದು



ಸಮಿ ದಾವೂದ್ ಬಂಟನೇ?





ಕಾವೇರಿ

ಎಲ್ಲರೂ ದ್ರೋಹಿಗಳೇ



ಬೆಳಗಾವಿ:
ಯುವಕನ ಮೇಲೆ KAS
ಅಧಿಕಾರಿ ಅತ್ಯಾಚಾರ!



ಪ್ರಜಾವಾಣಿ
ಶಾಂತಕುಮಾರ್
ಔಟ್

ಪೆಟ್ರೋಲ್ ಬೆಲೆ: 2 ರೂಪಾಯಿ ಇಳಿಕೆಯಲ್ಲ, 28 ರೂಪಾಯಿ ಲೂಟಿ!!

ಮೊನ್ನೆ ಸರ್ಕಾರ ಜನರಿಗೆ ಏನೋ ದೊಡ್ಡ ಉಪಕಾರ ಮಾಡಿದಂತೆ ಪೆಟ್ರೋಲ್ ದರವನ್ನು ಎರಡು ರೂಪಾಯಿಯಷ್ಟು ಇಳಿಸಿದೆ. ಇದರಿಂದಾಗಿ ಹಲವರು ಸರ್ಕಾರವನ್ನು ಹೊಗಳಲು ಪ್ರಾರಂಭಿಸಿದ್ದಾರೆ. ಆದರೆ ದರವನ್ನು ಕೇವಲ ಎರಡು ರುಪಾಯಿಯಷ್ಟು ಮಾತ್ರ ಇಳಿಸಿದ್ದರಲ್ಲಿ ದೊಡ್ಡ ಷಡ್ಯಂತ್ರವೇ ಅಡಗಿದೆ. ಈ ಹಿಂದೆ ಪೆಟ್ರೋಲ್ ಬೆಲೆ ಏರಿಸುವುದಕ್ಕೆ ಸರ್ಕಾರ ಕೊಟ್ಟ ಕಾರಣ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಏರಿದ್ದು.



2004ರಲ್ಲಿ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಾಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಬ್ಯಾರೆಲ್‌ಗೆ 50 ಡಾಲರ್ ಇದ್ದದ್ದು ಕಳೆದ ಎರಡು ವರ್ಷಗಳಲ್ಲಿ ಬ್ಯಾರೆಲ್‌ಗೆ ೮೦ ಡಾಲರ್ ನಷ್ಟು ಏರಿತು. ಅದನ್ನೇ ನೆಪ ಮಾಡಿ ಯುಪಿಎ ಸರ್ಕಾರ ಪೆಟ್ರೋಲ್ ಬೆಲೆಯನ್ನು ಕನಿಷ್ಠ ಐದು ಬಾರಿ ಏರಿಸಿತು. 2004ರಲ್ಲಿ ಲೀಟರ್‌ಗೆ 25 ರೂಪಾಯಿ ಯಷ್ಟಿದ್ದ ಪೆಟ್ರೋಲ್ ಬೆಲೆ ಈಗ ಲೀಟರ್‌ಗೆ ೫೫ ರೂಪಾಯಿಗಳಷ್ಟಾಗಿದೆ. ಅಂದರೆ 30 ರೂಪಾಯಿಗಳಷ್ಟು ಏರಿಕೆ. ಸರಿ ಆಗಂತೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಏರಿಕೆಯ ನೆಪವಿತ್ತು. ಈಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 80 ಡಾಲರ್ ಇದ್ದದ್ದು 50 ಡಾಲರ್‌ಗೆ ಇಳಿದಿದೆ. ಅಂದರೆ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಾಗ ಏನು ಬೆಲೆಯಿತ್ತೋ ಅದೇ ಬೆಲೆಗೆ ಇಳಿದಿದೆ.

ಹಾಗಿದ್ದಲ್ಲಿ ಪೆಟ್ರೋಲ್ ಬೆಲೆಯನ್ನು ಅಷ್ಟರಮಟ್ಟಿಗೆ ಇಳಿಸಬೇಕಲ್ಲವೇ? ಆದರೆ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 30 ರುಪಾಯಿಯಷ್ಟು ಇಳಿಸಬಹುದಾಗಿದ್ದರೂ ಕೇವಲ ಎರಡು ರುಪಾಯಿಯಷ್ಟು ಮಾತ್ರ ಇಳಿಸುತ್ತಿರುವುದೇಕೆ?

ಅದಕ್ಕೊಂದು ಕಾರಣವಿದೆ. ಈಗ ಪೆಟ್ರೋಲ್ ವಿತರಣೆಯಲ್ಲಿ ರಿಲಯನ್ಸ್, ಶೆಲ್‌ನಂತಹ ಹಲವಾರು ಬಹುರಾಷ್ಟ್ರೀಯ ಕಂಪನಿಗಳಿವೆ. ಇವೆಲ್ಲ ಕಡಿಮೆ ಬೆಲೆಯಲ್ಲಿ ಕಚ್ಚಾ ತೈಲವನ್ನು ಕೊಂಡು ಅಧಿಕ ಬೆಲೆಗೆ ಭಾರತದ ಗ್ರಾಹಕನಿಗೆ ಮಾರಿ ಕೋಟಿ ಕೋಟಿ ಲಾಭ ಸೂರೆಗೈಯುವ ಹುನ್ನಾರ ಹೂಡಿವೆ. ಈಗ ಪೆಟ್ರೋಲ್ ಬೆಲೆ ಇಳಿಸಿದರೆ ಅಷ್ಟರಮಟ್ಟಿಗೆ ಅವರ ಲಾಭ ದರ ಕುಸಿಯುತ್ತದಲ್ಲ.. ಅಂದರೆ ಪ್ರತಿ ಲೀಟರ್‌ಗೆ ನಾವು ಕೊಡುವ 55 ರೂಪಾಯಿಯಲ್ಲಿ 30 ರೂಪಾಯಿಗಳನ್ನು ನಮ್ಮಿಂದ ಸರ್ಕಾರ ವಿನಾಕಾರಣ ಅಥವಾ ರಿಲಯನ್ಸ್ ಮತ್ತು ಶೆಲ್‌ನಂತಹ ಕಂಪನಿಗಳಿಗೆ ಕಕ್ಕಿಸುವಂತೆ ಮಾಡುತ್ತಿದೆ. ಈಗಲೂ ಭಾರತದ ಪ್ರಮುಖ ವಿತರಕರು ಸರ್ಕಾರಿ ಕಂಪನಿಗಳೇ ಆಗಿದ್ದರೂ ಅಲ್ಲಿ ಶೇಖರವಾಗುವ ಅಧಿಕ ಹಣ ಸರ್ಕಾರದ ಇತರ ಕಲ್ಯಾಣ ಖರ್ಚುಗಳಿಗಂತೂ ದಕ್ಕುವುದಿಲ್ಲ. ಈಗ ಅದರಲ್ಲೂ ಈ ಬಹುರಾಷ್ಟ್ರೀಯ ಕಂಪನಿಗಳು ಪರೋಕ್ಷ ಪಾಲನ್ನು ಕೇಳುತ್ತಿವೆ. ನಿಧಾನವಾಗಿ ಇಡೀ ಪೆಟ್ರೋಲಿಯಂ ಕ್ಷೇತ್ರವೇ ಖಾಸಗೀಕರಣದೆಡೆ ನಡೆದಿರುವಾಗ ಆ ಕ್ಷೇತ್ರದಲ್ಲಿ ಈ ಅಧಿಕ ದರದಿಂದ ಸಂಚಿತವಾಗುವ ನಿಧಿ ಜನರಿಗಂತೂ ದಕ್ಕುವುದಿಲ್ಲ..

ಆದ್ದರಿಂದಲೇ ಇದು ಎರಡು ರೂಪಾಯಿ ಇಳಿಕೆಯಲ್ಲ..ಬದಲಿಗೆ 28 ರೂಪಾಯಿ ಲೂಟಿ..!!

ಕಾವೇರಿ ಬಂದ್‌ಗೆ ಚಡ್ಡಿಗಳ ಕರಾವಳಿ ಬಂದ್ ಆಗಲಿಲ್ಲವೇಕೆ?

ಭಾರ್ಯಕ

- ಶಿವಸುಂದರ್-

ಕಾವೇರಿ ತೀರ್ಪಿನಿಂದಾಗಿರುವ ಅನ್ಯಾಯದ ಬಗ್ಗೆ ಇಡೀ ಕರ್ನಾಟಕದ ಜನ ಕುದಿಯುತ್ತಿದ್ದಾರೆ. ಇದರಲ್ಲಿ ಕಾವೇರಿ ನೀರಿನ ಋಣವಿರುವ ದಕ್ಷಿಣ ಮೈಸೂರು ಪ್ರಾಂತ್ಯದ ಜನತೆ ಮಾತ್ರವಲ್ಲದೆ ದೂರದ ರಾಯಚೂರು ಬೆಳಗಾವಿಯಲ್ಲೂ ಜನ ಸ್ಪಂದಿಸುತ್ತಿದ್ದಾರೆ, ಬಂದ್ ಮಾಡಿದ್ದಾರೆ. ಅದು ಅವರ ದೊಡ್ಡ ಗುಣ. ವಾಸ್ತವವಾಗಿ ಉತ್ತರ ಕರ್ನಾಟಕದ ರೈತರ ಜೀವನಾಡಿಯಾಗಿರುವ ಕೃಷ್ಣಾ ನದಿ ನೀರಿನ ಹಂಚಿಕೆಯಲ್ಲಿ ಕಾವೇರಿಯಷ್ಟೇ



ಅನ್ಯಾಯ ನಡೆದಾಗ ದಕ್ಷಿಣ ಪ್ರಾಂತ್ಯ ಇಷ್ಟೇ ಒಗ್ಗಟ್ಟಿನಿಂದ ಸಹಕಾರ ತೋರಿರಲಿಲ್ಲ.

ಆದರೆ ಕಾವೇರಿಯು ಕರ್ನಾಟಕದ ಅನನ್ಯತೆಯ ಸಂಕೇತವೂ ಆಗಿಬಿಟ್ಟಿರುವುದರಿಂದ ಕಾವೇರಿ ತೀರ್ಪಿನಲ್ಲಿ ಆದ ಅನ್ಯಾಯವನ್ನು ಕನ್ನಡಿಗ-ಕರ್ನಾಟಕ ಎಂಬ ಅನನ್ಯತೆಯಲ್ಲಿ ಗುರುತಿಸಿಕೊಳ್ಳುವ ಪ್ರತಿಯೊಬ್ಬರೂ ಅನುಭವಿಸುತ್ತಿದ್ದಾರೆ, ಪ್ರತಿಭಟಿಸುತ್ತಿದ್ದಾರೆ. ಸಹಜವಾಗಿ ಈ ಎಲ್ಲಾ ಕಡೆಗಳಲ್ಲೂ ಹೋರಾಟದ ಮುಂಚೂಣಿಯಲ್ಲಿ ಅಲ್ಲಿನ ರಾಜಕೀಯ ಮುಖಂಡರುಗಳೇ ಇದ್ದಾರೆ. ಮಂಡ್ಯ ಜಿಲ್ಲೆ ಒಂದನ್ನು ಹೊರತುಪಡಿಸಿ? ಅಲ್ಲಿ ಜನರೇ ಹೋರಾಟದ ಮುಂಚೂಣಿಯಲ್ಲಿ ಇದ್ದಾರೆ. ಅದು ಬೇರೆ ಮಾತು ಬಿಡಿ. ಆದರೆ ರಾಜ್ಯಕ್ಕಾದ ಅನ್ಯಾಯವನ್ನು ಪ್ರತಿಭಟಿಸುವಲ್ಲಿ ರಾಜಕೀಯ ಪಕ್ಷಗಳ ಮುಖಂಡರು ಪಾತ್ರ ವಹಿಸಬೇಕು. ಇದು ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಅಗತ್ಯ ಮತ್ತು ಅನಿವಾರ್ಯ ಕೂಡಾ..

ಆದರೆ ನಮ್ಮ ಕರಾವಳಿಗೆ ಇದು ಯಾವುದೂ ಅನ್ವಯವಾಗುವುದಿಲ್ಲ. ಏಕೆಂದರೆ ಜನರಲ್ಲಿ ಪ್ರಶ್ನೆ ಮೂಡಿಸಬೇಕಾದ ಅಲ್ಲಿನ ರಾಜಕೀಯ ನಾಯಕರುಗಳ ಪ್ರಜ್ಞೆಯಲ್ಲಿ ಅದರಲ್ಲೂ ಅಲ್ಲಿಂದ ಹನ್ನೆರಡು ಶಾಸಕರನ್ನು ಕಳಿಸಿರುವ ಹಿಂದೂತ್ವವಾದಿ ನಾಯಕರುಗಳಲ್ಲಿ ಕಾವೇರಿ ಪ್ರಜ್ಞೆಯೇ ಇಲ್ಲ, ಅಲ್ಲಿರುವುದೆಲ್ಲಾ ಸಿಂಧೂ ಪ್ರಜ್ಞೆ ಮತ್ತು ಹಿಂದೂ ಪ್ರಜ್ಞೆ! ಈ ಚಡ್ಡಿಗಳು ಕರ್ನಾಟಕದ ಹಿತಾಸಕ್ತಿಯನ್ನು ಕಿಂಚಿತ್ತೂ ಕಾಯುವುದಿಲ್ಲ, ಈಗಲಾದರೂ ಕರ್ನಾಟಕದ ಜನ ಇದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅದರಲ್ಲೂ ಕರ್ನಾಟಕದ ರಕ್ಷಣೆಗೆ ವೇದಿಕೆಗಳನ್ನು ರಚಿಸಿಕೊಂಡಿರುವವರು!!

ಬೆಂಗಳೂರು: ಭಾರತ ಸುಂದರಿಯಂತೆ..!

ವಿಶ್ವಸುಂದರಿ ಸ್ಪರ್ಧೆಯಲ್ಲಿ ಹೆಣ್ಣುಮಕ್ಕಳು ತಾವೇ ಹೆಚ್ಚು ಸುಂದರಿಯೆಂದು ತೋರಿಸಲು ವರ್ಷವಿಡೀ ಹರಸಾಹಸ ಮಾಡುತ್ತಾರೆ. ಮಾಡಬಾರದ್ದನ್ನು ಮಾಡುತ್ತಾರೆ. ತಮ್ಮ ನೈಜ ರೂಪವನ್ನು ಈಗಾಗಲೇ ಮಾರುಕಟ್ಟೆಯಲ್ಲಿ ಆರ್ಡರ್ ಮಾಡಿರುವಂತೆ ತಿದ್ದಿ ತೀಡಿಕೊಂಡು ಸರಕುಗಳಾಗುತ್ತಾರೆ. ಆದರೆ ಈ ಸೌಂದರ್ಯದ ಮಾನದಂಡಗಳನ್ನು ನಿಗದಿ ಮಾಡುವವರು ಯಾರು? ಹೆಣ್ಣನ್ನು ಭೋಗಿಸುವ ದೃಷ್ಟಿಯಿಂದ ವಿಟ ಮನಸ್ಸಿನ ಗಂಡುಲೋಕ! ಅಂದರೆ ಹೆಣ್ಣು ತನ್ನನ್ನು, ತನ್ನತನವನ್ನು ಮಾರಿಕೊಂಡು ಗಂಡುವಿಟ ಮನಸ್ಸಿಗೆ ತಕ್ಕಂತೆ ಪುನರ್ ರಚಿಸಿಕೊಳ್ಳಬೇಕು..




ಈಗ ಈ ಜಾಗತೀಕರಣದ ಕಾಲಘಟ್ಟದಲ್ಲಿ ಬಡದೇಶಗಳಿಗೂ, ಅಲ್ಲಿನ ನಗರಗಳಿಗೂ ಪಶ್ಚಿಮದ ಕಾರ್ಪೊರೇಟ್ ವಿಟರು ಇದೇ ಸ್ಪರ್ಧೆಯನ್ನು ಒಡ್ಡಿದ್ದಾರೆ. ಯಾವ ನಗರ ಮತ್ತು ದೇಶ ಈ ವಿಟ ಕಾರ್ಪೊರೇಟ್‌ಗಳ ಬಂಡವಾಳ ಭೋಗಕ್ಕೆ ಮತ್ತು ಲಾಭದ ವೈಭೋಗಕ್ಕೆ ತಕ್ಕ ಹಾಗೆ ಪುನರ್ ಸಜ್ಜುಗೊಳ್ಳುತ್ತವೆಯೋ ಅಂಥ ನಗರಗಳನ್ನು ಅತ್ಯುತ್ತಮ ನಗರವೆಂದು ಕಿರೀಟ ತೊಡಿಸುತ್ತಿದ್ದಾರೆ. ಅಂದಹಾಗೆ ಈ ವಿಶ್ವದ ಬಹುರಾಷ್ಟ್ರೀಯ ಕಂಪನಿಗಳೆಲ್ಲಾ ಪ್ರಾಯೋಜಿಸಿ ವಿಶ್ವ ಬ್ಯಾಂಕ್ ಆಯೋಜಿಸಿದ ಈ ನಗರಸುಂದರಿ ಸ್ಪರ್ಧೆಯಲ್ಲಿ ಹೈದರಾಬಾದಿನ ನಂತರದ ಎರಡನೇ ಅತ್ಯುತ್ತಮ ಸ್ಥಾನ ಬೆಂಗಳೂರಿಗಂತೆ.. ಈ ಹೆಮ್ಮೆ ಅನುಭವಿಸುವುದಕ್ಕೆ ಮುಂಚೆ ಸ್ವಲ್ಪ ಅದರ ಅರ್ಥವೇನೆಂದು ನೋಡೋಣ..ಬೆಂಗಳೂರು ಏಕೆ ಉತ್ತಮವೆಂದರೆ ಇಲ್ಲಿ ನಗರದ ಎಲ್ಲಾ ಸೌಕರ್ಯಗಳನ್ನು ಇಲ್ಲಿನ ಬಡ ಮತ್ತು ಮಧ್ಯಮ ವರ್ಗದವರಿಗಿಂತ ಹೆಚ್ಚಾಗಿ ಈ ವಿದೇಶಿ ಹಣ ಹೂಡಿಕೆದಾರರ ಪರವಾಗಿ ಪುನರ್ರಚಿಸಲಾಗುತ್ತಿದೆ. ಅಲ್ಲದೆ ಬೆಂಗಳೂರಿಗರಿಗೆ ಮತ್ತು ಕನ್ನಡಿಗರಿಗೆ ಕಾವೇರಿ ನೀರು ಇಲ್ಲದಿದ್ದರೂ ನಮಗೆ ದಕ್ಕಿರುವ 270 ಟಿಎಂಸಿ ನೀರಿನಲ್ಲಿ ಈ ಕಾರ್ಪೊರೇಟ್ ಧಣಿಗಳ ವಾಸಕ್ಕೆ, ಕೈಗಾರಿಕೆಗೆ ಮತ್ತು ಮುಂದೆ ಬರಲಿರುವ ಕಾರ್ಪೊರೇಟ್ ಕೃಷಿಗೆ ಎಂದು ಹಲವಾರು ಟಿಎಂಸಿ ನೀರನ್ನು ಕಾದಿರಿಸಲಾಗಿದೆ. ಇಲ್ಲಿ ಬಂಡವಾಳ ಹೂಡಬೇಕೆಂದರೆ ಅವರಿಗೆ ಇಲ್ಲಿನ ಕಾನೂನು ಪಾಲಿಸಬೇಕೆಂಬ ಅಥವಾ ಪರಿಸರ ಹಾಳು ಮಾಡಬಾರದೆಂಬ ಅಥವಾ ಇಲ್ಲಿನ ನೀರು, ನೆಲ ಬಳಸಿದ್ದಕ್ಕಾಗಿ ತೆರಿಗೆ ಕಟ್ಟಬೇಕೆಂಬ ಕಡ್ಡಾಯವೂ ಇಲ್ಲದಂತೆ ಮಾಡುತ್ತಿರುವುದಕ್ಕೆ ಬೆಂಗಳೂರು ಭಾರತ ಸುಂದರಿಯಾಗಿದೆ.. ಅಂದರೆ ಇಲ್ಲಿನ ಬೆಂಗಳೂರಿಗರ ಬದುಕನ್ನ ಮೂರಾಬಟ್ಟೆ ಮಾಡಿ ಕುರೂಪಗೊಳಿಸುತ್ತಿರುವುದಕ್ಕಾಗಿ ಬೆಂಗಳೂರಿಗೆ ಭಾರತ ಸುಂದರಿ ಪ್ರಶಸ್ತಿ!

ವಾರದ ವಿವೇಕ

"ಕೆಲವರು ನಮ್ಮನ್ನು ಹಿಂದೂ ವಿರೋಧಿಗಳೆಂದು ಹೇಳುತ್ತಾರೆ. ಅತ್ಯಂತ ಜವಾಬ್ದಾರಿಯಿಂದ ಒಂದು ಮಾತನ್ನು ನಾವು ಹೇಳುತ್ತಿದ್ದೇವೆ. ನಾವು ಹಿಂದೂ ವಿರೋಧಿಗಳಲ್ಲ, ಹಿಂದೂತ್ವ ಮತ್ತು ಹಿಂದೂ ಧರ್ಮ ಒಂದೇ ಅಲ್ಲ, ಹಿಂದೂತ್ವವೆಂಬುದು ದ್ವೇಷವೇ ಮೈವೆತ್ತಿರುವ ಅತ್ಯಂತ ಹಿಂಸಾತ್ಮಕ ಸಿದ್ಧಾಂತವಾಗಿದೆ. ಹಿಂದೂ ಧರ್ಮದ ಶತ್ರುಗಳು ಸಂಘಪರಿವಾರವೇ. ನಮ್ಮ ಬಗ್ಗೆ ಹೇಳುವುದಾದರೆ ನಾವು ಮುಸ್ಲಿಮರೊಂದಿಗೆ ಮಾತ್ರವಲ್ಲ ಎಲ್ಲಾ ದಲಿತ ಮತ್ತು ಹಿಂದುಳಿದ ಮತ್ತು ದಮನಕ್ಕೊಳಗಾದ ಎಲ್ಲಾ ಶೋಷಿತರೊಂದಿಗೂ ಇರುತ್ತೇವೆ"

- ಇ. ಅಬೂಬಕ್ಕರ್, ಅಧ್ಯಕ್ಷರು, ಪಾಪುಲರ್ ಫ್ರಂಟ್ ಆಫ್ ಇಂಡಿಯಾ (*PFI*)

No Comments



"ಮಗನ ಕುರ್ಚಿ ಉಳಿಸುವ ಏಕೈಕ ಕಾರಣಕ್ಕೆ, ದೇವೇಗೌಡರು ನ್ಯಾಯಾಧಿಕರಣದ ಅಂತಿಮ ಆದೇಶಕ್ಕೆ ಒಪ್ಪಿಕೊಂಡಿದ್ದಾರೆ."

-ಎಚ್. ವಿಶ್ವನಾಥ್, ಮಾಜಿ ಸಚಿವರು



"ಬಸ್ ಟೈರ್ ಮತ್ತು ಇತರ ಬಿಡಿಭಾಗಗಳ ಬೆಲೆ ಹೆಚ್ಚಿರುವುದರಿಂದ ಡೀಸೆಲ್ ದರ ಇಳಿದರೂ ಬಸ್ ಪ್ರಯಾಣದ ದರ ಇಳಿಸುವ ಬಗ್ಗೆ ಸದ್ಯಕ್ಕೆ ಯೋಚಿಸುತ್ತಿಲ್ಲ."

-ಸಾರಿಗೆ ಸಚಿವ ಚಲುವರಾಯಸ್ವಾಮಿ

"ಆರ್ಥಿಕ ವ್ಯವಸ್ಥೆಯನ್ನು ಗಮನಿಸಿ ನಂತರ ಸಾರಾಯಿ ನಿಷೇಧದ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತೇವೆ"

- ಯಡಿಯೂರಪ್ಪ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಮಂತ್ರಿ ಪದವಿ ಹೋಗಿದ್ದಕ್ಕೆ ನನಗೇನೂ ಬೇಸರವಿಲ್ಲ"

-ಅಂಬರೀಶ್

ಉಲ್ಟಾ-ಪಲ್ಟಾ


"ವಿಜ್ಞಾನ ಹಾಗೂ ತಂತ್ರಜ್ಞಾನದ ವಿಷಯಗಳನ್ನು ವಿದ್ಯಾರ್ಥಿಗಳು ಕೇವಲ ಓದಿನ ವಿಷಯವಾಗಿ ಪರಿಗಣಿಸದೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು" !!!

- ಕಟ್ಟಾ ಸುಬ್ರಹ್ಮಣ್ಯನಾಯ್ಡು ಬಿಜೆಪಿ ಮಂತ್ರಿ

"ಧರ್ಮ ಮನುಷ್ಯನ ಮೂಲಸೆಲೆ. ಧರ್ಮವಿಲ್ಲದ್ದು ಜೀವನವಿಲ್ಲ" !!!

-ಡಿ. ಕೆ. ಶಿವಕುಮಾರ್, ಕಾಂಗ್ರೆಸ್ ಮುಖಂಡ

ವಾರದ ಸತ್ಯ



"ನ್ಯಾಯಾಂಗದ ಅನಿರ್ಬಂಧಿತ ಕಾರ್ಯಾಚರಣೆ ಯಿಂದ ಶಾಸಕಾಂಗ ಕಾರ್ಯಾಂಗ ಕುಸಿದಿದೆ. ಇದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆಯಾಗುತ್ತಿದೆ"

-ಪ್ರೊ. ರವಿವರ್ಮ ಕುಮಾರ್, ಹಿರಿಯ ನ್ಯಾಯವಾದಿ

ವಾರದ ಘೋಷಣೆ



"ಒಂದು ವೇಳೆ ಜೂನ್ ವೇಳೆಗೆ ಸಂವಿಧಾನಿಕ ಅಸೆಂಬ್ಲಿ ರೂಪುಗೊಳ್ಳದಿದ್ದರೆ ಏಪ್ರಿಲ್ ವೇಳೆಗೆ ನೇಪಾಳವನ್ನು ನಾವೇ ಪ್ರಜಾತಾಂತ್ರಿಕ ಗಣ ರಾಜ್ಯವೆಂದು ಘೋಷಿಸಲು ಸಿದ್ಧರಾಗೋಣ"

-ಪ್ರಚಂಡ, ನೇಪಾಳ ಮಾವೋವಾದಿ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ

ವಾರದ ಅಸಂಬದ್ಧ

"ಕಾವೇರಿ ಬಂದ್‌ನಿಂದ ರಾಜ್ಯಕ್ಕೆ 500ಕೋಟಿ ರು. ನಷ್ಟವಾಗಿದೆ. ಅಷ್ಟು ದುಡ್ಡಿದ್ದಿದ್ದರೆ 20 ಫ್ಲೈಓವರ್‌ಗಳನ್ನೂ, ಹಲವಾರು ಹೈಟೆಕ್ ಪಾರ್ಕಿಂಗ್ ಸ್ಥಳಗಳನ್ನೂ ನಿರ್ಮಿಸಬಹುದಿತ್ತು."

ಕಾವೇರಿ ಬಂದ್ ಬಗ್ಗೆ *Times Of India* ಪತ್ರಿಕೆಯ ವ್ಯಾಖ್ಯಾನ

ವಾರದ ಪ್ರಹಸನ



"ಅಂಬರೀಶ್ ರಾಜೀನಾಮೆಗೆ ಒತ್ತಾಯ"

- ಮಂಡ್ಯ ಜಿಲ್ಲೆ ಗ್ರಾಮಸ್ಥರು, ರಾಜೀನಾಮೆ ನೀಡುವ ಮುನ್ನ.

"ಅಂಬರೀಶ್ ರಾಜೀನಾಮೆ ಹಿಂತೆಗೆದುಕೊಳ್ಳಲು ಒತ್ತಾಯ"

- ಮಂಡ್ಯ ಜಿಲ್ಲೆ ಗ್ರಾಮಸ್ಥರು ರಾಜೀನಾಮೆ ನೀಡಿದ ನಂತರ

ನಿಮಗೆ 'ನೀಲು'ವಿನ ಪ್ರಥಮ ಅಪ್ಪುಗೆ

ಅಪ್ಪನ ಸಾಹಿತ್ಯವನ್ನು ಇಷ್ಟಪಡುವವರಿಗೆಲ್ಲಾ ಇಲ್ಲೊಂದು ಸಂತೋಷದ ಸುದ್ದಿ. ಇದೇ ಮಾರ್ಚ್ 8ರಂದು 'ನೀಲು' ಹೆಸರಿನಲ್ಲಿ ಅಪ್ಪ ಬರೆಯುತ್ತಿದ್ದ ಚುಟುಕವನಗಳನ್ನು ಪ್ರಥಮ ಬಾರಿಗೆ ಪುಸ್ತಕ ರೂಪದಲ್ಲಿ ತರುತ್ತಿದ್ದೇವೆ.


ಅಪ್ಪ ಹೋಗುವವರೆಗೂ ಈ 'ನೀಲು' ಯಾರೆಂಬುದು ಹೆಚ್ಚು ಜನರಿಗೆ ಗೊತ್ತೇ ಇರಲಿಲ್ಲ (ಅಪ್ಪನ ಹಸ್ತಾಕ್ಷರ ಬಲ್ಲವರ ಹೊರತಾಗಿ). ಆದರೂ ಪ್ರತಿ ವಾರ ಪತ್ರಿಕೆಯ ಹಲವಾರು ಮೂಲೆಗಳಲ್ಲಿ ಪ್ರತ್ಯಕ್ಷಳಾಗುತ್ತಿದ್ದ ನೀಲು ತನ್ನ ಸೂಕ್ಷ್ಮ ಬರಹಗಳಿಂದ ಎಲ್ಲರನ್ನೂ ಚಕಿತಗೊಳಿಸುತ್ತಿದ್ದಳು. 'ಆಕೆ' ಓದುಗರಲ್ಲಿ ಎಂತಹ ಪ್ರಭಾವ ಬೀರಿದ್ದಳೆಂದರೆ ಅವರ ಮನಸ್ಸನ್ನು ತಾಕಿದ, ಎಂದೋ ಪ್ರಕಟವಾದ ನಾಲ್ಕೈದು ಸಾಲಿನ ಪದ್ಯಗಳನ್ನು ಇಂದಿಗೂ ನೆನಪಿನಲ್ಲಿ ಇಟ್ಟುಕೊಂಡಿರುವವರಿದ್ದಾರೆ. (ಅಂಥವರಲ್ಲಿ ಹಲವಾರು ನೀಲು ಪದ್ಯಗಳನ್ನು ನೆನಪಿನಿಂದಲೇ ಹೇಳಬಲ್ಲ ನಟ ಪ್ರಕಾಶ್ ರೈ ಮತ್ತು ಜಯಂತ್ ಕಾಯ್ಕಿಣಿ ಸೇರಿದ್ದಾರೆ!)

ಹಿರಿಯ ಕವಿ ಚೆನ್ನವೀರ ಕಣವಿಯವರನ್ನೂ 'ನೀಲು' ಎಷ್ಟು ತಾಕಿದ್ದಳೆಂದರೆ

"ಏನಮ್ಮ ನೀಲು
ನೀ ಮೂಲ್ಯಾಗಿಟ್ಟ ಬಣ್ಣದ ಕೋಲು
ತಿವಿದರೆ ಮುಟ್ಟುಕೋಬೇಕು
ಸೊಂಟ, ಕೈ, ಕಾಲ..."

ಎಂಬ ಸಾಲುಗಳಿಂದ ಪ್ರಾರಂಭವಾಗುವ 'ನೀಲುವಿಗೊಂದು ಶಾಲು' ಎಂಬ ಪದ್ಯವನ್ನೇ ಬರೆದಿದ್ದರು. ಅಂದಹಾಗೆ ಈ ಪದ್ಯವೇ ಅಪ್ಪನ 'ನೀಲು' ಪದ್ಯ ಪುಸ್ತಕದ ಬೆನ್ನುಡಿ ಆಗುತ್ತಿದೆ.

ಇನ್ನು ಅಪ್ಪನ ಮಿತ್ರರಾದ ಕಿ.ರಂ. ನಾಗರಾಜರವರು ನೀಲು ಪದ್ಯಗಳನ್ನು ಮಹಾಕಾವ್ಯಗಳೆಂದೇ ಬಣ್ಣಿಸುತ್ತಾರೆ. "ಸುಮಾರು ಎರಡು ದಶಕಗಳ ಕಾಲ ಪ್ರತಿ ವಾರ ಉತ್ತಮವಾದ ಐದಾರು ಕವನಗಳನ್ನು ಬರೆಯುವುದು ಸಲೀಸಾದ ಮಾತಲ್ಲ. ನಮ್ಮ ಹಲವಾರು ಸಾಹಿತಿಗಳಿಗೆ ಅಸಾಧ್ಯವಾದದ್ದನ್ನು ಲಂಕೇಶ್ ಸಾಧಿಸಿದ್ದಾರೆ" ಎಂದೇ ಹೇಳುವ ನಾಗರಾಜರವರು ಈ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಿದ್ದಾರೆ.



ಆದರೆ ನಮ್ಮ ಎದುರು ಒಂದು ಸಮಸ್ಯೆ ಇದೆ. ಅದೇನೆಂದರೆ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಅಪ್ಪ ಸುಮಾರು ಐದು ಸಾವಿರಕ್ಕೂ ಹೆಚ್ಚು ನೀಲುಗಳನ್ನು ಬರೆದಿದ್ದಾರಲ್ಲದೆ, ಅವೆಲ್ಲವೂ ಉತ್ತಮವಾಗಿದ್ದು ಆಯ್ಕೆ ಎಂಬ ಪ್ರಸ್ತಾಪವೂ ನಮ್ಮ ಮುಂದಿಲ್ಲ, ಅವುಗಳನ್ನು ಬೇರೆ ಬೇರೆ ವಿಷಯಗಳ ಅಡಿ ವಿಭಜಿಸುವುದೂ ಅಸಾಧ್ಯವಾಗಿದೆ. ಹೀಗಿರುವಾಗ ಯಾವುದನ್ನೂ ಬಿಡುವುದು ಬೇಡ ಅಂತ ಮೊದಲ ನಾಲ್ಕು ವರ್ಷಗಳಲ್ಲಿ (1981ರಿಂದ-85ರವರೆಗೆ) ಅಪ್ಪ ಬರೆದ ನೀಲು ಕವನಗಳನ್ನು ಮಾತ್ರ ಈಗ ತರುತ್ತಿದ್ದೇವೆ. ಅದೇ ಇನ್ನೂರು ಪುಟಗಳನ್ನು ದಾಟುತ್ತಿದೆ. ಹೀಗೆ ನಾಲ್ಕೈದು ವರ್ಷಗಳ ಕಾಲ ಬರೆದ ನೀಲು ಕವನಗಳನ್ನು ಬಿಡಿಬಿಡಿಯಾಗಿ ತರುವುದು ನಮ್ಮ ಉದ್ದೇಶವಾಗಿದ್ದು ಕೊನೆಗೆ ಓದುಗರಿಗೆ ಒಟ್ಟು ಐದು 'ನೀಲು' ಕವನ ಪುಸ್ತಕಗಳು ಲಭ್ಯವಾಗುತ್ತವೆ ಎಂದು ಅಂದಾಜಿಸುತ್ತಿದ್ದೇನೆ.

ಅಪ್ಪನ 'ನೀಲು' ಮನಸ್ಸನ್ನು ಬೆಚ್ಚಗಾಗಿಸುತ್ತಾಳೆ, ಎಚ್ಚರಿಸುತ್ತಾಳೆ, ಚಕಿತಗೊಳಿಸುತ್ತಾಳೆ, ರೋಮಾಂಚನ ಮೂಡಿಸುತ್ತಾಳೆ. ನನಗಿಷ್ಟವಾದ ಒಂದೆರಡು ನೀಲುಗಳನ್ನು ಇಲ್ಲಿ ನೀಡುತ್ತೇನೆ.

ಬಿಸಿಲಿನ ಝಳಕ್ಕೆ
ಇನಿಯನ ಬೆನ್ನಿನ ಬೆವರ ಮೇಲೆ
ಹೆಸರು ಬರೆವ ತರುಣಿಯ
ಮೂಕ ಸಂತಸ ಎಷ್ಟು ಸೊಗಸು

******

ಹಠಾತ್ತನೆ ಬೆಳಗುವೆ
ಎಲ್ಲೆಲ್ಲೂ ಉಲ್ಲಾಸ ಹರಡುವೆ
ಹಾಗೆಯೇ ಮರೆಯಾಗಿ
ಸಾಯುವೆ
ನನ್ನ ಸಹಜೀವಿ ಮಿಣುಕು ಹುಳವೇ

******

ಮುಪ್ಪು ಸಾವಿನ ತೀವ್ರ ಭಯವಿಲ್ಲದ
ದುಡಿವ ಬಡವನಾಗಿ ಜೀವಿಸತೊಡಗಿದ
ಖ್ಯಾತ ಟಾಲ್‌ಸ್ಟಾಯ್ ಕಂಡುಕೊಂಡದ್ದು,
ಸಾವಿನ ಭಯವೇ
ಎಲ್ಲ ಕಲೆಗಳ, ಚಿಂತನೆಗಳ ಸ್ಫೂರ್ತಿ

ಅಪ್ಪನ 'ನೀಲು'ಗಳನ್ನು ಪ್ರೀತಿಸುವವರಿಗೆಲ್ಲ ಮಾರ್ಚ್ 8ರಂದು ಆಕೆಯ ಮೊದಲ ಅಪ್ಪುಗೆ.....

* * * * *

ಮೊನ್ನೆ ಬೆಂಗಳೂರಿನಲ್ಲಿ ಒಂದು ಅದ್ಭುತವಾದ ಕಾರ್ಯಕ್ರಮ ನಡೆಯಿತು. ಕನಿಷ್ಠ ಅರವತ್ತು ಸಾವಿರ ಜನ ಸೇರಿದ್ದ ಆ ಬೃಹತ್ ಸಭೆಯನ್ನು ನಮ್ಮ ಯಾವ ಮಾಧ್ಯಮಗಳೂ ನೆಟ್ಟಗೆ ವರದಿ ಮಾಡಿಲ್ಲವಾದ್ದರಿಂದ ಅದರ ಬಗ್ಗೆ ಇಲ್ಲೊಂದೆರಡು ಮಾತು ಹೇಳಲು ಆಶಿಸುತ್ತೇನೆ.


ಇತ್ತೀಚಿನವರೆಗೂ ದೇಶದೆಲ್ಲೆಡೆ ನಡೆದ ವಿರಾಟ ಹಿಂದೂ ಸಮಾಜೋತ್ಸವಗಳು ನಮ್ಮ ದಲಿತರಲ್ಲಿ, ಹಿಂದುಳಿದವರಲ್ಲಿ, ಅಲ್ಪಸಂಖ್ಯಾತರಲ್ಲಿ ಆತಂಕ ಹುಟ್ಟಿಸಿರುವ ಸಂದರ್ಭದಲ್ಲೇ ಪಾಪುಲರ್ ಫ್ರಂಟ್ ಆಫ್ ಇಂಡಿಯಾ ನಡೆಸಿದ 'ಎಂಪವರ್ ಇಂಡಿಯಾ' ಎಂಬ ಕಾರ್ಯಕ್ರಮ ಅದೇ ಶೋಷಿತ ವರ್ಗದ ಜನರಲ್ಲಿ ಭರವಸೆ, ನೆಮ್ಮದಿ ಮೂಡಿಸಿದ್ದು ಒಂದು ವಿಶೇಷ. ಇವತ್ತು ನಮ್ಮ ದೇಶದ ಬಹುಸಂಖ್ಯಾತ ದಲಿತ-ಅಲ್ಪಸಂಖ್ಯಾತ-ಅಂಚಿನಲ್ಲಿರುವ ಜನ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಎರಡು ದಿನಗಳ ಕಾಲ ಚಿಂತನ-ಮಂಥನ ನಡೆಸಿ ಮೂರನೇ ದಿನ ಈ ಬೃಹತ್ ಸಮ್ಮೇಳನವನ್ನು ಹಮ್ಮಿಕೊಳ್ಳಲಾಯಿತು. ತಮಿಳುನಾಡು, ಕೇರಳ ಮತ್ತು ಕರ್ನಾಟಕದ ವಿವಿಧ ಕಡೆಗಳಿಂದ ನೆರೆದಿದ್ದ ಸಾವಿರಾರು ಯುವಕರು (ಅವರಲ್ಲಿ ಹೆಚ್ಚಿನವರು ಮುಸಲ್ಮಾನರು) ಅಲ್ಪಸಂಖ್ಯಾತರ ಬಗ್ಗೆ ಮಾತನಾಡಿದಾಗ ತೋರಿಸಿದ್ದಷ್ಟೇ ಸ್ಫೂರ್ತಿ, ಉತ್ಸಾಹ, ದಲಿತರ ಬಗ್ಗೆ ಮಾತನಾಡಿದಾಗಲೂ ವ್ಯಕ್ತಪಡಿಸಿದರು. ಅಷ್ಟೇ ಅಲ್ಲ, ಅಮೆರಿಕದ ಸಾಮ್ರಾಜ್ಯಶಾಹಿ ಧೋರಣೆ, ಇಸ್ರೇಲ್ ಪ್ರಭುತ್ವದ ದುಮನಕಾರಿ ನೀತಿಯ ವಿರುದ್ಧವೂ ಸ್ಪಂದಿಸಿದರು.

ಕಂಡಹಾಗೆ



ಅದೊಂದು ಮುಸಲ್ಮಾನರ ಸಭೆ ಎಂದೇ ಭಾವಿಸಿ ನಿರ್ಲಕ್ಷಿಸಿದ ಮಾಧ್ಯಮಗಳಿಗೆ ಅವತ್ತು ಅವರೆಲ್ಲ ತೆಗೆದುಕೊಂಡ ನಿರ್ಣಯಗಳನ್ನಾ ಗಮನಿಸಿದಿದ್ದರೆ ಅಚ್ಚರಿ ಮೂಡಿಸುತ್ತಿದ್ದವು.

ಫ್ಯಾಸಿಸಂ ಮತ್ತು ಬ್ರಾಹ್ಮಣ್ಯದ ವಿರುದ್ಧ, ಆದರೆ ಸಮಾನತೆ, ನ್ಯಾಯ ಮತ್ತು ಭ್ರಾತೃತ್ವದ ಪರ ನಿಲುವು ತಾಳಿದ ಸಮ್ಮೇಳನದ ಅಂತ್ಯದಲ್ಲಿ ಈ ದೇಶವನ್ನು ಗುಲಾಮಗಿರಿಗೆ ಒಡ್ಡಿರುವ ವಸಾಹತುಶಾಯಿಯ



ವಿರುದ್ಧ; ದೇಶದ ಘೋಷಿತ ಜನತೆಯ ವಿಮೋಚನೆಯ ಪರ; ನ್ಯಾಯಾಂಗದಲ್ಲಿ ಹೆಚ್ಚುತ್ತಿರುವ ಭ್ರಷ್ಟತೆಯ ವಿರುದ್ಧ; ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ಪ್ರಜಾತಾಂತ್ರಿಕ ಮಾನದಂಡ ಇಲ್ಲದಿರುವ ವಿರುದ್ಧ ನಿರ್ಣಯಗಳನ್ನು ಅಂಗೀಕರಿಸಿದರು.

ಸಂಕ್ಷಿಪ್ತವಾಗಿ ಹೇಳುವುದಾದರೆ ಅಂದಿನ ಸಭೆ ನಮ್ಮ ಸಂವಿಧಾನದಲ್ಲಿರುವ ಸಮಾನತೆ, ಜಾತ್ಯತೀತತೆ, ಸಹಬಾಳ್ವೆಯ ಆಶಯಗಳನ್ನೇ ಎತ್ತಿಹಿಡಿದಿತ್ತು. ಆದರೆ ನಮ್ಮ ಪೊಲೀಸರು ಬೀದಿ ಬೀದಿಗಳಲ್ಲಿ ವಿಷ ಕಕ್ಕುವ ಹಿಂದೂ ಸಮಾಜೋತ್ಸವ ಆಚರಣೆಗೆ ಯಾವ ಹಿಂಜರಿಕೆಯೂ ಇಲ್ಲದೆ ಅನುಮತಿಗಳನ್ನು ನೀಡಿ, ಈ ಒಂದು ಸಭೆಗೆ ಅನುಮತಿ ನಿರಾಕರಿಸಿದ್ದರು.

ಆದರೆ ತನ್ನ ಪಟ್ಟು ಬಿಡದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಅನುಮತಿಯನ್ನು ಪಡೆದು ಸಮಾರಂಭವನ್ನು ಅತಿ ಶಿಸ್ತಿನಿಂದ ನಡೆಸಿತು. ಮೊದಲು ಸರ್ಕಾರ ಅನುಮತಿ ನಿರಾಕರಿಸಿದ್ದಕ್ಕೆ ಕಾರಣವಿದೆ. ಏಕೆಂದರೆ ನಮ್ಮ ಭ್ರಷ್ಟ ಸರ್ಕಾರಕ್ಕೆ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಸಂಘಟಿತರಾಗಿ ನ್ಯಾಯವನ್ನು ಕೇಳುವುದು ಬೇಕಿಲ್ಲ, ಬದಲಾಗಿ ಅವರೆಲ್ಲ ಬಿಡಿ ಬಿಡಿ ಆಗಿದ್ದರೆ ಅವರನ್ನು ಅತಂತ್ರಗೊಳಿಸುವುದು ಸರ್ಕಾರಕ್ಕೆ ಸುಲಭ!


ಇನ್ನು ಅಲ್ಪಸಂಖ್ಯಾತರು-ಅದರಲ್ಲೂ ಮುಸಲ್ಮಾನರು-ಒಗ್ಗಟ್ಟಾದರೆ ನಮ್ಮ ವ್ಯವಸ್ಥೆಗೆ ಎಂತಹ ಅನುಮಾನ ಎಂಬುದಕ್ಕೆ ಈ ಸಮ್ಮೇಳನ ನಡೆದ ದಿನ ಒಂದು ಇಂಗ್ಲಿಷ್ ಪತ್ರಿಕೆ ಪ್ರಕಟಿಸಿದ ವರದಿಯೇ ಸಾಕ್ಷಿ. ಆ ವರದಿಯಲ್ಲಿ ಈ ಸಮ್ಮೇಳನದ ಸಂಘಟಕರೆಲ್ಲ ಈಗ ನಿಷೇಧಕ್ಕೆ ಒಳಗಾಗಿರುವ ಸಿಮಿಯವರೆಂದೂ, ಇವರಿಂದ ದೇಶಕ್ಕೆ ಅಪಾಯ ಇದೆಯೆಂದೂ ಪೊಲೀಸ್ ಮೂಲಗಳು ಎಚ್ಚರಿಸಿವೆ ಎಂದು ಹೇಳಲಾಗಿತ್ತು. ನಮ್ಮ ವ್ಯವಸ್ಥೆ ಮತ್ತು ಅದರ ಅಂಗವೇ ಆಗಿರುವ ಪತ್ರಿಕೋದ್ಯಮ ಕೂಡ ಇವತ್ತು ಎಷ್ಟು ಪೂರ್ವಗ್ರಹಪೀಡಿತವಾಗಿದೆ ಎಂದರೆ ಹಲವು ತಿಂಗಳ ಹಿಂದೆ PFIನ ಒಂದು ಅಂಗವಾಗಿರುವ KFD ಪೊಲೀಸರ ಅನುಮತಿ ಪಡದೇ ಬೆಂಗಳೂರಿನಲ್ಲಿ ನಡೆಸಿದ್ದ ಬೃಹತ್ ಸಾರ್ವಜನಿಕ ಸಮಾವೇಶವನ್ನೂ "ಒಂದು ಗುಪ್ತ ಸಮಾವೇಶ" ಎಂದು ಅದೇ ವರದಿಯಲ್ಲಿ ಬಣ್ಣಿಸಲಾಗಿತ್ತು! ಪೊಲೀಸರ ವಂಚನೆಗೂ, ಪತ್ರಕರ್ತರ ಪೆದ್ದುತನಕ್ಕೂ ಇದಕ್ಕಿಂತ ಸಾಕ್ಷಿ ಬೇಕೆ?

ಇವತ್ತು ನಮ್ಮ ಸಮಾಜ, ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ, ಪತ್ರಿಕಾರಂಗ ಹೇಗಾಗಿದೆ ಎಂದರೆ ಹಿಂದೂತ್ವವನ್ನು ವಿರೋಧಿಸುವ 'ಹಿಂದೂ'ಗಳು ನಕ್ಸಲೈಟರು, ತಮಗೆ ನ್ಯಾಯಯುತವಾಗಿ ಸಲ್ಲಬೇಕಾದ ಹಕ್ಕುಗಳನ್ನು ಕೇಳುವ ಮುಸಲ್ಮಾನರು ಭಯೋತ್ಪಾದಕರು, ವಿಶೇಷ ಆರ್ಥಿಕ ವಲಯಗಳನ್ನು ಪ್ರಶ್ನಿಸುವವರು ದೇಶದ್ರೋಹಿಗಳು, ಬಹುರಾಷ್ಟ್ರೀಯ ಕಂಪನಿಗಳ ಲೂಟಿಯ ಬಗ್ಗೆ ಸೊಲ್ಲೆತ್ತುವವರು ಪ್ರಗತಿಯ ವಿರೋಧಿಗಳು.... ಇಂತಹ ವಿಪರ್ಯಾಸಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಈ ಎಲ್ಲಾ ಕಾರಣಗಳಿಂದಾಗಿ PFI ನಡೆಸಿದ 'ಎಂಪವರ್ ಇಂಡಿಯಾ' ಸಮ್ಮೇಳನವು ಒಂದ ಐತಿಹಾಸಿಕ ಘಟನೆ ಆಗಿತ್ತು. ಆದರೂ PFI ಮತ್ತು ನನ್ನ ನಡುವೆ ಒಂದು ಸಣ್ಣ ಭಿನ್ನಾಭಿಪ್ರಾಯವಿದೆ. ಅದು ಮಹಿಳೆಯರನ್ನು ಕುರಿತದ್ದು. ಈ ಐತಿಹಾಸಿಕ ಸಭೆಗೆ ಬಂದ ಮಹಿಳೆಯರ ಸಂಖ್ಯೆ ಕಮ್ಮಿ; ಹಾಗೆಯೇ ಬಂದಿದ್ದ ಮಹಿಳೆಯರೆಲ್ಲರೂ ಬುರ್ಕಾದಲ್ಲಿದ್ದು ಪ್ರತ್ಯೇಕ ವಾಗಿ ಕೂತಿದ್ದರು. ಇವತ್ತು ಶೋಷಿತರ ಮೇಲಾಗುತ್ತಿರುವ ದಮನವನ್ನು ಪ್ರಶ್ನಿಸುತ್ತಿರುವ PFI ಮತ್ತು ನಮ್ಮ ಮುಸಲ್ಮಾನ್ ಸಹೋದರರು, ನಮ್ಮ ದೇಶದಲ್ಲಿ ಮಹಿಳೆಯರ ಮೇಲೂ ಶೋಷಣೆ ನಡೆಯುತ್ತಿದೆ ಎಂಬುದನ್ನು ಅರಿತುಕೊಳ್ಳಬೇಕಿದೆ.

ಆದರೆ ಒಂದು ಆಶಾಕಿರಣ ಯಾವುದೆಂದರೆ, ಸುಮಾರು ಮೂವತ್ತು ಪುರುಷರಿದ್ದ ವೇದಿಕೆಯಲ್ಲಿ ನನ್ನನ್ನು ಮುಂದಿನ ಸಾಲಿನಲ್ಲೇ ಕೂರಿಸಿದ್ದರಲ್ಲದೆ ಅಂದಿನ ಸಭೆಯಲ್ಲಿ ನಾನು ಓರ್ವ 'ಸ್ಟಾರ್' ಸ್ಪೀಕರ್! ಇದು ಹೀಗೆ ಸಾಗಿ ಸಧ್ಯದಲ್ಲೇ ಮುಸಲ್ಮಾನ್ ಸಹೋದರಿಯರಿಗೂ ಸ್ಥಾನ ನೀಡುತ್ತಾರೆ ಎಂಬ ಆಶಿಸುತ್ತಾ.....

-ಗೌರಿ ಲಂಕೇಶ್




ಸಮೀವುಲ್ಲಾ ದಾವೂದ್ ಬಂಟನೇ?

ಮೊದಲು ಫೋನ್ ಮಾಡಿ ಥ್ರೆಟ್ ಮಾಡುವುದು. ಜಗ್ಗದೇ ಹೋದಾಗ ಸಣ್ಣದೊಂದು ಶೂಟ್ ಔಟ್ ಮಾಡಿಸುವುದು. ಅದಕ್ಕೂ ಬಗ್ಗದೇ ಹೋದಾಗಲೇ ಕೊಲ್ಲುವುದು. ಹಿಂದಿಯ ಖ್ಯಾತ ಸಂಗೀತ ನಿರ್ದೇಶಕ ಗುಲ್ಷನ್‌ಕುಮಾರ್‌ಗಾಗಿದ್ದೂ ಇದೇ, ಬಾಲಿವುಡ್ ಹೀರೋ ಹೃತಿಕ್‌ನ ತಂದೆ ರಾಕೇಶ್ ರೋಷನ್‌ಗಾಗಿದ್ದೂ ಇದೇ, ಈಗ ಗುರಪ್ಪನಪಾಳ್ಯದ ಮಾಜಿ ಕೌನ್ಸಿಲರ್ ಸಮೀವುಲ್ಲನಿಗಾಗಿರುವುದೂ ಇದೇ!

ರಾ. ಸೋಮನಾಥ್

"ಇದು ಪಕ್ಕಾ ಮುಂಬಯಿಯದೇ ಸ್ಟೈಲು. ಗುರಪ್ಪನಪಾಳ್ಯದ ಖತರ್‌ನಾಕ್ ಕೌನ್ಸಿಲರ್ ಸಮೀವುಲ್ಲಾನ ನಸೀಬು ಚೆನ್ನಾಗಿದ್ದುದ್ದರಿಂದಲೇ ಆತ ಬಚಾವಾದನೆಂದಾಗಲಿ, ಅವನ ತಮ್ಮ ಅಕ್ರಂಪಾಷಾ ಕೂದಲೆಳೆಯಿಂದ ಮಿಸ್ಸಾದನೆಂದಾಗಲಿ ಯಾರಾದರೂ ಲೆಕ್ಕ ಹಾಕಿದರೆಂದರೆ; ಒಂದೋ ಅದು ಅವರ ಅಜ್ಞಾನ ಅಥವಾ ಮೂರ್ಖತನ ಮಾತ್ರ.

ಅದೊಂದು ಉದ್ದೇಶಪೂರ್ವಕ ಅಚಾತುರ್ಯ. ಇನ್ನಾವುದೋ ದೇಶದಲ್ಲಿ ಕುಳಿತು ಬನ್ನೇರುಘಟ್ಟ ರಸ್ತೆಯ ಶಬನಮ್ ಡೆವಲಪರ್ಸ್‌ಗೆ ಹಂತಕರನ್ನು ನುಗ್ಗಿಸುವ ಪಾತಕಿಗೆ ತಾನು ಯಾರನ್ನು ಕೊಲ್ಲಿಸಬೇಕಿತ್ತೋ ಅವನನ್ನೇ ಕೊಲ್ಲಿಸುವುದು ದೊಡ್ಡ ಕಷ್ಟವೇನಲ್ಲ. ಹಾಗೇ ಕೊಂದುಬಿಟ್ಟರೆ ದುಡ್ಡು ಬರಬೇಕಲ್ಲ?



ಹತರಾದ ಶೈಲಜಾ ಮತ್ತು ರವಿ

ಇದನ್ನೇ ಮುಂಬಯಿ ಅಂಡರ್‌ವರ್ಲ್ಡ್ ವೈಖರಿ ಅನ್ನುತ್ತಾರೆ. ಮೊದಲು ಫೋನ್ ಮಾಡಿ ಥ್ರೆಟ್ ಮಾಡುವುದು. ಜಗ್ಗದೇ ಹೋದಾಗ ಸಣ್ಣದೊಂದು ಶೂಟ್ ಔಟ್ ಮಾಡಿಸುವುದು. ಅದಕ್ಕೂ ಬಗ್ಗದೇ ಹೋದಾಗಲೇ ಕೊಲ್ಲುವುದು. ಹಿಂದಿಯ ಖ್ಯಾತ ಸಂಗೀತ ನಿರ್ದೇಶಕ ಗುಲ್ಷನ್‌ಕುಮಾರ್‌ಗಾಗಿದ್ದೂ ಇದೇ, ಬಾಲಿವುಡ್ ಹೀರೋ ಹೃತಿಕ್‌ನ ತಂದೆ ರಾಕೇಶ್ ರೋಷನ್‌ಗಾಗಿದ್ದೂ ಇದೇ, ಈಗ ಗುರಪ್ಪನಪಾಳ್ಯದ ಮಾಜಿ ಕೌನ್ಸಿಲರ್ ಸಮೀವುಲ್ಲನಿಗಾಗಿರುವುದೂ ಇದೇ!


ಇದು ಸ್ಯಾಂಪಲ್ ಮಾತ್ರ. ಇದಕ್ಕೇನಾದರೂ ಜಗ್ಗಲಿಲ್ಲ ಅಂದರಷ್ಟೇ ಟಾರ್ಗೆಟ್ ಮಿಸ್ಸಾಗುವುದಿಲ್ಲ. ಅದು ಮುಂಬಯಿ ಪಾತಕಿಗಳ ವರಸೆ. ಘಟನೆಯಾದರೂ ಎಂಥಾದ್ದು?

ಅದು ಫೆಬ್ರವರಿ 15ರ ಗುರುವಾರದ ಮಟಮಟ ಮಧ್ಯಾಹ್ನ. ಸಮಯ ಎರಡೂ ಐವತ್ತು. ಮೂರಕ್ಕಿನ್ನು ಹತ್ತು ನಿಮಿಷವಷ್ಟೇ ಬಾಕಿ. ಜೆ.ಪಿ. ನಗರದ ಬನ್ನೇರುಘಟ್ಟ ರಸ್ತೆಯ ಬಿಲಾಲ್ ಮಸೀದಿಯ ಹಿಂಭಾಗದ ಶಬನಮ್ ಡೆವಲಪರ್ಸ್ ಕಛೇರಿಗೆ ಇಬ್ಬರು ಹೆಲ್ಮೆಟ್‌ಧಾರಿಗಳು ಬರುತ್ತಾರೆ. ಬಂದವರೇ ಪಿಸ್ತೂಲ್ ತೆಗೆದಿದ್ದೇ ಛೇಂಬರಿನಲ್ಲಿದ್ದ ರವಿ ಎಂಬಾತನ ಮೇಲೆ ಗುಂಡು ಹಾರಿಸುತ್ತಾರೆ. ಪಕ್ಕದಲ್ಲೇ ಕೂತಿದ್ದ ರಿಸೆಪ್ಷನಿಸ್ಟ್ ಶೈಲಜಾ ರವಿಯ ನೆರವಿಗೆ ಬರುತ್ತಿದ್ದಂತೆ ಆಕೆಯ ಹೊಟ್ಟೆಗೂ ಗುಂಡು ಹಾರಿಸುತ್ತಾರೆ. ಐದೇ ನಿಮಿಷದಲ್ಲಿ ಹಂತಕರಿಬ್ಬರೂ ಪರಾರಿ. ಪಾನ್ ಪರಾಗ್ ತರಲೆಂದು ಹೋಗಿದ್ದ ಶಬನಮ್ ಡೆವಲಪರ್ಸ್‌ನ ಪಾರ್ಟ್‌ನರ್ ಅಕ್ರಮ ಪಾಷಾ ಬಂದು ನೋಡುತ್ತಾನೆ-ರವಿ ಹೆಣವಾಗಿದ್ದರೆ, ಶೈಲಜಾ ಬಿದ್ದು ಒದ್ದಾಡುತ್ತಿದ್ದಳು. ಪಕ್ಕದ ಸಾಗರ್ ಅಪೋಲೋ ಆಸ್ಪತ್ರೆಗೆ ಸಾಗಿಸುವಷ್ಟರಲ್ಲೇ ಆಕೆಯೂ ಕೊನೆಯುಸಿರೆಳೆದಳು.

ಕೊಲ್ಲಲು ಬಂದವರ ಗುರಿಯಿದ್ದದ್ದೇ ಗುರಪ್ಪನಪಾಳ್ಯದ ಮಾಜಿ ಕೌನ್ಸಿಲರ್ ಸಮೀವುಲ್ಲಾನ ಮೇಲೆಂದೂ, ಆತ ಅದೃಷ್ಟವಶಾತ್ ಬಚಾವಾದನೆಂದೂ ಎಂಥವರೂ ಲೆಕ್ಕ ಹಾಕುವುದು ಸಹಜ ತಾನೆ?

ಹಕೀಕತ್ತೇನೆಂದರೆ, ಹಂತಕರ ಉದ್ದೇಶವೇ ಹೀಗೆ ಇನ್ನಾರನ್ನೋ ಕೊಂದು ಅಸಲೀ ಟಾರ್ಗೆಟ್‌ಗೆ ಭೀತಿ ಹುಟ್ಟಿಸುವುದು!

ಹಾಗೇ ನಿರ್ದಾಕ್ಷಿಣ್ಯವಾಗಿ ಫೈರ್ ಮಾಡಿದ ಹಂತಕರು ತಾವು ಹೋಗುವ ಮುನ್ನ ತೀರ ಎಚ್ಚರಿಕೆಯಿಂದ ಮುಂಬಯಿ ಪಾತಕ ರವಿ ಪೂಜಾರಿಯ ವಿಸಿಟಿಂಗ್ ಕಾರ್ಡ್ ಇಟ್ಟು ಹೋಗಿದ್ದಾರೆ. ಇದರರ್ಥ ಶಬನಮ್ ಬಿಲ್ಡರ್ಸ್ ಮಾಲೀಕ ಸಮೀವುಲ್ಲನಿಗೆ ಭೀತಿ ಹುಟ್ಟಿಸುವುದು!



ಕಿಲ್ಲರ್ ಪೂಜಾರಿಯ ಹಿಂದ್ಯಾರು?


ಅಷ್ಟಕ್ಕೂ ಗುರಪ್ಪನಪಾಳ್ಯದ ಮಾಜಿ ಕೌನ್ಸಿಲರ್ ಸಮೀವುಲ್ಲನಿಗೂ ದೇಶಬಿಟ್ಟೇ ಪರಾರಿಯಾಗಿರುವ ರವಿ ಪೂಜಾರಿಗೂ ಏನು ಸಂಬಂಧ? ಇದು ಪ್ರಶ್ನೆ. ಮುಂಬಯಿಯ ಟೈಮ್ಸ್ ಕಛೇರಿಗೆ, ಉದಯ ಟೀವಿಯ ಬಾಲಕೃಷ್ಣ ಕಾಕತ್ಕರ್‌ಗೆ ಫೋನ್ ಮಾಡಿದ ರವಿ ಪೂಜಾರಿಯೇ ತನ್ನ ಸಂದರ್ಶನದಲ್ಲಿ ಹೇಳಿಕೊಳ್ಳುವಂತೆ ಸಮೀವುಲ್ಲಾ ದಾವೂದ್ ಮತ್ತು ಛೋಟಾ ಶಕೀಲ್ ಬಂಟ. ಆತ ದೇಶದ್ರೋಹಿಯಾದ್ದರಿಂದಲೇ 'ಉಸ್‌ಕೋ ಗೋಲಿ ಡಾಲೂಂಗಾ....!'

ಇದು ರವಿಪೂಜಾರಿ ಟೀವಿ ಸಂದರ್ಶನದ ಸ್ಯಾಂಪಲ್. ಬೆಂಗಳೂರಿನಲ್ಲಿ ಅನೇಕ ಬಿಲ್ಡರ್‌ಗಳು ದಾವೂದ್ ಬಂಟರಾಗಿದ್ದಾರಂತೆ. ಛೋಟಾ ಶಕೀಲ್‌ಗೂ ದುಡ್ಡು ಕೊಡುತ್ತಿದ್ದಾರಂತೆ. ಅಂಥ ದೇಶದ್ರೋಹಿಗಳನ್ನು ಮುಗಿಸುವುದೇ ತನ್ನ ಏಕೈಕ ಗುರಿ ಎನ್ನುತ್ತಾನೆ ರವಿ ಪೂಜಾರಿ. ಆದರೆ ಸಮೀವುಲ್ಲನಿಗೂ ದಾವೂದ್‌ಗೂ ಏನು ನಂಟಿದೆ ಎಂಬುದನ್ನು ಮಾತ್ರ ಆತ ಬಿಡಿಸಿ ಹೇಳಲಾರ. ಬೆಂಗಳೂರಿನಲ್ಲಿ ಇನ್ನು ಯಾರ್‍ಯಾರನ್ನು ಮುಗಿಸ್ತೀಯ ಎಂಬುದಕ್ಕೂ ಆತನಲ್ಲಿ ಉತ್ತರವಿಲ್ಲ. ಹೋಗಲಿ, ಆತನ ಮಾತಲ್ಲೇನಾದರೂ ಹುರುಳುಂಟೆ ಎಂದು ಸಮೀವುಲ್ಲನ ಜಾತಕಕ್ಕೆ ಕೈಯಿಟ್ಟರೆ, ಈ ಸಮೀವುಲ್ಲನ ಪಾಲಿಗೆ ದಾವೂದ್, ಛೋಟಾ ಶಕೀಲು ಎಲ್ಲವೂ ಜಯನಗರದ ಶಾಸಕ ರಾಮಲಿಂಗಾರೆಡ್ಡಿಯೆ!

ಕಳೆದ ಪಾಲಿಕೆ ಚುನಾವಣೆಯಲ್ಲಿ ಜಯನಗರದ ಗುರಪ್ಪನಪಾಳ್ಯ ವಾರ್ಡಿನಿಂದ ಜೆಡಿಎಸ್‌ನ ರಿಜ್ವಾನ್‌ನನ್ನು ಬರೇ ನೂರು ಮತಗಳಿಂದ ಸೋಲಿಸಿ ಗೆದ್ದವನು ಸಮೀವುಲ್ಲಾ. ಅದಕ್ಕೂ ಮುನ್ನ ಈತನೂ ಜೆಡಿಎಸ್‌ನಲ್ಲಿದ್ದ. ಪಾಲಿಕೆ ಚುನಾವಣೆ ಸಮೀಪಿಸುತ್ತಿದ್ದಂತೆ ಜಯನಗರದ ಕಾಂಗ್ರೆಸ್ ಶಾಸಕ ರಾಮಲಿಂಗಾರೆಡ್ಡಿಯ ಪಾಳೆಯಕ್ಕೆ ನೆಗೆದ. ಅಲ್ಲಿಯತನಕ ರಾಮಲಿಂಗಾರೆಡ್ಡಿಗಾಗಿ ಲಕ್ಷಾಂತರ ರೂಪಾಯಿ ಖರ್ಚು

ರವಿ ಪೂಜಾರಿಯ ಜಾಡು ಹಿಡಿದು

ರವಿ ಪೂಜಾರಿ ಆಲಿಯಾಸ್ ರವಿ ಪ್ರಕಾಶ್ ಸುಳ್ಯ ಪೂಜಾರಿ, 36 ವರ್ಷ, 405. ಓಂ ಬೃಂದಾವನ್ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ. ಮಧುರಾ ದಾಸ್ ರೋಡ್. ದೊಂಬಿವಿಲಿ. ಥಾಣೆ!



ಇದು ಮುಂಬಯಿಯ ಕ್ರೈಂಬ್ರಾಂಚಿನಲ್ಲಿ ಆತನ ಬಗೆಗಿರುವ ಹಳೇ ವಿವರಗಳು. ಹುಟ್ಟಿ ಬೆಳೆದದ್ದು ಮುಂಬಯಿಯ ಅಂಧೇರಿಯಲ್ಲಿ. ಅಲ್ಲಿನ ಸಹರ್ ಇಂಗ್ಲಿಷ್ ಮೀಡಿಯಂ ಸ್ಕೂಲಿನಲ್ಲಿ ಒಂಭತ್ತನೇ ತರಗತಿ ತನಕ ಓದಿದ ಹೈಸ್ಕೂಲ್ ಡ್ರಾಪೌಟು. ಚೂರುಪಾರು ಕನ್ನಡ ಮಾತಾಡುತ್ತಾನೆ. ತುಳು ಬರುತ್ತದೆ. ಹಿಂದಿ ಸಲೀಸು. ಅಂಥವನು ಇಡೀ ಮುಂಬಯಿಯ ಬಾಲಿವುಡ್ಡನ್ನೇ ಥರಗುಟ್ಟಿಸುವ ಮಟ್ಟಕ್ಕೆ ಹೇಗೆ ಬೆಳೆದ? ಛೋಟಾ ರಾಜನ್ ತಂಡದಿಂದ ಬೇರ್ಪಟ್ಟ ನಂತರವೂ ಆತ ಏಕೆ ದಾವೂದ್ ಇಬ್ರಾಹಿಂನನ್ನು ಮುಗಿಸುತ್ತೇನೆಂದು ಪದೇಪದೇ ಬೊಬ್ಬಿಡುತ್ತಿದ್ದಾನೆ? ನಿಜಕ್ಕೂ ಆತ ಛೋಟಾ ರಾಜನ್ ತಂಡದಿಂದ ಬೇರ್ಪಟ್ಟಿದ್ದಾನೆಯೆ? ಅಥವಾ ಛೋಟಾ ರಾಜನ್‌ನನ್ನು ನಂಬಿಸುವುದಕ್ಕೋಸ್ಕರ ದಾವೂದ್ ವಿರುದ್ಧ ಕಿಡಿಕಾರುತ್ತಿದ್ದಾನಾ?

ಇಂಥ ಅನೇಕ ಪ್ರಶ್ನೆಗಳಿಗೆ ಯಾರಲ್ಲೂ ಉತ್ತರವಿಲ್ಲ. ಸ್ವತಃ ಮುಂಬಯಿ ಪೊಲೀಸರಿಗೇ ಈತನ ಬಗ್ಗೆ ಹೆಚ್ಚು ತಿಳಿದಿಲ್ಲ. ಏಕೆಂದರೆ ರವಿ ಪೂಜಾರಿ ಬೇರೆಲ್ಲ ಮುಂಬಯಿ ಪಾತಕಿಗಳಂತಿಲ್ಲ. ಆತ ಎಲ್ಲಿದ್ದಾನೆ, ಹೇಗಿದ್ದಾನೆ, ನಿಜಕ್ಕೂ ರವಿ ಪೂಜಾರಿ ಒಬ್ಬನೇನಾ? ಇಬ್ಬಿಬ್ಬರಿದ್ದಾರಾ? ಹೇಮಂತ್ ಪೂಜಾರಿ ಎಂಬ ಹೆಸರಲ್ಲೂ ಇವನೇ ಚಾಲ್ತಿಯಲ್ಲಿದ್ದಾನಾ? ಈಗ ಆಸ್ಟ್ರೇಲಿಯಾದಲ್ಲಿರುವುದು ಎಷ್ಟು ನಿಜ? ಇತ್ಯಾದಿಗಳ ಬಗ್ಗೆಯೇ ಮುಂಬಯಿ ಪೊಲೀಸರಲ್ಲಿ ಗೊಂದಲವಿದೆ.

ರವಿ ಪೂಜಾರಿಯ ತಾಯಿ ಮೂಲತಃ ಉಡುಪಿ ಪಕ್ಕದ ಯಾವುದೋ ಹಳ್ಳಿಯವಳಂತೆ. ತಂದೆ ಮುಂಬಯಿಯವನು. ಈತನಿಗೆ ರಟ್ಟೆ ಬಲಿಯುವ ಹೊತ್ತಿಗೇ ಅಂಡರ್‌ವರ್ಲ್ಡ್ ಕೈಬೀಸಿ ಕರೆಯಿತು. ಆಗ ಅಂಧೇರಿಯನ್ನಾಳುತ್ತಿದ್ದವನು ಮಾಂಜ್ರೇಕರ್ ವಾಡಿಯ ಶ್ರೀಕಾಂತ್ ಮಾಮಾ ಎಂಬ ಏರಿಯಾ ರೌಡಿ. ಈತನನ್ನು 1993ರಲ್ಲಿ ಮುಂಬಯಿಯ ಕ್ರೈಂ ಬ್ರಾಂಚ್ ಪೊಲೀಸರು ಎನ್‌ಕೌಂಟರ್ ಮಾಡಿ ಕೊಂದಾಗ ರವಿ ಪೂಜಾರಿಗಿನ್ನು ಇಪ್ಪತ್ತೆರಡರ ಹರೆಯ. ಆತನ ನಂತರ ಗ್ಯಾಂಗನ್ನು ತಾನೇ ಆಳಬೇಕೆಂಬುದು ಪೂಜಾರಿಯ ಮಹದಾಸೆಯಾಗಿತ್ತು. ಆದರೆ ಸೀನಿಯಾರಿಟಿಯಿದ್ದದ್ದು ಶ್ರೀಕಾಂತ್ ಮಾಮಾನ ಬಲಗೈ ಬಂಟ ಬಾಲಾಜಲ್ವೆ ಎಂಬಾತನಿಗೆ.

ರವಿ ಪೂಜಾರಿ, ಬಬ್ಲಿ ಮುಂತಾದ ಎಂಟು ಮಂದಿ ಹುಡುಗರು ಸೇರಿದ್ದೇ ಬಾಲಾಜಲ್ವೆಯ ತಲೆ ಮೇಲೆ ಕಲ್ಲೆತ್ತಿ ಹಾಕಿ ಕೊಂದು ಬಿಟ್ಟರು. ಜೈಲಿಂದ ಹೊರಬಿದ್ದ ಪೂಜಾರಿ ಬಾಲಾಜಲ್ವೆಯ ತಮ್ಮ ಬಂಡ್ಯಾ ಜಲ್ವೆ ಎಂಬಾತನ ಮೇಲೆಯೇ ಫೈರ್ ಮಾಡಿಬಿಟ್ಟ. ಎರಡನೇ ಬಾರಿ ಜೈಲಿಂದ ಬಂದವನೇ ಈ ಬಾರಿ ಛೋಟಾರಾಜನ್ ಗ್ಯಾಂಗ್ ಸೇರಿಕೊಂಡ.



ಛೋಟಾ ರಾಜನ್

1996ರಲ್ಲಿ ಮುಂಬಯಿಯ ಒಬ್ಬ ಕೇಬಲ್ ಆಪರೇಟರ್‌ನನ್ನೂ ಮತ್ತೊಬ್ಬ ಹೋಟೆಲ್ ಮಾಲೀಕನನ್ನೂ ಕೊಂದು ದುಬೈಗೆ ಪರಾರಿಯಾದವನು ಬಹುಶಃ ಮತ್ತೆಂದೂ ಮುಂಬಯಿಯತ್ತ ತಲೆ ಹಾಕಲಿಲ್ಲ.

ರವಿ ಪೂಜಾರಿಯ ಹೆಸರು ಮೊದಲ ಬಾರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೇಳಿಬಂದಿದ್ದು ಇಸವಿ 2000ದಲ್ಲಿ. ಬ್ಯಾಂಕಾಕ್‌ನ ಅಪಾರ್ಟ್‌ಮೆಂಟ್ ಒಂದರಲ್ಲಿದ್ದ ಛೋಟಾ ರಾಜನ್ ಮೇಲೆ ದಾವೂದ್ ಗ್ಯಾಂಗ್ ದಾಳಿ ನಡೆಸಿದಾಗ ಆವತ್ತು ಜೊತೆಗಿದ್ದ ಆತನ ಇಬ್ಬರು ಪರಮಾಪ್ತರೇ ರೋಹಿತ್ ವರ್ಮಾ ಮತ್ತು ರವಿ ಪೂಜಾರಿ. ಛೋಟಾರಾಜನ್ ತಪ್ಪಿಸಿಕೊಂಡು ಬದುಕುಳಿದನಾದರೂ ರೋಹಿತ್ ವರ್ಮಾ ಮತ್ತು ಆತನ ಪತ್ನಿ ದಾಳಿಯಲ್ಲಿ ಗುಂಡೇಟಿಗೆ ಬಲಿಯಾಗಿದ್ದರು.



ಹೇಮಂತ್ ಪೂಜಾರಿ

ಒಂದೇ ಒಂದು ಗುಂಡೇಟು ತಿನ್ನದೇ ಸುರಕ್ಷಿತವಾಗಿ ಪರಾರಿಯಾದವನು ರವಿ ಪೂಜಾರಿ ಮಾತ್ರ. ಬಹುಶಃ ದಾವೂದ್ ಗ್ಯಾಂಗಿಗೆ ಸುದ್ದಿ ಕೊಟ್ಟದ್ದೇ ರವಿ ಪೂಜಾರಿ ಎಂಬ ಗುಮಾನಿ ಛೋಟಾ ರಾಜನ್‌ಗಿತ್ತೇನೊ. ಅದು ಗೊತ್ತಾಗಿ ರವಿ ಪೂಜಾರಿಯೇ ಭೀತಿಗೆ ಬಿದ್ದನೇನೊ.

ಆನಂತರ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಮೊರಾಕ್ಕೋ, ದುಬೈ; ಹೀಗೆ ಕಂಡಕಂಡ ದೇಶಗಳನ್ನೆಲ್ಲ ಸುತ್ತಾಡಿಕೊಂಡೇ ಕಾಲಹಾಕಿದ ರವಿ ಪೂಜಾರಿಯನ್ನು ಬೆಂಗಳೂರಿಗೆ ಕರೆತಂದಿದ್ದು ಮುತ್ತಪ್ಪ ರೈ!

ಅದು ಬಿಲ್ಡರ್ ಸುಬ್ಬರಾಜು ಹತ್ಯೆಗೆ ಕಾರಣವಾಯಿತು. ರವಿ ಪೂಜಾರಿ ತನ್ನ ಬಂಟ ಯೂಸುಫ್ ಬಚಖಾನನನ್ನು ಬೆಂಗಳೂರಿಗೆ ಕಳಿಸಿ ಬಿಲ್ಡರ್ ಸುಬ್ಬರಾಜುವನ್ನು ಕೊಲ್ಲಿಸಿಬಿಟ್ಟ. ಮುಂದೆ ಬಚಖಾನ ಸಿಕ್ಕಿಬಿದ್ದನಾದರೂ ಪೂಜಾರಿ ಮಾತ್ರ ಪತ್ತೆಯೇ ಇಲ್ಲ. ಆ ಹೊತ್ತಿಗೆ ಗುರುಸಾಟಮ್‌ನಿಂದಲೂ ಪೂಜಾರಿ ದೂರವಾಗಿದ್ದ. ತನ್ನದೇ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡ. ಮುಂಬಯಿ ಸರಣಿ ಸ್ಫೋಟದ ಆರೋಪಿಗಳ ಪರ ವಕಾಲತ್ತು ವಹಿಸಿದ್ದ ಕ್ರಿಮಿನಲ್ ಲಾಯರ್ ಮುಜೀಬ್ ಮೆಮೋನ್ ಮೇಲೆ ಹುಡುಗರನ್ನು ಬಿಟ್ಟು ಫೈರ್ ಮಾಡಿಸಿದನಾದರೂ ವಕೀಲ ಮೆಮೋನ್ ಬದುಕುಳಿದು ಬಿಟ್ಟ.


ಅಲ್ಲಿಂದಾಚೆಗೆ ರವಿಪೂಜಾರಿಯ ಪ್ರಚಾರದ ಹುಚ್ಚು ಯಾವ ರಭಸದಿಂದ ಸಾಗಿತೆಂದರೆ, ಇಂಥ ಒಂದೊಂದು ಶೂಟ್‌ಔಟ್‌ನ ನಂತರವೂ ಟೀವಿಗಳಿಗೆ ತಾನೇ ಫೋನ್ ಮಾಡಿ ಸಂದರ್ಶನ ಕೊಡುತ್ತಿದ್ದ. ಯಾರ್‍ಯಾರು ದಾವೂದ್ ಇಬ್ರಾಹಿಂನನ್ನು ಬೆಂಬಲಿಸುತ್ತಾರೋ ಅಂಥವರನ್ನೆಲ್ಲ ಮುಗಿಸಿಬಿಡ್ತೇನೆ ಎಂದೇ ಡೈಲಾಗ್ ಹೊಡೆಯಲಾರಂಭಿಸಿದ.



ಶಬನಮ್ ಡೆವಲಪರ್ಸ್ ಬಿಲ್ಡಿಂಗಿನ ಮುಂದೆ ನೆರೆದಿರುವ ಜನಸ್ತೋಮ

ಮಾಡಿದ ಈತನ ಬದ್ಧವೈರಿ ರಿಜ್ವಾನ್ ವಿಧಿಯಿಲ್ಲದೇ ಕಾಂಗ್ರೆಸ್ಸಿನಿಂದ ಹೊರಬಿದ್ದು ಜೆಡಿಎಸ್ ಅಭ್ಯರ್ಥಿಯಾಗಿದ್ದ. ರೆಡ್ಡಿಯ ಬೆಂಬಲದಿಂದಲೇ ಗೆದ್ದು ಕೌನ್ಸಿಲರ್ ಆದ ಸಮೀವುಲ್ಲಾನ ಹೆಸರು ಮೊದಲು ಕೇಳಿಬಂದದ್ದು ಗುಲ್ಬರ್ಗಾದ ಮುಗ್ಧ ಬಾಲಕಿಯೊಬ್ಬಳ ಕಿಡ್ನಾಪ್ ಅಂಡ್ ರೇಪ್ ಪ್ರಕರಣದಲ್ಲಿ.

ರಾಮಲಿಂಗಾರೆಡ್ಡಿ ಗುಲ್ಬರ್ಗಾ ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿದ್ದಾಗ ಅವರ ಜೊತೆ ಹೋಗುತ್ತಿದ್ದ ಜಯನಗರದ ಪುಢಾರಿ ಹಿಂಡಿನಲ್ಲಿ ಈ ಸಮೀವುಲ್ಲಾ ಮತ್ತು ಬಿಟಿಎಂ ಲೇಔಟಿನ ಕೌನ್ಸಿಲರ್ ನಾಗರಾಜ್ ಪ್ರಮುಖರು. ಸಮೀವುಲ್ಲಾನ ಜೊತೆ ಆತನ ಛೇಲಾ ಛಪ್ಪರ್ ಬಾಬು ಎಂಬಾತನೂ ಇರುತ್ತಿದ್ದ. ಗುಲ್ಬರ್ಗಾದ ಆನಂದ್ ಡ್ರೈವಿಂಗ್ ಸ್ಕೂಲ್‌ನ ಮುಗ್ಧ ಬಾಲಕಿಯೊಬ್ಬಳನ್ನು ಹೇಗೋ ಪರಿಚಯಿಸಿಕೊಂಡ ಛಪ್ಪರ್ ಬಾಬು ಆಕೆಯನ್ನು ಸಮೀವುಲ್ಲಾನಿಗೂ ಪರಿಚಯಿಸಿ ಕೊಟ್ಟಿದ್ದ. ಆನಂತರ ಸಮೀವುಲ್ಲಾ ಮತ್ತು ಬಾಬು



ಸೇರಿಕೊಂಡೇ ಆಕೆಯನ್ನು ಬೆಂಗಳೂರಿಗೆ ಅಪಹರಿಸಿ ತರುತ್ತಾರೆ. ಬೆಂಗಳೂರಿನಲ್ಲಿ ಆಕೆಯನ್ನು ರಾಮಲಿಂಗಾರೆಡ್ಡಿಯ ಫಾರ್ಮ್ ಹೌಸ್‌ನಲ್ಲಿಟ್ಟೇ ರೇಪ್ ಮಾಡಲಾಗಿದೆಯೆಂದು ಆರೋಪಿಸಿ ಬೆಂಗಳೂರಿನಲ್ಲೂ, ಗುಲ್ಬರ್ಗಾದಲ್ಲೂ ಬಿಜೆಪಿ-ಜೆಡಿಎಸ್ ಮಹಿಳಾಮಣಿಗಳು ಪ್ರತಿಭಟಿಸುತ್ತಾರೆ.

ಈ ಪ್ರಕರಣದಲ್ಲಿ ರಾಮಲಿಂಗಾರೆಡ್ಡಿಯ ಪಾತ್ರವಿತ್ತೋ ಇಲ್ಲವೋ. ಆದರೆ ಸಮೀವುಲ್ಲಾ ಮಾತ್ರ ಎಲ್ಲಿ ಪೊಲೀಸರು ತನ್ನನ್ನು ಲಾಕಪ್ಪಿಗೆ ದಬ್ಬುತ್ತಾರೋ ಎಂದು ವಾರಗಟ್ಟಲೇ ನಾಪತ್ತೆಯಾಗಿದ್ದ. ಸಮೀವುಲ್ಲಾನ ಕೇಡಿ ಗ್ಯಾಂಗ್ ವಿರುದ್ಧ 'ಲಂಕೇಶ್' ಆವತ್ತೇ ಪೊಲೀಸರನ್ನು ಎಚ್ಚರಿಸಿತ್ತು.


ಇದು ಸಮೀವುಲ್ಲಾನ ವ್ಯಕ್ತಿತ್ವದ ಸ್ಯಾಂಪಲ್ ಮಾತ್ರವಾಗಿತ್ತು. ಒಂದಾನೊಂದು ಕಾಲಕ್ಕೆ ಸೀಮೆಎಣ್ಣೆ ಗಾಡಿ ತಳ್ಳಿಕೊಂಡಿದ್ದು ಕಾಲಿಗೆ ನೆಟ್ಟಗೊಂದು ಜೊತೆ ಚಪ್ಪಲಿ ಕೂಡ ಇಲ್ಲದೇ ಇಟ್ಟಾಡುತ್ತಿದ್ದ ಸಮೀವುಲ್ಲಾ ಕ್ರಮೇಣ ಮನೆ ಬ್ರೋಕರ್ ಕೆಲಸಕ್ಕೆ ನಿಂತ. ತೀರ ಅಗ್ಗದ ಟರ್‌ಪೆಂಟೈನ್‌ಗೆ ಬಣ್ಣ ಬೆರೆಸಿ ಅದನ್ನು ಸೀಮೆಎಣ್ಣೆ ಎಂದೇ ಮಾರಿ ಅಷ್ಟಿಷ್ಟು ದುಡ್ಡು ಮಾಡಿದ. ಸಣ್ಣಪುಟ್ಟ ಸೈಟು ಜಗಳಕ್ಕೆ ಕೈಹಾಕುತ್ತಿದ್ದ.

ಯಾವುದೋ ಡೀಲಿನಲ್ಲಿ ತನ್ನ ಹೆಸರು ಬಳಸಿದ್ದಕ್ಕೆ ರೌಡಿ ತರಕಾರಿ ಖಲೀಲ್ ಈತನ ಬೆನ್ನಿಗೆ ರೇಜರ್ ಹಾಕಿದ್ದ. ಆವತ್ತಿನಿಂದ ಶುರುವಾದ ಈತನ ರೌಡಿ ಖಯಾಲಿಗೆ ಪಾತಕಿಗಳಾದ ತನ್ವೀರ್, ಮಾಹಿನ್ ಇತ್ಯಾದಿಗಳೆಲ್ಲ ಸೊಪ್ಪು ಹಾಕುತ್ತಲೇ ಬಂದರು. ಕೌನ್ಸಿಲರ್ ಆಗಿದ್ದೇ ಜಯದೇವ ಆಸ್ಪತ್ರೆ ಹಿಂಭಾಗದ ಅಮೂಲ್ಯ ಎರಡು ಕೋಟಿಯ ಆಸ್ತಿಯನ್ನು ಕಬಳಿಸಿ ಅದಕ್ಕೆ ರಾ.ಲಿಂ. ರೆಡ್ಡಿಯನ್ನೇ ಪಾಲುದಾರನಾಗಿ ಮಾಡಿಕೊಂಡ. ಬನ್ನೇರುಘಟ್ಟ ರಸ್ತೆಯುದ್ದಕ್ಕೂ ಬೇಕಾಬಿಟ್ಟಿ ಸೈಟುಗಳನ್ನು ಖರೀದಿಸಿದ. ಅರಕೆರೆ, ಗೊಟ್ಟಿಕೆರೆ, ಹುಳಿಮಾವು ಸುತ್ತಮುತ್ತ ಕೆಲ ಲಿಟಿಗೇಷನ್ ಪ್ರಾಪರ್ಟಿಗಳಿಗೂ ಕೈಯಿಟ್ಟ.

ಈ ಪೈಕಿ ಮೂವತ್ತು ಎಕರೆಯ ಒಂದು ಆಸ್ತಿಯನ್ನು ಇಲ್ಲಿಗೆ ಮೂರು ತಿಂಗಳ ಹಿಂದೆ ಸಮೀವುಲ್ಲಾ ಮಲ್ಟಿನ್ಯಾಷನಲ್ ಕಂಪೆನಿಯೊಂದಕ್ಕೆ ಮಾರಿದ್ದಾನೆ. ವಿವಾದಿತ ಆ ಆಸ್ತಿಯಲ್ಲಿ ಈತನಿಗೂ ಮುನ್ನ ಮೂರ್‍ನಾಲ್ಕು ಮಂದಿ ಬ್ರೋಕರುಗಳಿದ್ದರು. ಲಾಭವೇ ಐವತ್ತು ಕೋಟಿ ಬಂದಿರುವಾಗ ಅದರಲ್ಲಿ ಚೂರುಪಾರನ್ನಾದರೂ ಅವರಿಗೆ ಕೊಡಬೇಕಿತ್ತು. ಆದರೆ ಸಮೀವುಲ್ಲಾ ಇಡೀ ಐವತ್ತು ಕೋಟಿಯನ್ನೇ ನುಂಗಿಬಿಟ್ಟ. ಲಾಭದ ಖುಷಿಯಲ್ಲಿ ಮೆಕ್ಕಾ ಯಾತ್ರೆಗೂ ಹೋಗಿಬಂದ. ಯಾವತ್ತು ಸಮೀವುಲ್ಲಾನಿಗೆ ಐವತ್ತು ಕೋಟಿಯ ಲಾಭ ಬಂದ ಸುದ್ದಿ ಇದೇ ಬನ್ನೇರುಘಟ್ಟ ರಸ್ತೆಯ ಕೆಲ ಲ್ಯಾಂಡ್ ಮಾಫಿಯಾಗಳ ಕಿವಿಗೆ ಬಿತ್ತೋ ಇದು ರವಿ ಪೂಜಾರಿಯ ಕಿವಿಗೂ ಬಿದ್ದಿದೆ. ಅಥವಾ ಯಾರೋ ಉದ್ದೇಶ ಪೂರ್ವಕವಾಗಿ ಪೂಜಾರಿಯನ್ನು ಛೂ ಬಿಟ್ಟಿದ್ದಾರೆ.

ಇಲ್ಲಿಗೆ ತಿಂಗಳ ಹಿಂದೆಯೇ ರವಿ ಪೂಜಾರಿಯಿಂದ ಸಮೀವುಲ್ಲಾನಿಗೆ ಬೆದರಿಕೆ ಕರೆ ಬಂದಿತ್ತು. ಸಮೀವುಲ್ಲಾ ಅದನ್ನು ನಿರ್ಲಕ್ಷಿಸಿರಬೇಕು. ಹಾಗೆಂದು ಪೂಜಾರಿ ಬಿಡಬೇಕಲ್ಲ; ಆತನದು ಪಕ್ಕಾ ಮುಂಬಯಿ ಸ್ಟೈಲು. ಫೆಬ್ರವರಿ 15 ರ ಮಧ್ಯಾಹ್ನವೇ ತನ್ನ ತಾಕತ್ತಿನ ರುಚಿ ಮುಟ್ಟಿಸಿದ್ದಾನೆ. ಅನ್ಯಾಯವಾಗಿ ಶಬನಮ್ ಡೆವಲಪರ್ಸ್‌ನ ಇಬ್ಬರು ನೌಕರರು ಬಲಿಯಾಗಿದ್ದಾರೆ. ಈ ಪೈಕಿ ಭೈರಸಂದ್ರದ ಶೈಲಜಾ ಇಬ್ಬರು ಮಕ್ಕಳು ತಾಯಿ. ಮತ್ತೊಬ್ಬ ರವಿಗೆ ಮದುವೆಯಾಗಿ ಇನ್ನೂ ಆರು ವರ್ಷ ಮಾತ್ರವಾಗಿತ್ತು. ಇಬ್ಬರು ಮಕ್ಕಳೂ ಹಾಲುಗಲ್ಲದ ಹಸುಳೆಗಳೆ.

ದುರಂತವೆಂದರೆ ತನಗಾಗಿ ಪ್ರಾಣ ಕೊಟ್ಟವರ ಸಮಾಧಿಯ ಮೇಲೇ ಸಮೀವುಲ್ಲಾ ಊಟಕ್ಕೆ ಕುಳಿತಿದ್ದಾನೆ. ಸಿಸಿಬಿ ಪೊಲೀಸರು ದಿನಗಟ್ಟಲೇ ಸರ್ಕಸ್ ಮಾಡಿದರೂ ಕಿಂಚಿತ್ತೂ ತನಿಖೆಗೆ ಸಹಕರಿಸುತ್ತಿಲ್ಲ. ಇದರರ್ಥ ಮುಂದೊಮ್ಮೆ ರವಿ ಪೂಜಾರಿಗೆ




ಕೇಳಿದಷ್ಟು ಕೊಟ್ಟು ತಾನು ಬಚಾವಾಗುವುದು. ಯಾರ ಮನೆ ಹಾಳು ಬಿದ್ದರೇನು ಸಮೀವುಲ್ಲಾನಿಗೆ ತಾನು ಸುಖವಾಗಿದ್ದರೆ ಸಾಕು.

ಅನ್ಯಾಯವಾಗಿ ಕೊಲೆಯಾದ ಇಬ್ಬರ ಪ್ರಾಣಕ್ಕೆ ನ್ಯಾಯ ಸಲ್ಲಿಸುವವರ್‍ಯಾರು?

ಪೂಜಾರಿಯನ್ನು ಛೂ ಬಿಟ್ಟಿದ್ದು ಕರಾಟೆ ಇಕ್ಬಾಲ್?

ರವಿ ಪೂಜಾರಿ ತನ್ನ ಟೀವಿ ಸಂದರ್ಶನದಲ್ಲಿ ಹೇಳಿಕೊಂಡಂತೆ ಮಾಜಿ ಕೌನ್ಸಿಲರ್ ಸಮೀವುಲ್ಲಾನಿಗೂ ಕರಾಚಿಯ ಡಾನ್ ದಾವೂದ್ ಇಬ್ರಾಹಿಂಗೂ ಸಂಬಂಧವಿರುವುದು ಎಷ್ಟು ನಿಜ?

ಹಾಗೆ ನೋಡಿದರೆ ಸಮೀವುಲ್ಲಾ ಮತ್ತು ಆತನ ತಮ್ಮ ಅಕ್ರಂ ಪಾಷಾ ಇಬ್ಬರೂ ಖುದ್ದು ರೌಡಿಗಳೆ. ತಮ್ಮ ಎದುರಾಳಿಗಳಾದ ರಿಜ್ವಾನ್ ಮತ್ತು ರೇಹಾನ್ ಎಂಬಿಬ್ಬರು ಸಹೋದರರ ವಿರುದ್ಧ ಇವತ್ತಿಗೂ ಬಡಿದಾಟ ನಿಲ್ಲಿಸಿಲ್ಲ. ಹಾಗಂಥ ಬೆಂಗಳೂರಿನ ರೌಡಿಗಳಾದ ತನ್ವೀರ್, ಇಷ್ತಿಯಾಕ್ ಇತ್ಯಾದಿ ಯಾರನ್ನೂ ಹತ್ತಿರಕ್ಕೆ ಬಿಟ್ಟುಕೊಂಡವರಲ್ಲ. ತಿಲಕ್‌ನಗರದ ಪರಮ ಕುಖ್ಯಾತ ಲ್ಯಾಂಡ್ ಮಾಫಿಯಾ ಬಿಲ್ಡರ್ ಅಮ್ಜದ್ ಮತ್ತು ಹಳೇ ಸ್ಯಾಂಡಲ್‌ವುಡ್ ಸ್ಮಗ್ಲರ್ ಖುದ್ದೂಸ್‌ರನ್ನೇ ತನ್ನ ಗಾಡ್‌ಫಾದರ್ ಗಳನ್ನಾಗಿಟ್ಟುಕೊಂಡು ಬೆಳೆದವನು ಸಮೀವುಲ್ಲಾ. ಅಂಥಾ ರಾಮಲಿಂಗಾ ರೆಡ್ಡಿಯೇ ಬೆನ್ನಿಗಿರುವಾಗ ದಾವೂದ್ ಆಗಲಿ ಛೋಟಾ ಶಕೀಲ್ ಆಗಲಿ ಏಕೆ ಬೇಕು?



ರೌಡಿ ರಿಜ್ವಾನ್

ಇದು ಸಮೀವುಲ್ಲಾ ಪೊಲೀಸರಿಗೆ ಹಾಕುವ ಮರು ಪ್ರಶ್ನೆ. ಬಹುಶಃ ತನ್ನ ದುರಾಚಾರಕ್ಕೆ ಸಮರ್ಥನೆಯಾಗಿ ರವಿ ಪೂಜಾರಿ ದಾವೂದ್-ಛೋಟಾ ಶಕೀಲ್ ಹೆಸರು ಬಳಸಿದ್ದಾನೆ. ಯಾವುದೇ ಓರ್ವ ಮುಸ್ಲಿಂನನ್ನು ದಾವೂದ್ ಬಂಟನೆಂದೋ, ಪಾಕಿಸ್ತಾನ್ ಏಜೆಂಟನೆಂದೋ ಪಟ್ಟಕಟ್ಟುವುದು ತುಂಬಾ ಸುಲಭ. ಹಾಗೇ ನೋಡಿದರೆ ಸಮೀವುಲ್ಲಾನಿಗಿಂತಲೂ ದೊಡ್ಡ ಕುಖ್ಯಾತಿಯಿರುವುದು ಬೆಂಗಳೂರಿನ ನಟೋರಿಯಸ್ ಬಿಲ್ಡರ್ ಇರ್ಫಾನ್ ರಜಾಕ್ ಮತ್ತು ಸ್ಕಿಲ್‌ಗೇಮ್ ಕಿಂಗ್ ಶಿವಾನಿಗೆ.


ಇಂಥ ದೊಡ್ಡ ತಲೆಗಳನ್ನೆಲ್ಲ ಬಿಟ್ಟು ಪೂಜಾರಿ ಯಕಶ್ಚಿತ್ ಸಮೀವುಲ್ಲಾನನ್ನೇ ಏಕೆ ಆಯ್ದುಕೊಂಡ? ಆತನಿಗೆ ಆಗದ ಯಾರೋ ರವಿ ಪೂಜಾರಿಯನ್ನು ಛೂ ಬಿಟ್ಟಿರಬಹುದೆ? ಯಾರದು? ಈ ಪ್ರಶ್ನೆಗೆ ಅಂಡರ್‌ವರ್ಲ್ಡ್ ಮೂಲಗಳು ಬೆಟ್ಟು ಮಾಡುವುದು ಕರಾಟೆ ಇಕ್ಬಾಲ್ ಎಂಬ ಪುಡಿ ಸಿನಿಮಾ ನಟನನ್ನು!

ಇಲ್ಲಿಗೆ ಹತ್ತು ವರ್ಷಗಳ ಹಿಂದೆ ತೆರೆಕಂಡ 'ಮಿಸ್ಟರ್ ಎಕ್ಸ್' ಎಂಬ ಸೆಕ್ಸ್ ಸಿನಿಮಾ ದರ್ಜೆಯ ಚಿತ್ರಕ್ಕೆ ಹೀರೋ ಆಗಿದ್ದವನು ಇಕ್ಬಾಲ್ ರಾಜಾ ಆಲಿಯಾಸ್ ಕರಾಟೆ ಇಕ್ಬಾಲ್. ಸದ್ಯ ಮಾರ್ಕೆಟ್ ದೇವಿಯ ಪಕ್ಕಾ ಬಂಟನಾಗಿರುವ ಈತ ಕೆಲ ಕಾಲ ಮುಂಬಯಿಯಲ್ಲಿದ್ದ. ಬಿಲ್ಡರ್ ಸುಬ್ಬರಾಜು ಹಂತಕ ಯೂಸೂಫ್ ಬಚಖಾನನಿಗೆ ಈತನೇ ಪರಮಾಪ್ತ. ಬಚಖಾನನ ತಮ್ಮ ರಜಾಕ್‌ನನ್ನು ಕೆಲಕಾಲ ತನ್ನ ಮನೆಯಲ್ಲಿಟ್ಟುಕೊಂಡಿದ್ದ. ಸಾಕಷ್ಟು ನೆರವನ್ನೂ ಕಲ್ಪಿಸಿದ್ದ. ಇಂಥ ನಟೋರಿಟಿಯಿಟ್ಟುಕೊಂಡೇ ಬನ್ನೇರಘಟ್ಟ ರಸ್ತೆಯ ಕೆಲ ಲ್ಯಾಂಡ್ ಡೀಲುಗಳಿಗೆ ಕರಾಟೆ ಇಕ್ಬಾಲ್ ಕೈಹಾಕಿದ್ದ. ಅದಕ್ಕೂ ಮುನ್ನ ಬಚಖಾನನ ತಮ್ಮ ರಜಾಕ್ ಇದೇ ಬನ್ನೇರಘಟ್ಟ ರಸ್ತೆಯ ಲ್ಯಾಂಡ್ ಖದೀಮ ಬಳೇಕಳ್ಳಿ ಸಂಪತ್ತು ಎಂಬಾತನಿಗೆ ಬೆದರಿಕೆ ಕರೆ ಮಾಡಿ ಸಿಸಿಬಿ ಪೊಲೀಸರಿಂದ ಎನ್‌ಕೌಂಟರ್ ಆಗಿದ್ದ.

ರಜಾಕ್ ಎನ್‌ಕೌಂಟರ್ ನಂತರ ಕರಾಟೆ ಇಕ್ಬಾಲ್‌ಗೆ ರವಿ ಪೂಜಾರಿಯ ಲಿಂಕ್ ಸಿಕ್ಕಿತೆ? ಸದ್ಯ ಬೆಳಗಾವಿ ಜೈಲಲ್ಲಿರುವ ಬಚಖಾನನೇ ಲಿಂಕ್ ಮಾಡಿಕೊಟ್ಟನೆ? ಅಥವಾ ಬನ್ನೇರುಘಟ್ಟ ಸುತ್ತಮುತ್ತ ಸಿಕ್ಕಾಪಟ್ಟೆ ಲ್ಯಾಂಡ್ ಖರೀದಿಗಿಳಿದಿರುವ ಮತ್ತೊಬ್ಬ ಡಾನ್ ಕಡೆಯವರು ರವಿ ಪೂಜಾರಿಯನ್ನು ಸಮೀವುಲ್ಲಾನ ವಿರುದ್ಧ ಛೂ ಬಿಟ್ಟಿರಬಹುದೆ? ಇದು ಪೂಜಾರಿಯ ಮುಂಬಯಿಯ ಲಿಂಕ್ ಮತ್ತು ಮಂಗಳೂರು ಮೂಲದ ಸಂಬಂಧದ ಮುಂದುವರಿಕೆಯೆ?

ಇದು ಆತನ ಪಬ್ಲಿಸಿಟಿ ಸ್ಟಂಟ್ ಎಂದೇ ಮುಂಬಯಿ ಪೊಲೀಸರು ನಿರ್ಧರಿಸಿಬಿಟ್ಟರು. ಬರುಬರುತ್ತ ರವಿಪೂಜಾರಿ ಮುಂಬಯಿಯನ್ನು ಹೇಗೆ ನಡುಗಿಸಿದನೆಂದರೆ, 2006 ರ ಜೂನ್ 14 ರಂದು ಖ್ಯಾತ ಚಿತ್ರ ನಿರ್ದೇಶಕ ಮಹೇಶ್‌ಭಟ್ ಛೇಂಬರಿಗೇ ಹುಡುಗರನ್ನು ನುಗ್ಗಿಸಿ ಫೈರ್ ಮಾಡಿಸಿಬಿಟ್ಟ. ಆನಂತರ ಕರಿಷ್ಮಾ ಕಪೂರ್ ಗಂಡ ಸಂಜಯ್ ಕಪೂರ್‌ಗೂ ಕೊಲೆ ಬೆದರಿಕೆ ಹಾಕಿ ಐವತ್ತು ಕೋಟಿ ಮಡಗು ಎಂದ. ಟೀವಿಯವರಿಗೆ ತಾನೇ ಫೋನ್ ಮಾಡಿ ಮಹೇಶ್‌ಭಟ್ ದಾವೂದ್ ಇಬ್ರಾಹಿಂನ ಏಜೆಂಟನೆಂದೂ ಆತನನ್ನು ಕೊಲ್ಲದೇ ಬಿಡುವುದಿಲ್ಲ ಎಂದೂ ಮತ್ತೊಂದು ಹೇಳಿಕೆ ಕೊಟ್ಟ.

ಬಹುಶಃ ಮಹೇಶ್ ಭಟ್ ಮತ್ತು ಸಂಜಯ್ ಕಪೂರ್ ಇಬ್ಬರೂ ಅಷ್ಟಿಷ್ಟು ಕೊಟ್ಟು ಕೈ ಮುಗಿದಿರಬೇಕು!




ಛೋಟಾ ಶಕೀಲ್

ಮಹೇಶ್ ಭಟ್ ಕಛೇರಿಯ ಮೇಲೆ ದಾಳಿ ನಡೆದದ್ದೇ ತಡ ರವಿ ಪೂಜಾರಿಯ ಪತ್ನಿ ಪದ್ಮಾ ದೇಶ ಬಿಟ್ಟೇ ಪರಾರಿಯಾದಳು. ಅದೇ ಹೊತ್ತಿಗೆ ಕ್ರೈಂಬ್ರಾಂಚ್‌ನ ಇನ್ಸ್‌ಪೆಕ್ಟರ್ ವಿಜಯಸಲಸ್ಕರ್ ರವಿಪೂಜಾರಿ ಗ್ಯಾಂಗ್‌ನ ಶಾರ್ಪ್ ಶೂಟರುಗಳಾದ ಕುಂದನ್‌ಸಿಂಗ್, ಪ್ರವೀಣ್ ಶೆಟ್ಟಿ, ರೋಷನ್‌ಸೇಠ್ ಮತ್ತು ನವೀನ್ ಶೆಟ್ಟಿಯನ್ನು ಎನ್‌ಕೌಂಟರ್ ಮಾಡಿ ಕೊಂದುಬಿಟ್ಟರು. ಇಷ್ಟು ವಿಚಿತ್ರವೆಂದರೆ ಆತನ ದಾವೂದ್-ಛೋಟಾ ಶಕೀಲ್ ವಿರುದ್ಧವೇ ಕಿಡಿಕಾರುತ್ತಿದ್ದ ರವಿಪೂಜಾರಿ ತನ್ನ ಇಡೀ ತಂಡವನ್ನು ಛೋಟಾ ಶಕೀಲ್ ತಂಡದೊಂದಿಗೆ ವಿಲೀನಗೊಳಿಸಲು ಮುಂದಾಗಿ ಬಿಟ್ಟ!

ಇದು ಗೊತ್ತಾಗಿಯೇ ಆತನ ಇತರೇ ಸಹಚರರಾದ ವಿಜಯ್ ಮೋಹಿತೆ, ಸಮೀರ್ ಮಾಣಿಕ್, ಸುಖೇಶ್ ಶೆಟ್ಟಿ ಮುಂತಾದವರು ಥಾಣೆ ಜೈಲಿನಲ್ಲಿದ್ದ ಛೋಟಾರಾಜನ್ ಬಲಗೈ ಬಂಟ ವಿಕ್ಕಿ ಮಲಹೋತ್ರಾನ ಜೊತೆ ಕೈಜೋಡಿಸಿಬಿಟ್ಟರು. ಆವತ್ತಿನಿಂದ ಮತ್ತೆ ಹಳೇ ಧಣಿ ರಾಜನ್‌ನನ್ನು ಓಲೈಸಲು ಯತ್ನಿಸುತ್ತಲೇ ಇದ್ದಾನೆ ಪೂಜಾರಿ. ಆತನ ಮುಖ್ಯ ಉದ್ದೇಶವೇ ವಸೂಲಿ. ಅದಕ್ಕೊಂದು ಸಮರ್ಥನೆ ಬೇಕಲ್ಲ. ಅದಕ್ಕೆಂದು ತಾನು ದಾವೂದ್ ವಿರೋಧಿ ಎಂಬ ಸೋಗು ಹಾಕುತ್ತಲೇ ಇದ್ದಾನೆ. ವಿಶೇಷವಾಗಿ ಮುಂಬಯಿಯ ಮುಸ್ಲಿಂ ಬಿಲ್ಡರುಗಳನ್ನು ಸುಲಿಯುತ್ತಾನೆ. ಈಗ ಆತನ ಒಂದು ಕೈ ಬೆಂಗಳೂರಿಗೆ ಚಾಚಿದೆ. ವಾಸ್ತವವೇನೆಂದರೆ ಸ್ಥಳೀಯವಾಗಿ ಆತನಿಗೆ ಮಾಹಿತಿ ಕೊಡುತ್ತಿರುವುದು ಯಾರು? ಯಾರೇ ಲೋಕಲ್ ಪಾತಕಿಯೊಬ್ಬನ ನೆರವಿಲ್ಲದೇ ಇಂಥಾದ್ದೊಂದು ಶೂಟ್ ಔಟ್ ಮಾಡಿಸಲು ಹೇಗೆ ತಾನೇ ಸಾಧ್ಯ?

ಈ ಪ್ರಶ್ನೆಗೆ ಪೊಲೀಸರೇ ಉತ್ತರಿಸಬೇಕಲ್ಲವೆ?

ತೋಪೆದ್ದ 'ಪೂಜಾರಿ'ಗೂ ದಾಳಿಗೂ ಯಾವ ನಂಟು?




ಇತ್ತೀಚೆಗೆ ತೆರೆಕಂಡು ತೋಪೆದ್ದ 'ಪೂಜಾರಿ' ಚಿತ್ರಕ್ಕೂ ಈಗ ಶಬನಮ್ ಡೆವಲಪರ್ಸ್ ಮೇಲಿನ ದಾಳಿಗೂ ಏನು ಸಂಬಂಧ?

ಇವೆರಡಕ್ಕೂ ಸೂತ್ರ ಸಂಬಂಧಗಳಿಲ್ಲ ನಿಜ. ಆದರೆ ದೂರದ ಆಸ್ಟ್ರೇಲಿಯಾದಲ್ಲೋ, ಮೊರಾಕ್ಕೋದಲ್ಲೋ ಅಡಗಿಕೂತ ರವಿ ಪೂಜಾರಿಗೆ 'ಇದು ನಿನ್ನ ಕುರಿತೇ ಬಿಡುಗಡೆಯಾದ ಸಿನಿಮಾ' ಎಂದು ಆತನ ಬೆಂಗಳೂರಿನ ಏಜೆಂಟ್ ತಲೆ ತಿಕ್ಕಿದ್ದಾನೆ. ತನ್ನ ಹೆಸರಲ್ಲಿ ಸಿನಿಮಾ ತೆರೆಕಂಡು, ಅದರ ಬಿಸಿ ಆರುವ ಮೊದಲೇ ತನ್ನ ಕೀರ್ತಿಗೆ ತಕ್ಕಂಥ 'ಬಾಂಬ್' ಒಂದನ್ನು ಸಿಡಿಸುವುದು ಪೂಜಾರಿಯ ಉದ್ದೇಶವಾಗಿತ್ತೆ? ನಿಜವೋ ಸುಳ್ಳೋ: ಹಾಗಂಥ ಒಂದಿಬ್ಬರು ಪೊಲೀಸ್ ಅಧಿಕಾರಿಗಳಂತೂ ನಂಬಿಕೊಂಡಿದ್ದಾರೆ. 'ಪೂಜಾರಿ' ಚಿತ್ರದ ನಿರ್ಮಾಪಕ ಮಲ್ಲಿಕಾರ್ಜುನ ಕೂಡ ನೆಲಗಳ್ಳನೇ. ಇದರ ನಿರ್ದೇಶಕ ಶರಣ್ ದಾವಣಗೆರೆ ಮೊದಮೊದಲು ಇದು ಮುಂಬಯಿ ಡಾನ್ ರವಿ ಪೂಜಾರಿಯ ಕತೆಯುಳ್ಳ ಚಿತ್ರವೆಂದೇ ಬಂಡಲ್ ಬಿಟ್ಟಿದ್ದ. ಹೀರೋ ಆದಿ ಲೋಕೇಶ್ ರವಿ ಪೂಜಾರಿಯಾಗೇ ನಟಿಸಿದ್ದಾನೆಂಬ ರೂಮರ್ ಕೂಡ ಗಾಂಧಿನಗರದಲ್ಲಿ ಹಬ್ಬಿತ್ತು. ತನ್ನ ಮೇಲೆ ಸಿನಿಮಾಗಳೇ ಬರುತ್ತಿರುವಾಗ ಕೀರ್ತಿಗೆ ತಕ್ಕಂಥ ಸಾಹಸ ಮಾಡಬೇಕಲ್ಲ; ಅದಕ್ಕೆ ಇದೇ ಸೂಕ್ತ ಸಮಯವೆಂದೆನಿಸಿ ರವಿ ಪೂಜಾರಿ ಇಂಥದೊಂದು ದುಸ್ಸಾಹಸಕ್ಕೆ ಕೈಯಿಟ್ಟ ಅಂತಾ ಅಸಂಬದ್ಧ ತರ್ಕವೂ ತೇಲುತ್ತಿದೆ.

ನಿಜವಾದ ಯೀರೊ ಅಂದ್ರೆ ಅಂಬುರೀಸ ಕಂಡ್ಳ

ಕಾವೇರಿ ನದಿಗೆ ಕಲ್ಲು ಎಸೆದಂತೆ ರಾಜೀನಾಮೆ ಕೆರೆದು ಬಿಸಾಡಿದ ಅಂಬರೀಷ್ ಬಗ್ಗೆ ಕಾಳಮಾವ ದುಟ್ಟುಗೆಯ ಮಾತನಾಡುತ್ತಿದ್ದರೆ ಜುಮ್ಮಿ ಬೇಸರದಿಂದ ಲೋಟಗರಿದಳು. ಸೀರನೂ ಕೂಡ ಅಂಬಿ ಕ್ರಮವನ್ನ ಮೆಚ್ಚಿ



"ನಿಜವಾಗ್ಲು ಗಂಡು ಅಂದ್ರೆ ಅವುನು ಕಣಯ್ಯ. ಮಂತ್ರಿಗಿರಿ ಹೋದ್ರೆ ನನ್ನ ಕ್ವಪ್ಪ ಹೋಯ್ತು ಅಂತ ರಾಜೀನಾಮೆ ಕ್ಯರದು ಬಿಸಾಡ್ಯವುನಲ್ಲಾ, ಇವತ್ಯಾವಳಿದ್ದಳು ಅವುನಂಗೆ ನಮ್ಮರಾಜ್ಯದಲ್ಲಿ" ಎಂದು ಬೀಡಿ ಹಚ್ಚಿದ.

"ಕರ್ನಾಟಕದ ಮಾನ ಉಳಿಸಿದೋನು ಅವುನೆಯ ಕಂಡ್ಳ" ಎಂದ ಕಾಳಮಾವ.

"ಅಲ್ಲಾ ಉಳದೋರು ಬಾಯಿಬುಡದ್ಯಂಗೆ ಅಂತ ಯೇಚನೆ ಮಾಡ್ತ ಕುಂತಿರುವಾಗ, ಇವುನು ತಗದತ್ತಗೆ ಮಕ್ವದದಂಗೆ ರಾಜನಾಮೆನೆ ಯಸ್ದ ಹೋಗತ್ತಗೆ" ಎಂದ ಉಗ್ರಿ.

"ಅವುನು ರಾಜನಾಮೆ ಕೊಟ್ಟರದು ಸರಿಲ್ಲ ಅಂದ ವುರಲ್ಲಾ?" ಎಂದಳು ಜುಮ್ಮಿ.

"ಯಾರ್‍ಯಾರು ಅಧಿಕಾರದಲ್ಲವುರೊ ಅವುರ್‍ಕಲ್ಲ ಅಂಗೆ ಕಣೆ ಅನ್ನದು. ಇವತ್ತು ಅವುನ ರಾಜನಾಮೆ ಕೊಡ ಬಾರದಿತ್ತು ಅನ್ನೋರ್‍ಕಲ್ಲ ಅವತ್ತು ಕೊಡ್ಳಿ ಅಂದಿದ್ರು ಗೊತ್ತೆ?"

"ಯಾವನೇನಾರ ಅನ್ನಿಕಂಡ್ಳ, ಅಂಬುರೀಸು ಮಾಡಿ ರದು ನೂರುಕು ನೂರು ಸರಿ. ಯಾಕೆ ಅಂತಿಯೋ, ಅವುನು ಮಂಡ್ಯ ಜಿಲ್ಲೆಯಿಂದ ಗೆದ್ದು ಹೋಗ್ಯವುನೆ, ಮಂಡ್ಯ ಜಿಲ್ಲೆ ಜನಕೆ ಅನ್ಯಾಯ ಆದಾಗ ಅವುನ್ಯಾಕಿರ ಬೇಕು ಅಲ್ಲೀ" ಎಂದ ಕಾಳಮಾವ.

"ಅದು ನಿಜವೆಯ, ಆದ್ರು ಜನ ಅವುನ ವಿಚಾರದಲ್ಲಿ ಸಣ್ಣದಾಗಿ ಯೋಚನೆ ಮಾಡಿದ್ರು ಕಣಮಾವ."

"ಏನೇಚನೆ ಮಾಡಿದ್ರೂ?"

"ಅವತ್ತು ಮಾದೇಗೌಡನ ಸಬಿಗೆ ಬರಲಿಲ್ಲ ಅಂತ ಕೂಗಾಡಿದ್ರು. ಅವುನ್ನ ಗೆಲ್ಸಿಸಿ ತೆಪ್ಪು ಮಾಡಿದೊ ಅಂದ್ರು. ಕೇಂದ್ರದ ಮಂತ್ರಿ ಅವುನು ಎಲ್ಲಿದ್ದನೊ ಬರಕ್ಕೆ ಏನು ತೊಂದ್ರೆ ಆಗ್ಯದೊ ಅಂತ ಯೋಚನೆ ಮಾಡದೆ, ಬಾಯಿಗೆ ಬಂದಂಗೆ ಬೋದ್ರು. ಗೇರಾವು ಮಾಡಿದ್ರು. ಕಲಾವಿದರು ಪ್ರತಿಭಟನೆ ಮಾಡಿದ್ರಲ್ಲ ಆ ಸಭೆಗೆ ಬರಲಿಲ್ಲ ಅಂತ ಕೂಗಾಡಿದ್ರು. ಇಂತ ಟೇಮಲ್ಲಿ ತಾಳಮೆಯಿಂದ ಯೇಚನೆ ಮಾಡದ್ನೆ ಕಲಿಲಿಲ್ಲವಲ್ಲಾ ನಮ್ಮ ಜನಾ ಆ" ಎಂದ ಉಗ್ರಿ.

"ತಾಳಮೆ, ನಿಧಾನ ಅನ್ನದ ಇವು ಯಾವತ್ತು ಕಲ್ತಿದ್ದುವುಲ? ಸಮುಂದಪಟ್ಟ ವ್ಯಕ್ತಿಯ ಮಾತಾಡಿಸಿ ಮುಂದಿರದ ಯೇಚನೆ ಮಾಡನ ಅನ್ನದೆ ಇವುಕೆ ಬರಲಿಲ್ಲ" ಎಂದ ಕಾಳಮಾವ.

"ಈಗ ಯಲ್ಲಾರಿಗೂ ಉತ್ತರ ಕೊಟ್ಟನಲ್ಲ ಬುಡು" ಎಂದ ಸೀರ.

"ಈರೊ ಕಣಮಾವ ಅವುನು. ಯಾರಿಂದ ಹೇಳಿಸಿಗಳಂಗಿದ್ದನೂ?" ಎಂದಳು ಜುಮ್ಮಿ.

"ಈರೊ ಆದ್ರುವೆ ಏಕದಂ ಈರೊ ಆದೋನಲ್ಲ ಕಂಡ್ಳೆ ಅವನೂ, ಮನೆ ಆಳಿನ ಪಾತ್ರನೂ ಮಾಡಿಕಂಡು ಬಂದೋನು."

"ಮನೆ ಆಳಿನ ಪಾತ್ರ ಮಾಡಿದ್ದನೇನ್ಲ ಉಗ್ರಿ?" ಎಂದು ಜುಮ್ಮಿ ಅಚ್ಚರಿಗೊಂಡಳು.

"ಊ ಕಣೆ. ಆ ರವಿ ಅನ್ನೊ ನಿರ್ದೇಶಕ ಬನಶಂಕರಿ ಅಂತ ಯಂತದೊ ಕ್ಯಟ್ಟ ಸಿನುಮ ತಗದವುನೆ. ಅದರಲ್ಲಿ ಅಂಬಿ ಯೀರೋನೇ ಮಾಡಬವುದಿತ್ತು. ಆದ್ರೆ ಪಾಪ ಅಶ್ವತ್ಥನ ಮನೆ ಆಳಿನ ರೋಲು ಮಾಡ್ಯವುನೆ ಗೊತ್ತೆ?"

"ಅದಕಿಂತ್ಲುವೆ ಬಿಳಿ ಹೆಡತಿ ಅನ್ನೊ ಸಿನುಮ ದಲ್ಲಿ ವಸದಾಗಿ ಮದಿವಾಗಿರೋ ಗಂಡು ಪೆಟಗೆ ಹಿಡಕಂಡು ಹೆಡತಿ ಕರಕಂಡು ವಲ್ದ ಒದಿನಮ್ಯಾಲೆ ಊರಿಗೋಗದು ಮಾಡ್ಯವುನೆ ಕಂಡ್ಳ. ಅದಷ್ಟೆಯ ಅವುನು ಮಾಡಿರೊ ಪಾರ್ಟು."

"ಅಲ್ಲಿಗೆ ತಿಳಕ ನೀನು, ಪಾತ್ರ ಅಂದ್ರಾಯ್ತು ಅದೀಟುದ್ದ ಇರ್ಲಿ, ಮಾರುದ್ದ ಇರ್ಲಿ ಮಾಡೋನು ಅಂದ್ರೆ ಅವುನು ನಿಜವಾದ ಕಲಾವಿದ."

"ದ್ವಡ್ಡ ಮನ್ಸ ಬುಡ್ಳ ಅವುನು" ಎಂದ ಸೀರ ಆಖ್ಯೆರಾಗಿ.

"ಅದಕೆ ಆಲವೆ ಮಾವ ಪುಟ್ಟಣ್ಣ ಎಷ್ಟು ಸಿನುಮ ತಗುದ್ನೋ ಅಷ್ಟರಲ್ಲು ಅಂಬುರೀಸನಿಗೆ ಪಾತ್ರ ಕೊಡ್ತ ಬಂದ. ಅದೇ ವಿಷ್ಣುವರ್ಧನಿಗೆ ಒಂದೆ ಒಂದು ಪಾರ್ಟು ಕೊಟ್ಟು ಗದುಮಿದ್ದ."

"ಅಂಬರೀಸ್ ಮಾಡಿರೊ ವಳ್ಳೆ ಪಾರ್ಟ್ಯಾವುದು ಹೇಳ್ಳ?"

"ರಂಗನಾಯಕಿ ಕಣೆ."

"ಅದರಲ್ಲೇನು ಮಾಡ್ಯವುನೆ ಹೇಳು?"

"ಮರಿಯಂಗೆ ಇಲ್ಲ ಕಣೆ ಅಂತ ಪಾರ್ಟು ಮಾಡ್ಯ ವುನೆ. ನಾಟಕದ ಕಂಪ್ನಿಲಿ ಇದ್ದಕಂಡು ಯಾವ ಪಾರ್ಟು ಕೊಟ್ರು ಮಾಡ್ತನೆ. ಆರತಿಯ ಲವ್ ಮಾಡ್ತನೆ. ಅದು ಯಂತ ಲವ್ವು ಗೊತ್ತೆ? ಅವುಳಿಗೇ ಗೊತ್ತಿರದಿಲ್ಲ ಅವುಳು ಯಾರ್ನೊ ಮದಿವಾದ್ರು ಕೂಡ ಅವುಳಿಗೇನೂ ತೊಂದ್ರೆ ಮಾಡದಂಗೆ ಗಂಡ ಬುಟ್ಟು ಬಂದೋಳ ಕಡೆವರಿಗೂ ಕಾಪಾಡ್ತನೆ. ಇಂತ ರೋಲು ನಿನಿಗೆ ಗೆಪ್ತಿಯಿಲ್ಲವಲ್ಲ ಹೇಳು?"

"ಏ ಆಗ ನಾವು ಒಂಟಿ ಸಲಗ, ಗೂಂಡಾಗುರು, ಅಮರನಾಥ, ಚಕ್ರವ್ಯೂವ ಅಂತ ನೋಡಿಕಂಡು ಇದ ಮರತೆ ಬುಟ್ಟದ್ದೊ ಕಂಡ್ಳ."

"ಅವುನ ವಳಗಡೆ ಯಂತ ಕಲಾವಿದ ಅವುನೆ, ಅವುನ ಮನಸು ಯಂತೆದು ಅಂತ ಪುಟ್ಟಣ್ಣನಿಗೆ ಮಾತ್ರ ಗೊತ್ತಿತ್ತಂತೆ ಕಣೇ. ಅದ್ಕೆ ಅವುನಿರಗಂಟ ಮ್ಯರಿಸಿದ್ದ. ಯಾವತ್ತು ಪುಟ್ಟಣ್ ತೀರೋದ್ನೆ ಅವತ್ತೆ ಅಂಬಿ ಇನ್ನು ನನ್ನ ಕೈಲಿ ಆಕ್ಟಿಂಗ್ ತಗಿಯೋ ಅಂತ ಮಗ ಯಾವನೂ ಇಲ್ಲ ಅಂತ ರಾಜಕೀಯಕ್ಕೆ ಬಂದ."

"ಜಂತಾದಳ ಸೇರಿದ್ದ ಆಲವೆ ಅಂಬರೀಸ?"

"ಎಜ್ಜಾಟ್ಳಿ ಕರಟ್ ಕಣಕ್ಕ. ನಾನು ಆಗ್ಲೆ ಜಂತಾದಳ ಸೇರಿದ್ದು. ಆದ್ರೆ ಅಲ್ಲಿರಕ್ಕಾಗದೆ ಓಡಿಬಂದಾ" ಎಂದ ವಾಟಿಸ್ಸೆ.

"ಅದ್ಯಾಕೋಡಿ ಬಂದಾ?"

"ಅಲ್ಲೀ ದ್ಯಾವೇಗೌಡನ ಕಣ್ಣು ನೋಡಿದ. ಅವುನು ತನ್ನ ಮಕ್ಕಳ ಕಡೆ ನೋಡತಿದ್ದ ನೋಟ ನೋಡಿದ.



ಮದ್ದೆ ಅಂಬಿ ಭಾಳ ಸೂಕ್ಷ್ಮ ಕಣ್ಣಿರೊ ಮನ್ಸ. ಅವುನ ಕಣ್ಣು ಒಂಥರಾ ಎಕ್ಸರೆ ಕಣ್ಣಿದಂಗೆ ಕಣಕ್ಕ. ಏನೇ ದೋಶ ಇದ್ರು ಕಂಡಿಡಿದು, ಏನೂ ಮಾತಾಡದಂಗೆ ದೂರ ಹೋಗಿ ಬುಡತನೆ."

"ಅಂಗರೆ ದ್ಯಾವೇಗೌಡೇನು ಅಂತ ಆಗ್ಲೆ ಕಂಡು ಕೊಂಡಿದ್ನೆ?"

"ಊ ಕಣಕ್ಕ. ಅದ್ಕೆ ಅಲ್ಲಿಂದ ಬಂದೋನು ಇಲ್ಲಿ ಗಂಟ ಒಂದೂ ಮಾತಾಡಿಲ್ಲ."

"ಅದೊಂದು ದ್ವಡ್ಡಗುಣ ಕಣೊ ಅವುನಲ್ಲಿ. ಯಾರ್ನು ಟೀಕೆ ಮಾಡದಿಲ್ಲ" ಎಂದ ಉಗ್ರಿ.

"ಇವತ್ತು ಅಂಬುರೀಶ್ ಜಾಗದಲ್ಲಿ ನಾನಿದ್ರುವೆ ರಾಜೀನಾಮೆ ಕೊಟ್ಟು ಇದೇ ತರ ಯೀರೋ ಆಯ್ತಿದ್ದೆ ಕಣಕ್ಕ" ಎಂದ ವಾಟಿಸ್ಸೆ.

"ಯಾರಾರ ಸಕ್ಕರು ಸುಮ್ಮಿರ್ಲಿ."

"ಅಂಗಂತಿಯಾ?"

"ಅಲ್ಲಾ ಕಣೊ, ಅಂಬರೀಶ್ ತರನೇ ಇನ್ನ ಇಪ್ಪತ್ತೇಳು ಜನವುರೆ. ಅವುರು ರಾಜಿನಾಮೆ ಸುದ್ದಿಗ ಮಾತಾಡ್ತಯಿಲ್ಲ, ಅಂತದ್ರಲ್ಲಿ ಅಂಬಿ ರಾಜಿನಾಮೆ ಕೊಟ್ಟ ಅಂದ್ರೆ ಸದರವಾಗಿ ಮಾತೇನೊ?" ಎಂದ ಉಗ್ರಿ.

"ನೋಡೋ, ಅಂಬುರೀಸು ಮಂತ್ರಿಯಾಗಲಿ ಆಗದೆಯಿರ್ಲಿ, ಅವುನಿಗಿರೊ ಬೆಲೆ ಇದ್ದೇ ಇರತದ ಹಿಂದೆಮುಂದೆ ಹತ್ತಾರು ಕಾರು ಬಂದೇ ಬತ್ತವ ಯಾಕೇಳು? ಅವುನು ಸಿನುಮಾ ಆಕ್ಟರು, ಯೀರೋ ಆಗಿದ್ದೋನು, ಅದ್ಕೆ ಅವುನು ಯಾವತ್ತು ಸ್ಟಾರೆಯ ಅಂತೋನು ಮಂತ್ರಿಯಾಗಿದ್ರು ಅಷ್ಟೆ, ಆಗದೆ ಯಿದ್ರು ಅಷ್ಟೆ, ಅದ್ಕೆ ಈಜಿಯಾಗಿ ರಿಜೈನ್ ಮಾಡಿಬುಟ್ಟವುನೆ" ಎಂದು ವಾಟಿಸ್ಸೆ ಹೇಳುತ್ತಿರುವಾಗ ಸಿಟ್ಟಾದ ಕಾಳಮಾವ

"ಲೇ ಹಿಟ್ಕಕ್ಕ ಬಡ್ಡೆತ್ತುದ್ದೆ. ಇಸ್ಟೆ ಏನ್ಲ ನೀನಂಬು ರೀಸನ್ನು ಅರ್ಥ ಮಾಡಿಕಂಡಿದ್ದು, ಮಹಾಕಂಡಿರೊನಂಗೆ ಪುರಾಣ ಊತ್ತಾಯಿದ್ದಿಯಲ್ಲ? ಜನಗಳಿಂದ ಆರಿಸೊ ಗಿದ್ಕೆ, ಅವುರಿಗೆ ತೊಂದ್ರೆ ಆಗ್ಯದೆ. ಅದ್ಕೆ ರಾಜಿನಾಮೆ ಕೊಟ್ಟೆ ಅನ್ನೊ ಅವುನ ಮನಸನೇ ನೀನು ಅರ್ಥ ಮಾಡಿಕಳ್ಳಿಲವಲ್ಲ ಥೂ ನಿನ್ನವುನ್."

"ಸಿಟ್ಟಾಗಬೇಡ ದೊಡಪ್ಪ, ನಾನು ಅದೇ ಪಾಯಿಂಟಗೆ ಬತ್ತಿನಿ. ಅವುನ ಸ್ಟಾರ್‌ಗಿರಿ ಎದ್ರಿಗ ಮಂತ್ರಿಗಿರಿ ತೀರ ತೃಣ ಮಾತ್ರ, ಅಂದ್ರೆ ಯಕಶ್ಚಿತ ಹುದ್ದೆ. ಮತ್ತೆ ತಾತ್ಕಾಲಿಕವಾದದ್ದು. ಅದ್ಕೆ ಈಜಿಯಾಗಿ ರಾಜಿನಾಮೆ ಕೊಟ್ಟವುನೆ. ಅದೇ ದೇವೇಗೌಡನ ಮನ ಮಕ್ಕಳು ಕೊಡ್ಳಿ, ಮಾರನೆ ದಿನದಿಂದ್ಲೆ ಮನೆ ಹತ್ರಕ ನಾಯಿಗಳೂ ಹೋಗದಿಲ್ಲ."

"ನೀನಂಗೆ ತಿಳಕಬ್ಯಾಡ ಕಣೊ ವಾಟಿಸ್ಸೆ" ಎಂದು ಉಗ್ರಿ ಹೇಳಿದ. ಕೂಡಲೆ ತುಸು ಯೋಚಿಸಿದ ವಾಟಿಸ್ಸೆ.

"ಎಸ್ ನಾಯಿಗಳ ವಿಷಯದಲ್ಲಿ ಅಂಗ ಮಾತಾಡಂಗಿಲ್ಲ. ಯಾಕಂದ್ರೆ, ಕುಮಾರಸ್ವಾಮಿ ಫ್ಯಾಮಿಲಿ ಹತ್ರ ದುಡ್ಡದೆ. ಅದಿರಗಂಟ ಅಲ್ಲಿಗ ನಾಯಿಗಳು ಹೋಯ್ತವೆ, ದೇವೇಗೌಡ್ರ ವೈ ಗಳ ಕಂಡು ಬಗಳತವೆ, ಬಾಲ ಅಲ್ಲಾಡುಸ್ತವ ಬಿದ್ದು ವದ್ದಾಡ್ತವೆ. ಅದ ನೋಡಿ ದೇವೇಗೌಡ ಪಕ್ಕದಲ್ಲಿರೊ ಬಿಸ್ಕತ್ ಪ್ಯಾಕೀಟಗೆ ಕೈ ಹಾ ಬಂದ್ ಯಸಿತನೆ. ಇವು ತಿನಕಂಡು ಅಲ್ಲಿರತವೆ."

"ದ್ಯಾವೇಗೌಡನ ಸೊಲ್ಲೇ ಇಲವಲ್ಲಾ" ಎಂದ ಸೀರ

"ಮಾತಾಡ್ಯವುನೆ ಕಣೊ. ಕರ್ನಾಟಕ ಬಂದ ಮಾಡದರಿಂದ ಪ್ರಯೋಜನ ಇಲ್ಲ ಅಂದವುನೆ ರಾಜಿನಾಮೆ ಕೊಟ್ರೆ ಸಮಸ್ಯೆ ಬಗೆಹರಿಯದಿಲ ಅಂದವುನೆ. ಸುಪ್ರೀಂಕೋರ್ಟಿಗೆ ಹೋದ್ರು ಪ್ರಯೋಜ ಇಲ್ಲ ಅಂದವುನೆ. ಹಿಂಗೆ ಏನೇನೊ ಮುಲುಕ್ತ ಅವುನಪ್ಪ" ಎಂದ ಉಗ್ರಿ.

"ಮುಲುಕ್ಲಿ ಬುಡು ಇನ್ನವುಂದಷ್ಟೆ ಅಲ್ಲವೆ?"

"ಎಲ್ಲಿ ಮುಗದದೆ, ಯಲ್ಲ ಕಾವೇರಿ ಗಲಾಟಲಿದ ಅವುನು ಎಡೂರನ ಜಾಗಕ್ಕೆ ಯಾರ್ನ ತರಬೇಕು ಕುಮಾರಸ್ವಾಮಿ ಜಾಗಕ್ಕೆ ಯಾರ್ನ ತಳ್ಳಬೇಕು, ಅಂ ಯೇಚನೆ ಮಾಡ್ತ ಕುಂತವುನೆ."

"!?"


-ಬಿ. ಚಂದ್ರೇಗೌಡ

ಗಾಂಧಿಯನ್ನು ಕೊಂದದ್ದು ಬ್ರಾಹ್ಮಣರೇ?

"ಗಾಂಧಿಯವರನ್ನು ಕೊಂದದ್ದು ಬ್ರಾಹ್ಮಣರು" ಎಂದು ಮಹಾತ್ಮಾ ಗಾಂಧಿಯವರ ಮರಿಮೊಮ್ಮಗ ತುಷಾರ್ ಗಾಂಧಿಯವರು ಇತ್ತೀಚೆಗೆ ಸಂದರ್ಶನವೊಂದರಲ್ಲಿ ಹೇಳಿದ್ದು ಅಪಾರ ಚರ್ಚೆಗೆ ಗುರಿಯಾಗಿದೆ.

ಆದರೆ ವಾಸ್ತವ ಏನು?

ಗಾಂಧಿಯವರ ಕೊಲೆ ಪ್ರಕರಣಕ್ಕೆ ಇಡೀ ಬ್ರಾಹ್ಮಣ ಸಮುದಾಯವನ್ನು ದೂಷಿಸುವುದು ಅನ್ಯಾಯ ಎಂಬುದು 'ಲಂಕೇಶ್' ನಿಲುವು. ಏಕೆಂದರೆ ಹೇಗೆ ನಮ್ಮ ಸಂಸತ್ತಿನ ಮೇಲೆ ನಡೆದ ದಾಳಿ ಹಲವು ಮುಸಲ್ಮಾನರ ಕೃತ್ಯವಾಗಿತ್ತೋ, ಹಾಗೆಯೇ ಗಾಂಧಿಯವರ ಹತ್ಯೆಯಲ್ಲಿ ಹಲವು ಬ್ರಾಹ್ಮಣರು ಪ್ರಮುಖ ಪಾತ್ರ ವಹಿಸಿದ್ದರು. ಅಂದ ಮಾತ್ರಕ್ಕೆ ಸಂಸತ್ತಿನ ಮೇಲಿನ ದಾಳಿಗೆ ಇಡೀ ಮುಸ್ಲಿಂ ಸಮುದಾಯವನ್ನು ದೂರುವುದು ಹೇಗೆ ಅನ್ಯಾಯವಾಗುತ್ತೋ, ಹಾಗೆಯೇ ಗಾಂಧಿ ಹತ್ಯೆ ಕುರಿತಂತೆ ಇಡೀ ಬ್ರಾಹ್ಮಣ ಸಮುದಾಯವನ್ನು ದೂಷಿಸುವುದೂ ಅನ್ಯಾಯ.



ಇದನ್ನು ಅರಿತ ತುಷಾರ್ ಗಾಂಧೀಯವರು "ನಾನು ಇಡೀ ಬ್ರಾಹ್ಮಣ ಸಮುದಾಯವನ್ನು ದೂಷಿಸಿಲ್ಲ, ಬದಲಾಗಿ ಗಾಂಧಿಯವರ ಕೊಲೆ ಪ್ರಕರಣದಲ್ಲಿ ಮುಖ್ಯ ಪಾತ್ರ ವಹಿಸಿದ್ದವರೆಲ್ಲರೂ ಬ್ರಾಹ್ಮಣ ಜಾತಿಗೆ ಸೇರಿದವರೇ ಆಗಿದ್ದರು ಎಂದು ಹೇಳಿದ್ದೇನೆ" ಎಂದು ಸ್ಪಷ್ಟೀಕರಣ ನೀಡಿದ್ದಾರೆ. ಅವರ ಈ ಸ್ಪಷ್ಟೀಕರಣ ಸಕಾರಣವಾಗಿದೆ. ಏಕೆಂದರೆ ಮಹಾತ್ಮಾ ಗಾಂಧಿಯವರ ಕೊಲೆ ಕುರಿತಂತೆ ಪೊಲೀಸರು ಸಲ್ಲಿಸಿದ್ದ ಆರೋಪ ಪಟ್ಟಿಯಲ್ಲಿದ್ದವರೆಲ್ಲ, ವಿಚಾರಣೆ ಎದುರಿಸಿದವರೆಲ್ಲಾ, ಕೊನೆಗೆ ಗಲ್ಲಿಗೇರಿದ ಇಬ್ಬರೂ ಬ್ರಾಹ್ಮಣರೇ ಆಗಿದ್ದರು.

ಗಾಂಧಿಯನ್ನು ಕೊಂದದ್ದಕ್ಕೆ ಗಲ್ಲಿಗೇರಿದ ನಾಥೂರಾಮ್ ಗೋಡ್ಸೆಯಿಂದ ಹಿಡಿದು, ಆ ಕೊಲೆ ಪ್ರಕರಣದಲ್ಲಿ ಮುಖ್ಯ ಆರೋಪಿಗಳಾಗಿದ್ದ ವಿನಾಯಕ ದಾಮೋದರ ಸಾವರ್ಕರ್, ನಾರಾಯಣ ದತ್ತಾತ್ರೇಯ ಆಪ್ಟೆ, ರಾಮಕೃಷ್ಣ ಕರ್ಕಾರೆ, ಮದನ್‌ಲಾಲ್ ಪಾಹ್ವಾ, ಶಂಕರ್ ಕಿಸ್ತಯ್ಯ, ಗೋಪಾಲ್ ಗೋಡ್ಸೆ, ದಿಗಂಬರ್ ರಾಮಚಂದ್ರ ಬಾಗ್ಡೆ ಇವರೆಲ್ಲರೂ ಬ್ರಾಹ್ಮಣರೇ.

ಆದ್ದರಿಂದ ಬ್ರಾಹ್ಮಣರು ಗಾಂಧಿಯನ್ನು ಕೊಂದರು ಎಂದು ಹೇಳುವುದಕ್ಕಿಂತ ಗಾಂಧಿಯನ್ನು ಕೊಂದವರು ಬ್ರಾಹ್ಮಣರು ಎಂದು ಹೇಳುವುದೇ ಸೂಕ್ತ. ಈ ವಾಕ್ಯದಲ್ಲಿನ ಸೂಕ್ಷ್ಮತೆ ನಿಮ್ಮ ಅರಿವಿಗೆ ಬಂತೆ?

'ಗೂಂಡಾ' ಪದ ಬಂದದ್ದು ಎಲ್ಲಿಂದ?

ಒಂದು ಕುತೂಹಲಕಾರಿ ಅಂಶವನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನ್ನಿಸಿ ಈ ಪತ್ರ ಬರೆಯುತ್ತಿದ್ದೇನೆ.....

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸ ಓದಿದರೆ ಕಾಣುವುದು ಕೇವಲ ಮೇಲ್ಜಾತಿ ಹೆಸರುಗಳೇ. ಹಾಗಾದರೆ ಹಿಂದುಳಿದವರು ಸ್ವಾತಂತ್ರ್ಯಕ್ಕಾಗಿ ಹೋರಾಡಲೇ ಇಲ್ಲವೇ? ನಿಜವಾಗಿ ದೇಶಕ್ಕಾಗಿ ಹಿಂದುಳಿದವರು ಬ್ರಿಟಿಷರ ಗುಂಡು ತಿಂದು ಸತ್ತು ಹೋದರೂ ಅವರೆಲ್ಲಾ ಅನಾಮಿಕರಾಗಿಯೇ ಉಳಿದರು. ಕೇವಲ "ನಾಲಿ ಬಲ" ಹಾಗೂ "ಇಂಗ್ಲಿಷ್ ಜ್ಞಾನ"ವಿದ್ದವರು ಮಾತ್ರ ಸ್ವಾತಂತ್ರ್ಯ ಹೋರಾಟಗಾರರು ಎಂದು ಪೇಟೆಂಟ್ ಪಡೆದರು.


"ಗುಂಡ" ಎಂಬ ಶುದ್ಧ ಕನ್ನಡ (ಶಿವನ) ಹೆಸರು ಈಗ ಕೆಟ್ಟ ಅರ್ಥದ ಇಂಗ್ಲಿಷ್ ಡಿಕ್ಷನರಿ ಸೇರಿದೆ. ಆದರೆ ಗುಂಡ (ಗುಂಡಪ್ಪ) ಎಂಬ ಹೆಸರಿನ ಹಿಂದುಳಿ ವರ್ಗದ ಯುವಕನೊಬ್ಬ ಸಂಗೊಳ್ಳಿ ರಾಯಣ್ಣನಂತೆ ಬ್ರಿಟಿಷರ ವಿರುದ್ಧ ಮಲೆನಾಡಿನ ಏಕಾಂಗಿಯಾಗಿ ಗೆರಿಲ್ಲಾ ಯುದ್ಧ ನಡೆಸಿ ಬ್ರಿಟಿಷ್ ಅಧಿಕಾರಿಗಳ ಹಾಗೂ ಕಾ ಪ್ಲಾಂಟರ್‌ಗಳ ಕುಟುಂಬದವರ ಉಸಿರು ಕಟ್ಟಿಸಿದ್ದನಂತೆ. ಆದರೆ ಬ್ರಿಟಿಷರ ರೆಕಾರ್ಡ್‌ಗಳ ಇದೆಲ್ಲಿಯೂ ನಮೂದಾಗಲಿಲ್ಲ, ಕಾರಣ ಅಲ್ಪ ಕಾಲದಲ್ಲಿಯೇ ಅವನು ಸತ್ತು ಹೋ ಆದರೆ ನಂತರ ಇತರ ಪುಂಡ-ಪೋಕರಿಗಳಿಗೆಲ್ಲಾ ಬ್ರಿಟಿಷರು "ಗುಂಡಾ" "ಗೂಂಡಾ ಎಂಬ ಅನ್ವರ್ಥನಾಮ ಕೊಟ್ಟರಂತೆ. ಆ ಶಬ್ದವನ್ನು ಇಂದಿಗೂ ಅದೇ ಅರ್ಥದ ಸ್ವತಂತ್ರ ಭಾರತದ ಎಲ್ಲಾ ಭಾಷೆಗಳಲ್ಲೂ ಉಪಯೋಗಿಸುತ್ತಿರುವುದು ದೊಡ್ಡ ವಿಡಂಬ

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂ

ಆಕ್ಟೋಪಸ್ ಹಿಡಿತ


ಈ ಸಮಾಜಕ್ಕೆ ಕೆಲವು ಒತ್ತಾಯಗಳು, ಹಲವು ರೀತಿಯ ಮಾರ್ಗದರ್ಶನ ಬೇಕಾಗಿದೆ. ಮಾವೋ ತನ್ನ ಸರ್ವಾಧಿಕಾರದ ಅವಧಿಯಲ್ಲಿ ಚೀನಾದ ಜನರಿಗೆ ಒಂದು ಹಿತ್ತಲಿರುವ ಪುಟ್ಟ ಮನೆ ಪಡೆಯುವುದನ್ನು ಸಾಧ್ಯಗೊಳಿಸಿದ. ಚೀನಾದ ಪ್ರತಿಯೊಂದು ಕುಟುಂಬವೂ ತನ್ನ ಹಿತ್ತಲಲ್ಲಿ ಒಂದೊಂದು ಪಪಾಯಿ ಗಿಡ ಬೆಳೆಸಲೇಬೇಕೆಂದು ಕಡ್ಡಾಯ ಮಾಡಿದ. ಎಲ್ಲರೂ ಬೆಳೆದರು. ನಾವಿಲ್ಲಿ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವ ಜನ; ಪ್ರಜಾಪ್ರಭುತ್ವದ ಜನ. ನಾವು ಕೂಡ ಕೂಡಲೇ ಹಿತ್ತಲಿರುವ ಪ್ರತಿಯೊಂದು ಕುಟುಂಬವೂ ಒಂದು ತೆಂಗಿನ ಗಿಡ, ಒಂದು ಬಾಳೆ ಗಿಡ, ಒಂದು ನುಗ್ಗೇಗಿಡ ಬೆಳೆಯಲು ಒತ್ತಾಯ ಮಾಡುವುದು ತಪ್ಪಲ್ಲ. ಹೀಗೆ ಬೆಳೆಯಲು ನಿರಾಕರಿಸುವವರಿಗೆ ವಿದ್ಯುತ್, ಹಸಿರು ಕಾರ್ಡ್ ನೀಡಕೂಡದು; ಊರವರೇ ಇಂಥವರಿಗೆ ಛೀಮಾರಿ ಹಾಕಬೇಕು.

ಇದೆಂಥ ಘೋರ ಕಷ್ಟಗಳ ಸಮಾಜ! ಇದನ್ನು ನೂರಾರು ಕಡೆ ನೋಡಿ ಮತ್ತೊಮ್ಮೆ ಕೇಳಿದ್ದರಿಂದ ಹೇಳುತ್ತಿದ್ದೇನೆ. ನನ್ನ ಗೆಳೆಯರೊಬ್ಬರು ಕೆಲಸಮಾಡುವ ಆಸ್ಪತ್ರೆಯಲ್ಲಿ ಒಬ್ಬ ಬಡ ಟೆಕ್ನೀಶಿಯನ್. ಈತನಿಗೆ ಊರಲ್ಲಿ ಇಪ್ಪತ್ತೆಕರೆ ಜಮೀನಿದೆ. ಆದರೂ ಈತನ ಹಳ್ಳಿಯ ಕುಟುಂಬ ಬಡತನದಲ್ಲಿದೆ. ಏನನ್ನೂ ಬೆಳೆಯಲಾಗದ ಹೊಲ ಇಟ್ಟುಕೊಂಡು ತಿನ್ನಲು ತುತ್ತಿಲ್ಲದೆ ಕೂತಿದ್ದಾರೆ. ಅಲ್ಲಯ್ಯ ನೀನೇಕೆ ಆ ಜಮೀನನ್ನು ಅಭಿವೃದ್ಧಿಪಡಿಸಿ ಬೆಳೆ ತೆಗೆಯಬಾರದು? ಅದಕ್ಕೆ ಆತ ಹೇಳುತ್ತಾನೆ; ಅಪ್ಪ ಒಪ್ಪುವುದಿಲ್ಲ, "ನಾನು ಸಾಯುವವರೆಗೆ ಒಂದು ಎಕರೆಯನ್ನೂ ಮಾರಕೂಡದು-ಸಾಲ ಮಾಡಕೂಡದು". ಅಪ್ಪನ ಹೆಸರಲ್ಲಿ ಜಮೀನಿದೆ. ಅಪ್ಪ ಯಾವುದಕ್ಕೂ ಸಹಿ ಹಾಕುವುದಿಲ್ಲ. ಏನನ್ನೂ



ಮಾಡುವುದಕ್ಕೂ ಬಿಡುವುದಿಲ್ಲ. ಹಾಗಾದರೆ ನೀನು ನಿನ್ನ ಪಾಲನ್ನು ಯಾಕೆ ತೆಗೆದುಕೊಳ್ಳಬಾರದು? ಅದನ್ನು ಆ ಅಪ್ಪ ಒಪ್ಪುವುದಿಲ್ಲ. "ನೀನು ಓದಿರುವುದರಿಂದ ಜಮೀನಿನ ತಂಟೆಗೆ ಬರಬೇಡ" ಅನ್ನುತ್ತಿದ್ದಾನೆ. ಅಸಹಾಯಕತೆ, ರೋಷ, ತಂದೆಯ ಬಗ್ಗೆ ಕರುಣೆ, ಮುಂದುವರಿದ ಬಡತನ....

ರೆವಿನ್ಯೂ ಇಲಾಖೆ ಇದನ್ನು ಮಾಡಬಹುದು-ಪ್ರಬುದ್ಧತೆ ಪಡೆದ ಮಕ್ಕಳಿಗೆ ಜಮೀನುಗಳ ಖಾತೆ ಮಾಡಿಸಬಹುದು; ತಂದೆ ಐವತ್ತೆಂಟು ತಲುಪಿದೊಡನೆ ಎಲ್ಲ ಜವಾಬ್ದಾರಿಗಳಿಂದ ನಿವೃತ್ತನಾಗುವಂತೆ ನೋಡಿಕೊಳ್ಳಬಹುದು.




ಅಕ್ಟೋಬರ್ 16, 1988

ಯಾರ ದೇಶ?

ಒಂದು ದರಿದ್ರ ಬೆಳವಣಿಗೆಯನ್ನು ಕಂಡು ನಾನು ವಿಷಾದಿಸಿದ್ದೇನೆ. ಅದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಅದೇನೆಂದರೆ, ನಾನು ಹೋದಲ್ಲೆಲ್ಲ ಕಂಡುಬರುತ್ತಿರುವ ಮೇಲುಜಾತಿಯ ನಾಲ್ಕಾರು ಜನ ಆರೆಸೆಸ್ ಹುಡುಗರು; ಅಥವಾ ಈ ಆರೆಸೆಸ್ ಮನೋಧರ್ಮಕ್ಕೆ ಹತ್ತಿರ ಇರುವವರು. ದಲಿತರು, ಹಿಂದುಳಿದವರು ತಮ್ಮ ಧ್ವನಿ ಕೇಳಿಸುವಂತೆ ಮಾತಾಡತೊಡಗಿರುವಾಗಲೇ ಈ ತರಹದ ಜನ ಹುಟ್ಟಿಕೊಳ್ಳುತ್ತಿರುವುದು ಕುತೂಹಲಕರ. ಮೊನ್ನೆ ದೊಡ್ಡ ಊರೊಂದರಲ್ಲಿ ನಾನು ಜನರನ್ನುದ್ದೇಶಿಸಿ ಮಾತಾಡಿ ಕೂತಿದ್ದೆ; ಅಲ್ಲಿಗೆ ಹಲವಾರು ಜನ ದಲಿತರು, ಇತರರು ಬಂದರು. ಅವರಲ್ಲಿ ಕೆಲವರು "ಇತರರು..." ಪ್ರಶ್ನೆ ಕೇಳತೊಡಗಿದರು."ನೀವು ಕೂಡ ಜಾತಿ ಆಧಾರದ ಮೇಲಿನ ಮೀಸಲಾತಿ ಒಪ್ಪುತ್ತೀರಾ?"

ಅದಕ್ಕೆ ನಾನಂದೆ, "ಹೀಗೆ ಕೇಳುವ ನಿಮಗೆ ನಮ್ಮ ಹಿಂದುಳಿದವರ, ಹರಿಜನರ ಸ್ಥಿತಿಗತಿ ಗೊತ್ತಿಲ್ಲ. ಇಲ್ಲಿಯವರೆಗೆ ಆಡಳಿತ ನಡೆಸಿದ ಸರ್ಕಾರಗಳು ಉದ್ಯೋಗಗಳೇ ಸೃಷ್ಟಿಯಾಗದಂಥ, ನಾಡಿನ ಸಂಪತ್ತೇ ವೃದ್ಧಿಯಾಗದಂಥ ಸ್ಥಿತಿ ಉಂಟುಮಾಡಿದ್ದಾರೆ. ಕೆಲವು ಕೆಳಜಾತಿಗಳ ಜನರು ಹಲವಾರು ವೃತ್ತಿಗಳಿಂದಲೇ ವಂಚಿತರಾಗಿದ್ದಾರೆ. ಇವತ್ತಿಗೂ ಹರಿಜನರ ಆಸ್ತಿ ಒಟ್ಟು ರಾಜ್ಯದ ಆಸ್ತಿಯ ಶೇಕಡ ಎರಡು ಭಾಗ ಕೂಡ ಇಲ್ಲ; ಇವತ್ತಿಗೂ ಹಿಂದುಳಿದವರ ಉದ್ಯೋಗ ಸ್ಥಿತಿ ಅದೇ ರೀತಿಯಲ್ಲಿದೆ. ಇದು ತೊಲಗುವವರೆಗೆ ಮಾತ್ರ ಮೀಸಲಾತಿ ಇರುತ್ತದೆ. ಎಲ್ಲರಿಗೆ ಉದ್ಯೋಗ, ಸಾಮಾಜಿಕ ನ್ಯಾಯ ದೊರೆಯುವವರೆಗೆ ಮಾತ್ರ ಬಡವರು ಕೂಡ ಮೀಸಲಾತಿಯನ್ನು ಇಷ್ಟಪಡುತ್ತಾರೆ..."

ಭಂಡನಾದ ಇನ್ನೊಬ್ಬ ತನ್ನನ್ನು ಕೊರೆಯುತ್ತಿದ್ದ ವಿಷಯಕ್ಕೆ ಬಂದ, "ರಾಮಜನ್ಮಭೂಮಿಯ ಬಗ್ಗೆ ನಿಮ್ಮ ನಿಲುವೇನು?"




"ರಾಮಜನ್ಮಭೂಮಿ, ಬಾಬರಿ ಮಸೀದಿಯ ನೆವದಲ್ಲಿ ಕಾಲುಕೆರೆದು ಜಗಳ ಆಡುವ ಎಲ್ಲರೂ ದುಷ್ಟರು. ಪಾಕಿಸ್ತಾನದ ಪತ್ರಕರ್ತರೇ ಹೇಳಿದ್ದಾರೆ-ಆ ಜನ್ಮ ಭೂಮಿಯ ಸ್ಥಳ ಎಲ್ಲ ಜಾತಿಗಳ ಧರ್ಮ ಸಮುಚ್ಚಯ ಆಗಲಿ. ಆದರಿಂದ ಯಾರಿಗೂ ನಷ್ಟವಿಲ್ಲ. ಇದು ಹಿಂದೂ ರಾಷ್ಟ್ರವೆಂದು ಕೂಗಾಡುವ ಪ್ರತಿಯೊಬ್ಬನೂ ಪುರಿ ಜಗದ್ಗುರುವನ್ನು ಸೃಷ್ಟಿಸಿ ಹಿಂದೂಗಳಿಗೆ ಅವಮಾನ ಮಾಡುತ್ತಾನೆ; ಅಲ್ಲದೆ ಈ 'ಪುರಿ'ಗಳೇ ಎಲ್ಲ ಹಿಂದುಳಿದವರು, ಹರಿಜನರು ತಾವು ಹಿಂದೂಗಳೇ ಅಲ್ಲ ಎಂಬ ನಿಲುವು ತೆಗೆದುಕೊಳ್ಳಲು ಕಾರಣರಾಗುತ್ತಾರೆ. ಈ ರಾಷ್ಟ್ರ ನಿಜಕ್ಕೂ ಎಲ್ಲರ ದೇಶವಾಗಬೇಕಾದರೆ ಇಲ್ಲಿ ಮೊದಲು ಸಾಮಾಜಿಕ ನ್ಯಾಯ ನೆಲೆಸಿ ಆರ್ಥಿಕ ಪುನರುಜ್ಜೀವನ ಆಗಬೇಕಾಗಿದೆ; ಜಾತೀಯತೆ, ಪಾಳೆಗಾರಿಕೆ ತೊಲಗಬೇಕಾಗಿದೆ."

ಆಗ ಮತ್ತೊಬ್ಬ ಬೇಕೆಂತಲೇ, ಅಲ್ಲಿ ಸೇರಿದ್ದ ಮುಸ್ಲಿಮರು, ದಲಿತರೆದುರಿಗೆ ನನಗೆ ಕಿರಿಕಿರಿ ಉಂಟುಮಾಡುವುದಕ್ಕಾಗಿಯೇ ರಕ್ಷಾಬಂಧ ಕಟ್ಟಲು ಬಂದ. ನಾನು ಬೇಡ ಅಂದೆ. "ರಕ್ಷಾಬಂಧ ಎಲ್ಲರ ಹೃದಯ ಸಮ್ಮಿಳನದ ಸಂಕೇತ" ಅಂದ. "ಇರಬಹುದು, ಆದರೆ ಅದನ್ನು ನೀನು ಕಟ್ಟಿದಾಗ ಅಲ್ಲ, ಈಗ ಹೋಗು" ಅಂದೆ.

ಎಲ್ಲ ತರುಣತರುಣಿಯರ ಬಗ್ಗೆ ನನಗೆ ಪ್ರೀತಿ. ಮೇಲಿನ ವಿಷ ಉಂಡು ಓಡಾಡುವ ಹುಡುಗರ ಬಗ್ಗೆ ಕೂಡ. ಈ ಸಮಾಜ ಎಂಥ ವಿಕೃತಿಯನ್ನು ಬಿತ್ತುತ್ತದೆ!

ಹುಡುಗಿಯರ ಬ್ಯಾಗನ್ನು ವ್ಯಾನಿಟಿ ಬ್ಯಾಗ್ ಎಂದು ಕರೆಯುತ್ತಾರೆ ಏಕೆ?



ಡಿ.ಎಲ್. ಚಂದ್ರಿಕ, ಹರಪನಹಳ್ಳಿ
ಗೌಡರು ಜಿಲೇಬಿ ತಿಂದಿದ್ದೇಕೆ?
* ಅದಕ್ಕೆ ಜನ ಅವರಿಗೆ ಕಾವೇರಿ ನೀರು ಕುಡಿಸ್ತಾರೆ ಬಿಡಿ.

ಡಿ.ರಾಗಿಣಿ, ದೇವದುರ್ಗ
ಕಾರ್ನಾಡರ ಒಳಗೊಬ್ಬ ತುಘಲಕ್ ಇರಬಹುದೇ?
* ಟಿಪ್ಪು ಸುಲ್ತಾನ್ ಕನಸ್ಸಿಗೆ ಹಿಟ್ಟಿನ ಹುಂಜ ಕೂಗಿ ಭಂಗ ತಂದಿದ್ದರೆ ಮಾತ್ರ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಗಂಡಸರು ಆಡುವ ಟೆನ್ನಿಸ್‌ಗಿಂತಲೂ ಹೆಂಗಸರು ಆಡುವ ಟೆನ್ನಿಸ್ ನೋಡುವುದರಲ್ಲೇ ಹೆಚ್ಚು ಮಜಾ ಸಿಗಲು ಕಾರಣ?
* ಅವರಿಗೆ ಪ್ಯಾಂಟ್-ಶರ್ಟ್ ಹಾಕಿಸಿ, ಆಗ ಒಬ್ಬನೂ ಅವರತ್ತ ತಿರುಗಿ ನೋಡುವುದಿಲ್ಲ.

ರಾಂಕೊಪ್ಪಲು, ತೀರ್ಥಹಳ್ಳಿ
ಯಡ್ಡಿ-ಕುಮಾರಣ್ಣ 'ಪ್ರೇಮಿಗಳ ದಿನಾಚರಣೆ'ಯನ್ನು ಎಲ್ಲಿ ಆಚರಿಸುತ್ತಾರಂತೆ?
* ಹಮಾಮ್‌ನಲ್ಲಿ?!

ಓದು ಸಿದ್ದೇಗೌಡ, ಕಬ್ಬೇಹಳ್ಳಿ
ಕವಿತಾ ಸಂಪಾದಕರಾಗಿ ಗೌರಿ ಚಿತ್ರ ನಿರ್ದೇಶಕರಾಗಿ ಬದಲಾದರೆ ಹೇಗಿರುತ್ತೆ?
* ಎರಡೂ ಫ್ಲಾಪ್.

ಗುರುಸ್ವಾಮಿ, ಶೋರಾಪೂರ
ಉಪ್ಪು ತಿಂದ ಮೇಲೆ ನೀರು ಕುಡಿಯಲೇಬೇಕು! ಪ್ರೀತಿ ಮಾಡಿದ ಮೇಲೆ?
* ಅದಕ್ಕೂ ಮುನ್ನ ಏಳು ಕೆರೆ ನೀರು ಕುಡಿಸುತ್ತಾರಲ್ಲಾ ಹುಡುಗಿಯರು ಅದು ಸಾಕಲ್ಲಾ.

ಆರ್.ವರಲಕ್ಷ್ಮಿ ನಾ ರೆಡ್ಡಿ, ರಾಬರ್ಟ್‌ಸನ್‌ಪೇಟೆ
ಸೌಂದರ್ಯ ಸ್ಪರ್ಧೆಗಳಲ್ಲಿ ಸೌಂದರ್ಯವನ್ನು ಯಾವ ಮಾನದಂಡದಿಂದ ಅಳೆಯುತ್ತಾರೆ?
* ಕಡಿಮೆ 'ಮಾನ'ವೇ ದಂಡ.

ಕೆ.ಶ್ರೀನಿವಾಸ್, ಮಂಡ್ಯ
ಪ್ರೇಮಕ್ಕೆ ಮೂರು ಸುಖ, ವಿರಹಕ್ಕೆ?
* ನೂರು ದುಃಖ.

ಎಂ. ನಿಸರ್ಗ, ದಾವಣಗೆರೆ
ಚಂಪಾ ಪ್ರಕಾರ ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಜ್ಞಾನಪೀಠ ಪ್ರಶಸ್ತಿಯನ್ನು ಪಡ್ಕೊಂಡಿಲ್ವಂತೆ, ಹೊಡ್ಕೊಂಡಾರಂತಲ್ಲ?
* ಹಾಗಂತ ಚಂಪಾ ಎಷ್ಟೆ ಹೊಡ್ಕೊಂಡ್ರೂ ಪಡಕೊಂಡೋರು ಸುಮ್ಮನಿದ್ದಾರೆ.

ಡಿ.ಎಲ್. ಸುರೇಶ, ಹರಪನಹಳ್ಳಿ
ಗಿರೀಶ್ ಕಾರ್ನಾಡ್ ಕಾವೇರಿ ತೀರ್ಪಿನ ಬಗ್ಗೆ ಹಾಗೇಕೆ ಹೇಳಿದ್ರು?
* ಅದಕ್ಕೆ 'ತಲೆದಂಡ' ಕೊಟ್ಟಾಯ್ತಲ್ಲಾ.

ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು
ದೇವೇಗೌಡರು ಯಾವ ಅರ್ಥದಲ್ಲಿ ಮಣ್ಣಿನ ಮಗ?
* ನೆಲದ ಮೇಲೆ ಬಿದ್ದು ಹೊರಳಾಡಿ ಅತ್ತಿದ್ದರಿಂದ!

ಮಂಚಾಲಿ ಗುರುರಾಜಚಾರ್, ಬಳ್ಳಾರಿ
ಕಾವೇರಿ ನೀರು ಕೇಳಿದ ಹಾಗೆ ಕರ್ನಾಟಕದ ಗಾಳಿ ಕೇಳಿದರೆ ಏನು ಗತಿ?
* 'H_2' ನಿಮಗೆ ಕೊಟ್ಟು ನಾವು 'O' ಇಟ್ಟುಕೊಳ್ಳುತ್ತೇವೆ ಎಂದು ವಾದಿಸಬಹುದು.


ಎಂ.ಎಸ್.ಪಾರ್ವತಿ, ಕುಮಟಾ
ದೇವರು, ಕಾಯಕ- ಇವೆರಡರಲ್ಲಿ ಶ್ರೇಷ್ಠ ಆಯ್ಕೆ ಯಾವುದು?
* ಪಾರ್ವತಿ ಸೇವೆಯೇ ಶ್ರೇಷ್ಠ ಕಾಯಕ ಎಂದು ನಿಮ್ಮ ಪತಿ ಶಿವು ಆಯ್ಕೆ ಮಾಡಿಕೊಂಡರೆ ಸಾಕು.

ಛೀ ತುಂಟಿ!

ಭಾರೀ ದಿನಗಳ ನಂತರ ಬಂದ ಪ್ರಿಯಕರನ ಬರಸೆಳೆದು ಬಿಗಿದಪ್ಪಿ ಮುದ್ದಾಡುತ್ತಿದ್ದ ರಸಗಳಿಗೆಯಲ್ಲಿಯೇ ಮನೆಯ ಬೆಲ್ ಸದ್ದು ಮಾಡತೊಡಗಿತು.

ಬೆವೆತು ನೀರಾಗಿದ್ದ ಪ್ರಿಯಕರ "ಓ ಡಾರ್ಲಿಂಗ್ ನಿನ್ನ ಗಂಡ ಬಂದ ಅಂತ ಕಾಣುತ್ತೆ" ಅಂದ.

"ಇಲ್ಲ, ಇಲ್ಲ, ಆತ ವ್ಯಾಪಾರಕ್ಕಾಗಿ ಪರದೇಶದ ಟೂರ್‌ನಲ್ಲಿದ್ದಾನೆ ನೀವು ಮುಂದುವರೆಯಿರಿ" ಎಂದಳು.



ಬಹುಮಾನಿತ ಪ್ರಶ್ನೆ

ಹರಸಿರಿ, ಮತ್ತೀಗಟ್ಟಿ
ಹುಡುಗಿಯರ ಬ್ಯಾಗನ್ನು ವ್ಯಾನಿಟಿ ಬ್ಯಾಗ್ ಎಂದು ಕರೆಯುತ್ತಾರೆ ಏಕೆ?
* ಅವರ ವ್ಯಾನಿಟಿಯನ್ನು ಹೆಚ್ಚಿಸುವ ಸಲಕರಣೆಗಳು ಅದರಲ್ಲಿರುತ್ತವೆ ಅದಕ್ಕೆ.


ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಅಂಬಿ ಕೊಟ್ಟಿದ್ದು ರಾಜೀನಾಮೆಯೋ ಅಥವಾ......?

ಫೆಬ್ರವರಿ 14ರ ಸಂಚಿಕೆಯ ನಮ್ಮ ಪ್ರಶ್ನೆ: ಒಂದು ವರ್ಷದಲ್ಲಿ ಕೋ-ಜಾ ಸರ್ಕಾರ ಕಡಿದು ಹಾಕಿದ್ದೇನು?
ನಿಮ್ಮ ಉತ್ತರ: ಕಡಿದದ್ದಕ್ಕಿಂತ ರೆಸಾರ್ಟ್‌ಗಳಲ್ಲಿ ಕುಡಿದದ್ದೇ ಹೆಚ್ಚು
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಚ್.ಸಿ.ಭಾಗ್ಯಕುಮಾರ್, ಬೆಂಗಳೂರು

ಬಿ.ಎಡ್ ನೇಮಕಾತಿ ಅಕ್ರಮ- ಶಿಕ್ಷಣ ಇಲಾಖೆ ಮಹಾಮೌನ



ಪ್ರೌಢಶಾಲಾ ಸಹಾಯಕ ಶಿಕ್ಷಕರ ಸಿಇಟಿ ಪರೀಕ್ಷೆಯಲ್ಲಿ ನಡೆದ ಅಕ್ರಮ ಅವ್ಯವಹಾರಗಳ ತನಿಖೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳನ್ನು ದಂಡಿಸುವ ಬದಲು ಇಡೀ ಪ್ರಕರಣವನ್ನು ಮುಚ್ಚಿ ಹಾಕಲು ನೇಮಕಾತಿ ಪ್ರಕ್ರಿಯೆಯನ್ನು ಮುಗಿಸಿ ಹಾಕಲು ಖುದ್ದು ಶಿಕ್ಷಣ ಇಲಾಖೆಯು ತುದಿಗಾಲಲ್ಲಿ ನಿಂತಿರು ವುದು ನಿಜಕ್ಕೂ ವಿಪರ್ಯಾಸ!

ಕಳೆದ 2006ರ ನವೆಂಬರ್‌ನಲ್ಲಿ ಪ್ರೌಢಶಾಲಾ ಸಹಾಯಕ ಶಿಕ್ಷಕರ ಗ್ರೇಡ್ 1 ಮತ್ತು 2ರ ಹುದ್ದೆಗೆ ನಡೆದ ಸಿಇಟಿ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಗಳು ಬಹಿರಂಗಗೊಂಡವು. ಕೊಠಡಿ ಮೇಲ್ವಿಚಾರಕರೆ ಸಾಮೂಹಿಕ ನಕಲಿಗೆ ಅವಕಾಶ ನೀಡಿ ಅಕ್ರಮ, ಅವ್ಯವಹಾರ ನಡೆಸಿದರು. ಮರು ಪರೀಕ್ಷೆಗೆ ಒತ್ತಾಯಿಸಿ ಪ್ರತಿಭಟನೆಗಳು ನಡೆದವು.

ಈ ಸಂಬಂಧ ಬಿಜಾಪುರ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದ ಸಿಂಧಗಿ ತಾಲ್ಲೂಕಿನ ತಂಗಡಿಗಿಯ ಶಂಕರನಿಂಗ ಹೊಳಿ ಎಂಬ ನಿರುದ್ಯೋಗಿ ವಿಷ ಕುಡಿದು ಪ್ರಾಣಬಿಟ್ಟ. ಬಿಜಾಪುರದ ನಿಂಗಯ್ಯ ಮಠಪತಿ ಎಂಬ ಅಭ್ಯರ್ಥಿ ಆತ್ಮಹತ್ಯೆಗೆ ಪ್ರಯತ್ನಿಸಿ ಸಾವು-ಬದುಕಿನ ಹೋರಾಟ ನಡೆಸಿದ್ದಾನೆ.

ಇಡೀ ಪ್ರಕರಣವನ್ನು ಸಿಓಡಿ ತನಿಖೆಗೆ ಒಪ್ಪಿಸುವಂತೆ ಕೆಲ ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಲೇರಿದ್ದಾರೆ. ನ್ಯಾಯಾಲಯ ಸರಕಾರ, ಶಿಕ್ಷಣ ಇಲಾಖೆ, ಪ್ರತಿವಾದಿಗಳಿಗೆ ನೋಟೀಸು ಜಾರಿ ಮಾಡಿದೆ.

ಖುದ್ದು ಶಿಕ್ಷಣ ಸಚಿವ ಬಸವರಾಜ ಹೊರಟ್ಟಿಯನ್ನು ಬೇಟಿ ಮಾಡಿ ಇಡೀ ಪ್ರಕರಣವನ್ನು ತನಿಖೆ ನಡೆಸುವಂತೆ ಮತ್ತು ಮರು ಪರೀಕ್ಷೆ ನಡೆಸುವಂತೆ ಬಿಇಡಿ ಪದವೀಧರರ ವೇದಿಕೆ ಮನವಿ ಮಾಡಿದೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ, ಅಂದರೆ ಇಡೀ ಶಿಕ್ಷಣ ಇಲಾಖೆ ಕೊಳತು ಎಷ್ಟು ಗಬ್ಬು ನಾರುತ್ತಿದೆ ಎಂಬುದಕ್ಕೆ ಸಾಕಲ್ಲ ನಿದರ್ಶನ.

ಬೇಲಿಯೇ ಎದ್ದು ಹೊಲ ಮೇಯ್ದಿದೆ

ಒಟ್ಟು 5484 ಹುದ್ದೆಗಳಿಗೆ ನಡೆದ ಪರೀಕ್ಷೆಯಲ್ಲಿ ರಾಜ್ಯಾದ್ಯಂತ 32 ಸಾವಿರ ಅಭ್ಯರ್ಥಿಗಳು ಪರೀಕ್ಷೆ ಬರೆದರು. ಹೆಚ್ಚಾಗಿ ಬಿಜಾಪುರ, ಗುಲ್ಬರ್ಗಾ, ಉಡುಪಿ, ತುಮಕೂರು, ಹಾಸನ ಹಾಗೂ ಮಂಡ್ಯ ಪರೀಕ್ಷಾ ಕೇಂದ್ರಗಳಲ್ಲಿ ವ್ಯಾಪಕ ಅಕ್ರಮಗಳು ನಡೆದವು. ಮಾಧ್ಯಮಗಳು ಅದನ್ನು ಬಯಲಿಗೆಳೆದಿದ್ದವು.

ಪರೀಕ್ಷೆಗೆ ಹಿಂದಿನ ದಿನವೇ ಪ್ರಶ್ನೆ ಪತ್ರಿಕೆ ಬಯಲಾಗಿ ಸಾವಿರಾರು ರೂಪಾಯಿಗೆ ಮಾರಾಟಗೊಂಡವು. ಸಿಇಡಿ ಮೇಲುಸ್ತುವಾರಿ ವಹಿಸಿದ್ದ ಶಿಕ್ಷಣ ಇಲಾಖೆಯ ಅಧಿಕಾರಿಗಳೇ ಇಡೀ ಪ್ರಕರಣದ ಸಮಪಾಲುದಾರರು.

ಕೊಠಡಿಯ ಮೇಲ್ವಿಚಾರಣೆ (ಸೂಪರ್‌ವೈಜಿಂಗ್) ನಡೆಸುತ್ತಿದ್ದ ಇಲಾಖೆಯ ಶಿಕ್ಷಕರೇ ಹಣ ಪಡೆದು ನಕಲು ಮಾಡಲು ಅವಕಾಶ ನೀಡಿದ್ದು, ಇಷ್ಟೇ ಅಲ್ಲದೇ ಪರೀಕ್ಷಾ ಹಾಲಿನೊಳಕ್ಕೆ ಮೊಬೈಲು ಫೋನುಗಳಿಗೂ ಅವಕಾಶ ನೀಡಿ ಅಕ್ರಮ ಎಸಗಿದ್ದರು.

ಒಟ್ಟು ಶಿಕ್ಷಣ ಇಲಾಖೆಯ ಅಧಿಕಾರಿಗಳೆಂಬ ಬೇಲಿಯೇ ಸರಿಯಿಲ್ಲ, ಅವ್ಯವಹಾರಕ್ಕೆ ನಿಂತಿತ್ತು. ಪ್ರಾಮಾಣಿಕವಾಗಿ ಪರೀಕ್ಷೆ ಬರೆಯುತ್ತಿದ್ದ ಅಭ್ಯರ್ಥಿಗಳ ಉಜ್ವಲ ಭವಿಷ್ಯಕ್ಕೆ ಎಳ್ಳುನೀರು ಬಿಟ್ಟಿತ್ತು.

ಶಿಕ್ಷಣ ಸಚಿವ ಹೊರಟ್ಟಿ ಸಿಇಟಿ ಪದವೀಧರರ ಸಂಘದ ನಟರಾಜ, ತುಕಾರಾಂ ಹಾಗೂ ವಿಜಯಕುಮಾರ ನಾಯಕತ್ವದಲ್ಲಿ ನೀಡಿದ ಮನವಿ ಆಧರಿಸಿ, ಅಕ್ರಮ ನಡೆದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ವರದಿ ನೀಡಲು ಆದೇಶಿಸಿದರಾದರೂ, ಅದ್ಯಾಕೋ ಕ್ರಮೇಣ ಜಿಲ್ಲಾಧಿಕಾರಿಗಳು ವರದಿಯಲ್ಲಿ ಅಂತಹ ಅಕ್ರಮಗಳೇನು ನಡೆದಿಲ್ಲ ಎಂದು ತಿಳಿಸಿದ್ದಾರೆ. ನಿಂಗಯ್ಯ ಮಠಪತಿ ಎಂಬ ಅಭ್ಯರ್ಥಿ ಪ್ರಶ್ನೆಪತ್ರಿಕೆ ಕೊಡುವುದಾಗಿ ಹಣಪಡೆದು, ಅದು ಸಾಧ್ಯವಾಗದಿದ್ದಾಗ ಆತ್ಮಹತ್ಯೆಗೆ ನಡೆಸಿದ್ದಕ್ಕೆ ನಾವೇನು ಮಾಡಲಾಗದು ಎಂದು ಸಬೂಬು ಹೇಳಿ ನುಣುಚಿಕೊಂಡಿದ್ದಾರೆ.

ಮುಖ್ಯಮಂತ್ರಿ, ವಿಧಾನಪರಿಷತ್ ಮತ್ತು ವಿಧಾನ ಸಭೆಯ ಪ್ರತಿಪಕ್ಷ ನಾಯಕರಿಗೂ ಈ ಸಂಬಂಧ ಮ... ಗಳು ತಲುಪಿವೆ. ಯಾವೊಬ್ಬರೂ ಈ ಪದವೀ... ನಿರುದ್ಯೋಗಿಗಳ ಪರ ಧ್ವನಿ ಎತ್ತಿಲ್ಲ, ಅವ್ಯವಹಾ... ತನಿಖೆಯಾಗಿಲ್ಲ, ಇದರ ನಡುವೆ ನೇಮಕಾತಿ ಪ್ರಕ್ರಿ... ಮುಗಿಸಿ ಬಿಡುವ ಪ್ರಯತ್ನಗಳು ನಡೆಯುತ್ತಿವೆ.

2006ರ ಪ್ರೌಢಶಾಲಾ ಶಿಕ್ಷಕರ ನೇಮ... ಪ್ರಕ್ರಿಯೆಗೆ ವಿರಾಮಹಾಕೆಂದೂ ಮರುಪರೀಕ್ಷೆ ... ಬೇಕು ಮತ್ತು ಇತರೆ ಬೇಡಿಕೆಗಳನ್ನು ಈಡೇ... ಕೆಂದೂ ರಾಜ್ಯ ಬಿ.ಇಡಿ ಪದವೀಧರ ವೇದಿಕೆ ... ಫೆಬ್ರುವರಿ 22ರಂದು ರ್‍ಯಾಲಿ ನಡೆಸುತ್ತಿದೆ.

50:50ರ ಅನುಪಾತದಲ್ಲಿ ಮುಖ್ಯೋಪಾಧ್ಯಾಯ... ಆಯ್ಕೆ ಪ್ರಕ್ರಿಯೆ ಆಗಬೇಕು. ಬಿ.ಇಡಿ ಪ್ರವೇಶಕ್ಕೆ ವಾಣಿ... ಪದವೀಧರರಿಗೂ ಅವಕಾಶ ನೀಡಬೇಕು. ಎ... ಹಂತಗಳಲ್ಲೂ ಶಿಕ್ಷಣ ವಿಷಯ ಕಡ್ಡಾಯಗೊಳಿಸಬೇಕು... ಕೆಎಎಸ್‌ನಲ್ಲಿ ಶಿಕ್ಷಣ ಐಚ್ಛಿಕ ವಿಷಯ ಆಗಬೇಕು... ದೈಹಿಕ ಶಿಕ್ಷಕರ ನೇಮಕಾತಿಯಲ್ಲಿ ಆದ್ಯತೆ ನೀಡಬೇ... ಎಂದು ಆಗ್ರಹಿಸುತ್ತಿದೆ.



ಬಿ.ಇಡಿ ಪದವೀಧರರ ಪ್ರತಿಭಟನಾ ರ್‍ಯಾಲಿ

ಶಾಲೆ ಬಿಟ್ಟವರಿಗೆ, ವಯಸ್ಕರಿಗೆ ಅಂತೆಲ್ಲಾ ಹ... ಹಲವು ಯೋಜನೆಗಳನ್ನು ತಂದು ಪರೀಕ್ಷೆಗಳ... ಅವ್ಯವಹಾರ ನಡೆಸಿದರೆ ನಿಜವಾದ ಶಿಕ್ಷಣ ಮೌಲ್ಯಗಳ... ಅರ್ಥವಿರುವುದಿಲ್ಲ.

ಬಿಸಿಯೂಟದಂತಹ ಯೋಜನೆಗಳನ್ನು ಜಾರಿ... ತಂದು ಶಿಕ್ಷಣವನ್ನು ಆಕರ್ಷಿಸುವ ಸರಕಾರಗಳು ಪರೀ... ಪದ್ಧತಿಯಲ್ಲೂ ಸುಧಾರಣೆ ತರಬೇಕಲ್ಲವೇ? ಅ... ಸರಕಾರದ ಶಿಕ್ಷಣ ಇಲಾಖೆಯ ಜವಾಬ್ದಾರಿಯಲ್ಲವೆ...

-ವರದಿಗಾ...

"ವಯೋಮಾನ ಮೀರಿ ಹೋದವರಿಗೆ ಪರಿಹಾರೋಪಾಯಗಳು"

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಶಿಕ್ಷಣ ವ್ಯವಸ್ಥೆ ಭಿನ್ನವಾಗಿದ್ದು, ಪರೀಕ್ಷಾ ಪದ್ಧತಿ, ಮೌಲ್ಯಮಾಪನ ವ್ಯವಸ್ಥೆಯಲ್ಲಿ ಏಕತೆ ಮತ್ತು ನೇಮಕಾತಿಯಲ್ಲಿ ವಯೋಮಾನವನ್ನು ಪರಿಗಣಿಸುವ ಮೂಲಕ ತಾರತಮ್ಯ ನಿವಾರಣೆ ಮತ್ತು ನಿರುದ್ಯೋಗಿಗಳು ಸಮಸ್ಯೆಯನ್ನು ಪರಿಹರಿಸಬೇಕಾದ ಅಗತ್ಯವಿದೆ.

ನೇಮಕಾತಿ ವೇಳೆ ಪದವಿ ಮತ್ತು ಸಿಇಟಿಯಲ್ಲಿ ಪಡೆದ ಅಂಕ ಪರಿಗಣಿಸುವಾಗ, ಕಾಲದಿಂದ ಕಾಲಕ್ಕೆ ಬದಲಾದ ಮೌಲ್ಯಮಾಪನ ಪದ್ಧತಿಯ ಪರಿಣಾಮವನ್ನು ವಯೋಮಾನ ಮೀರಿದ ಅಭ್ಯರ್ಥಿಗಳು ಎದುರಿಸುತ್ತಾರೆ.

ವಯೋಮಾನ ಮೀರುತ್ತಿರುವ ನಿರುದ್ಯೋಗಿ ಪದವೀಧರರ ಅನುಕೂಲಕ್ಕಾಗಿ ಹೊಸ ಮಾನದಂಡ ಅಳವಡಿಸಿ ಅವರಿಗೆ ಆದ್ಯತೆ ನೀಡಬೇಕಿದೆ.

ಶಿಕ್ಷಣ ತಜ್ಞರು, ಶಿಕ್ಷಣ ಇಲಾಖೆ ಹಾಗು ಸರ್ಕಾರ ವಯೋಮಾನ ಮೀರಿ ಹೋದವರೆಗೂ ಅವಕಾಶ ಕಲ್ಪಿಸಲು ಪ್ರತಿ ನೇಮಕಾತಿಯಲ್ಲಿ ನಿಗಾ ವಹಿಸಬೇಕಾಗಿದೆ.

ಈ ಸಂಬಂಧ ಈಗಾಗಲೇ ಆಂಧ್ರಪ್ರದೇಶ ರಾಜ್ಯದಲ್ಲಿ ವೈಜ್ಞಾನಿಕ ಮಾದರಿಯೊಂದನ್ನು ಜಾರಿಗೆ ತಂದಿದ್ದು, ಅಂತಹ ಮಾದರಿಯನ್ನು ರಾಜ್ಯದಲ್ಲಿ ಅಳವಡಿಸುವುದು ಸೂಕ್ತ ಅನಿಸುತ್ತದೆ. ಸಂಬಂಧಪಟ್ಟವರು ಇತ್ತ ಗಮನಹರಿಸಬೇಕಷ್ಟೇ.

ಪ್ರಜಾವಾಣಿ

ಸಂಪಾದಕ ಶಾಂತಕುಮಾರ್‌ಗೆ ಕೊಕ್

ಕನ್ನಡ ಪತ್ರಿಕೋದ್ಯಮದಲ್ಲಿ ಇನ್ನೊಂದು ಭೂಕಂಪ ಸಂಭವಿಸಿದೆ. ಇದರ ತೀವ್ರತೆ ಎಷ್ಟೆಂದರೆ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಸಂಪಾದಕ ಶಾಂತಕುಮಾರ್ ಬದಲಿಗೆ ಅವರ ಕಿರಿಯ ಸೋದರ ತಿಲಕ್‌ಕುಮಾರ್ ಈಗ ಸಂಪಾದಕ. ಇದು ಫೆಬ್ರವರಿ 8 ರಂದು ರಾತ್ರೋರಾತ್ರಿ ಆದ ಬದಲಾವಣೆ. ಬಹುಶಃ ಪ್ರಜಾವಾಣಿಯ ಬಹುತೇಕ ಓದುಗರಿಗೆ ಇದು ಈಗಲೂ ಗೊತ್ತಾಗಿರಲಿಕ್ಕಿಲ್ಲ, ಇದೆಲ್ಲಾ ಏನು, ಯಾಕೆ ಹೀಗಾಯಿತು ಎಂದು ವಿಚಾರಿಸುವಷ್ಟರಲ್ಲೇ ಹತ್ತಾರು ದಿಕ್ಕಿನಿಂದ ಪತ್ರಿಕೋದ್ಯಮ, ಟಿವಿಗೆ ಸಂಬಂಧಿಸಿರುವ ಸುದ್ದಿಗಳು ಸ್ಫೋಟಗೊಳ್ಳುತ್ತಿವೆ.

ಬೆಂಗಳೂರು ಓದುಗನನ್ನು ಕನ್ನಡ ಟೈಮ್ಸ್ ಆಫ್ ಇಂಡಿಯಾ ಸ್ವಲ್ಪಮಟ್ಟಿಗೆ ಪಳಗಿಸುತ್ತಿರುವಂತೆ ಕಾಣುತ್ತಿದೆ. ಅವರ ಸೇಲ್ಸ್ ಜಾಸ್ತಿಯಾಗಿದೆ. ಮತ್ತೊಂದೆಡೆ ಟೈಮ್ಸ್ ಧಣಿಗಳು ವಿಕಗೆ 3 ವರ್ಷದ ಆಯಸ್ಸು ನೀಡಿ ಅಷ್ಟರಲ್ಲಿ ಕನ್ನಡ ಟೈಮ್ಸ್ ಗೆದ್ದರೆ ನಿನ್ನ ಸೇಣು ಗ್ಯಾರಂಟಿ ಎಂದು ಬಿಟ್ಟಿದ್ದಾರೆ.

ಇನ್ನೊಂದೆಡೆ ಟಿವಿ ಜಗತ್ತಿನಲ್ಲೂ ಭೂಕಂಪಗಳಾಗಿ ಕೆಲವು ತಲೆಗಳು ಉರುಳಿ ಬಿದ್ದಿವೆ. ಕೇರಳದ ಏಷ್ಯಾ ನೆಟ್ ಗ್ರೂಪಿನವರು ಮತ್ತೆ ಕನ್ನಡ ಚಾನೆಲ್ ಶುರು ಮಾಡುವ ಸುದ್ದಿ ಬರುತ್ತಿದ್ದಂತೆ ಝೀ ಟಿವಿ ಕನ್ನಡದಿಂದ ಶಶಿಧರ್ ಭಟ್‌ಗೆ ಕೊಕ್ ನೀಡಲಾಗಿದೆ. ಇನ್ನು ಮುಂದೆ ಜನಪ್ರಿಯ ಅಖಾಡ ಪ್ರೋಗ್ರಾಂ ಝೀನಲ್ಲಿ ಬರಲ್ಲ, ಇದಕ್ಕೆ ಝೀ ಕೊಟ್ಟ ಕಾರಣ ಏನೆಂದರೆ ಏಷ್ಯಾ ನೆಟ್‌ಗೆ ಶಶಿಧರ್ ಸಪೋರ್ಟ್ ಮಾಡುತ್ತಿದ್ದಾರೆಂದು! ಆದರೆ ಭಟ್ ಏಷ್ಯಾನೆಟ್ ಕನ್ನಡ ಟಿವಿಯ key position ನಲ್ಲಿದ್ದಾರೆ. ಇನ್ನೊಂದೆಡೆ ಈ ಟಿವಿ ತನ್ನ 27% ಶೇರುಗಳನ್ನು ವಿದೇಶಿ ಕಂಪನಿಯೊಂದಕ್ಕೆ ಮಾರಿಕೊಂಡಿದೆ. ಕಾರಣ ಹಣದ ಕೊರತೆ.

ಇನ್ನು ಮಾಫಿಯಾ ಜಗತ್ತಿನ ಡಾನ್ (ನಿವೃತ್ತ....?) ಮುತ್ತಪ್ಪ ರೈ ಕೂಡ ಒಂದು ಪೇಪರ್ ಪ್ರಿಂಟ್ ಮಾಡುವ ತಯಾರಿಯಲ್ಲಿದ್ದಾನೆ. ಮೊದಲಿಗೆ ಅದರ ಸಂಪಾದಕನಾಗಿ ಬಾಂಬ್ ಬಾಲಕ ಗಿರೀಶ್ ಮಟ್ಟಣ್ಣನವರ್ ಎಂದಿತ್ತಾದರೂ ಗಿರೀಶ್ ಈಗ ರಾಜ್ಯ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಯಾದ ಕಾರಣ TV 9 ನಿಂದ ಓಡಿಸಲ್ಪಟ್ಟ ಶಿವಶಂಕರ್ ರೈ ಪತ್ರಿಕೆಯ ಉಸ್ತುವಾರಿ ಮಾಡಲಿದ್ದಾನೆ. ಈ ಮಧ್ಯೆ ಲಂಕೇಶ್ ಬಳಗದ ಮಿತ್ರ ಮೈಸೂರಿನ ಮಹೇಶ್ 'ಸಕಾಲ' ಎನ್ನುವ ಚೆಂದದ ಮಾಸಪತ್ರಿಕೆ ಮಾಡಿದ್ದಾರೆ.



ತಿಲಕ್ ಕುಮಾರ್


ಒಟ್ಟಿನಲ್ಲಿ ಕನ್ನಡ ಮೀಡಿಯಾಗೂ ಇದೊಂದು ಸುಗ್ಗಿಕಾಲ. ಅದರಲ್ಲಿ ಓದುಗ ದೊರೆ ಜೊಳ್ಳು-ಕಾಳು ತೂರುತ್ತಾ ಯಾವುದನ್ನು ಉಳಿಸುತ್ತಾನೋ ನೋಡಬೇಕು.

ಪ್ರಜಾವಾಣಿಯಲ್ಲಿ ಬದಲಾವಣೆ

ಜನಪ್ರಿಯತೆ, ಕ್ವಾಲಿಟಿ ಹಾಗೂ ದಕ್ಷತೆಯಲ್ಲಿ ಈಗಲೂ ಕರ್ನಾಟಕದ ನಂ 1 ಡೈಲಿಯಾಗಿರುವ ಪ್ರಜಾವಾಣಿಗೆ ಈಗ ತಿಲಕ್ ಕುಮಾರ್ ಸಂಪಾದಕರಾಗಿದ್ದಾರೆ. ಈಗ್ಗೆ 5 ವರ್ಷಗಳ ಹಿಂದೆ ಹರಿಕುಮಾರ್ ಬದಲಾಗಿ ಶಾಂತ್ ಕುಮಾರ್ ಸಂಪಾದಕರಾಗಿ ಬಂದಿದ್ದರು. ಅವತ್ತು ವಿಜಯ ಕರ್ನಾಟಕ ಮಾರ್ಕೆಟಿಂಗ್ ಅಶ್ವಮೇಧಯಾಗಕ್ಕೆ ತಡೆಯೊಡ್ಡಿ ಪ್ರಜಾವಾಣಿಯನ್ನು ಭದ್ರವಾಗಿ ನಿಲ್ಲಿಸಿದ್ದ ಶಾಂತಕುಮಾರ್ ಇವತ್ತಿನ ಬದಲಾದ ಸನ್ನಿವೇಶದಲ್ಲಿ ಡೈರೆಕ್ಟರ್ ಮಾತ್ರ. ಪ್ರಜಾವಾಣಿ ಈಗ ಮತ್ತೆ ಹರಿಕುಮಾರ್ (ಪತ್ನಿ ಹಾಗೂ ಸಂಸ್ಥೆಯ ನಿರ್ದೇಶಕಿ ಪಾರುಲ್ ಮೂಲಕ) ಹಾಗೂ ತಿಲಕ್‌ಕುಮಾರ್ ಕೈಗೆ ಹೋಗಿದೆ.

ಪ್ರಜಾವಾಣಿ ಎದುರು ಈಗಲೂ ಕೆಲವು ದೊಡ್ಡ ಸವಾಲುಗಳಿವೆ. ಹೊಸ ಕ್ಯಾಪ್ಟನ್ ಅದನ್ನು ಯಶಸ್ವಿಯಾಗಿ ನಿಭಾಯಿಸಲಿ ಎಂದಷ್ಟೇ ಈಗ ಆಶಿಸಬಹುದು.

ಅತ್ತ ಟೈಮ್ಸ್‌ನ ಮಾರ್ವಾಡಿ ಧಣಿಗಳಿಗೆ ತಮ್ಮ ಭವಿಷ್ಯದ ಪ್ಲಾನ್‌ಗಳಿಗೆ, ಜಾಹೀರಾತು ಆದಾಯ ಗಳಿಕೆಗೆ ವಿಜಯ ಕರ್ನಾಟಕ ತೊಡಕು ಎನಿಸಲಾರಂಭಿಸಿದೆ. ಕನ್ನಡ ಟೈಮ್ಸ್‌ಗೆ ಕಾರ್ಪೊರೇಟ್ ಜಗತ್ತಿನ ಜಾಹೀರಾತು ದುಡ್ಡು ಹಾಗೂ ದೊಡ್ಡ ನಗರಗಳಲ್ಲಿ ಆವರೇಜ್ ಪ್ರಸಾರ ಇದ್ದರೆ ಸಾಕು ಎಂದವರ ಎಣಿಕೆ. ಅವರ ಕೈಲಿರುವ ಕ್ಯಾಲ್ಕುಲೇಟರ್ ವಿಜಯ ಕರ್ನಾಟಕ ಒಂದು ಬಿಳಿಯಾನೆ ಎಂಬ ಲೆಕ್ಕ ತೋರಿಸುತ್ತಿದೆಯಂತೆ.



ಶಾಂತಕುಮಾರ್

ಟಿವಿ ಚಾನಲ್ ಸಮರ

ಕಾವೇರಿ ಚಾನಲ್‌ಗೆ ಮತ್ತೆ ಜೀವ ತುಂಬಲು ಹೊರಟಿರುವ ಏಷ್ಯಾ ನೆಟ್ ಮುಂದಿನ ದಿನಗಳಲ್ಲಿ ಕೇವಲ ಉದಯ-ಈಟಿವಿ ವಿರುದ್ಧ ಮಾತ್ರವಲ್ಲ, ಇನ್ನೆರಡು ಹೊ... ಚಾನೆಲ್‌ಗಳ ಜೊತೆಯೂ ಗುದ್ದಾಡಬೇಕಾಗುತ್ತದೆ. ಒಂ... ಕುಮಾರಸ್ವಾಮಿಯ ಕನ್ನಡ ಕಸ್ತೂರಿ (ಶುರುವಾದ... ಇನ್ನೊಂದರ ಹೆಸರು ಇನ್ನೂ ಅಖೈರಾಗಿಲ್ಲ. ಅದ... ಮಾಲೀಕರು ಮಾತ್ರ ಎಸ್.ಎಂ. ಕೃಷ್ಣ ಅಳಿಯ ಸಿದ್ಧಾರ್ಥ... ಮತ್ತು ರಾಜ್ಯಸಭೆಯ ಸದಸ್ಯತ್ವವನ್ನು ಖರೀದಿಸಿದ ಉದ್ಯ... ರಾಜೀವ್ ಚಂದ್ರಶೇಖರ್!

ಈ ನಡುವೆ ಈಟಿವಿ ಆಂಧ್ರದ ಕಾಂಗ್ರೆ... ಸರ್ಕಾರದೊಂದಿಗೆ ಜಗಳಕ್ಕೆ ಬಿದ್ದು ಭಾರಿ ಗಾ... ಮಾಡಿಕೊಂಡಿದೆ. ರಾಮೋಜಿಯ ಮಾರ್ಗದರ್ಶಿ ಚಿಟ್... ಜನ ದುಡ್ಡು ಕಟ್ಟದಂತೆ ಮಾಡಿರುವ ಆಂಧ್ರ ಸರ್ಕಾ... ಕೇಂದ್ರ ಸರ್ಕಾರಕ್ಕೆ ಚಾಡಿ ಹೇಳಿ ಟಿವಿ ಚಾನೆಲ್ ವ್ಯವಹಾ... ಸಂಬಂಧಿಸಿದಂತೆ ತೆರಿಗೆ ಬಾಕಿ ಅದೂ ಇದೆಂ... ಕೋಟಿಗಟ್ಟಲೆ ರೂಪಾಯಿಗಳ ದಂಡ ಹಾಕಿಸಿಬಿಟ್ಟಿದ...

ರಾಮೋಜಿ ಹತ್ತಿರ ಈಗ ದುಡ್ಡಿಗ... ಕೊರತೆಯಾಗಿ ಅದನ್ನು ಸರಿದೂಗಿಸಲು ಈಟಿವಿಯ 27% ಶೇರ್‌ಗಳನ್ನು ಅಮೆರಿಕಾದ ಕಂಪನಿಯೊಂದಕ್ಕೆ ಮಾರಲಾಗಿದೆ.

ಈ ಮೀಡಿಯ ಜಗತ್ತಿನ ಭೂಕಂಪನದ ಬಗ್ಗೆ ಜನ ಏನೆಂದುಕೊಳ್ಳುತ್ತಾರೋ ಅದು ಬೇರೆ... ವಿಚಾರ. ಆದರೆ ಈ ಸಂಸ್ಥೆಗಳಲ್ಲಿ ಕೆಲ... ಮಾಡುವವರಿಗೆ 'ಮ್ಯಾನೇಜ್‌ಮೆಂಟ್' ಚೇಂಜ್, ಎಡಿಟರ್ ಬದಲಾದರು ಎಂದರೆ ಸಾಕು ಗಾಬರಿಯಾಗುತ್ತಾರೆ. ಹೊಸ ಪತ್ರಿಕೆ-ಟಿವಿ ಚಾನೆಲ್ ಬರುತ್ತಿದೆ ಎಂದರೆ ಕೆಲಸ ಹುಡುಕುತ್ತಿರುವವರಿಗೆ ಥ್ರಿಲ್ ಆಗುತ್ತೆ, ಆದ... ಮತ್ತೆಲ್ಲೋ ಇನ್ನೊಂದು ಮೀಡಿಯಾ ಅಂಗಡಿ ಬಾಗಿಲು ಮುಚ್ಚಿಕೊಳ್ಳುತ್ತಿರುತ್ತದೆ. ಕೆಲವರಾದರೂ ಬೀದಿಗೆ ಬೀಳುತ್ತಾರೆ.

ಮತ್ತೆ ಬಿಜೆಪಿ ಭಿನ್ನಮತ!


ಇಲ್ಲದ ನಿಗಮ ಮಂಡಳಿಗಳಿಗೆಲ್ಲಾ ಬಿಜೆಪಿ ಅಧ್ಯಕ್ಷರನ್ನು ನೇಮಿಸಿ 20 ದಿನ ಕಳೆದಿದೆ. 6 ಬಿಜೆಪಿ ಶಾಸಕರು ಇದುವರೆವಿಗೂ ಅಧಿಕಾರ ವಹಿಸಿಕೊಂಡಿಲ್ಲ, ಕೆಲ ಅತೃಪ್ತರು ಅಧ್ಯಕ್ಷ ಸ್ಥಾನ ನಿರಾಕರಿಸಿ ಪಕ್ಷದ ರಾಜ್ಯಾಧ್ಯಕ್ಷ ಸದಾನಂದಗೌಡರಿಗೆ ಪತ್ರ ಬರೆದಿದ್ದಾರೆ. ಇದರಿಂದಾಗಿ ಮತ್ತೆ ಬಿಜೆಪಿ ಭಿನ್ನಮತಕ್ಕೆ ತುಪ್ಪ ಬಿದ್ದಿದೆ!

ಶಾಸಕರ ವಲಯದಿಂದ 17 ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸಿ ಆದೇಶ ಹೊರಡಿಸಲಾಗಿತ್ತು. ಅರಗ ಜ್ಞಾನೇಂದ್ರ-ಭೂಸೇನಾ ನಿಗಮ, ಶಂಕರಲಿಂಗೇಗೌಡ-ಎಂಎಸ್‌ಐಎಲ್, ಶಕುಂತಲಾಶೆಟ್ಟಿ-ಗೇರು ಅಭಿವೃದ್ಧಿ ಮಂಡಳಿ, ಪಿ.ಸಿ. ಮೋಹನ್- ಮೈಸೂರು ಪೇಪರ್ ಮಿಲ್, ಚಂದ್ರಶೇಖರ ಪಾಟೀಲ ರೇವೂರ-ನೀರಾವರಿ ನಿಗಮ(ಗುಲ್ಬರ್ಗ ವಲಯ), ದೊಡ್ಡನಗೌಡ - ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ.... ಹೀಗೆ ಹಂಚಲಾಗಿತ್ತು. ಆದರೆ ಇವರೆಲ್ಲಾ ಈ ಸ್ಥಾನಗಳನ್ನು ತಿರಸ್ಕರಿಸುವುದರೊಂದಿಗೆ ಮತ್ತೆ ರಾಜ್ಯ ಬಿಜೆಪಿಯಲ್ಲಿ ಪೀಕಲಾಟ ಶುರುವಾಗಿದೆ.


21 ಮಂದಿಯನ್ನು ಕಾರ್ಯಕರ್ತರ ವಿಭಾಗದಿಂದ ನಿಗಮ ಮಂಡಳಿ ಅಧ್ಯಕ್ಷರಾಗಿ ನೇಮಿಸಿ ಆದೇಶ ಹೊರಡಿಸಿದ್ದರೂ 18 ಮಂದಿ ಮಾತ್ರ ಅಧಿಕಾರ ವಹಿಸಿಕೊಂಡಿದ್ದಾರೆ. ಬೇಕಿದ್ದರೆ ವಿಧಾನ ಪರಿಷತ್‌ಗೆ ನೇಮಿಸಿ ಆದರೆ ನಿಗಮ-ಮಂಡಳಿ ಸ್ಥಾನ ಬೇಡ ಎಂದು ಬೆಂಗಳೂರಿನ ಎಸ್. ಕೈಲಾಸ್ ತಗಾದೆ ತೆಗೆದಿದ್ದಾರೆ. ಆನೇಕಲ್ ಬಿಜೆಪಿ ಮುಖಂಡ ಶಾಸಕ ಎ. ನಾರಾಯಣಸ್ವಾಮಿ ತನ್ನನ್ನು ಸಚಿವರನ್ನಾಗಿ ಮಾಡಲಿಲ್ಲ ಎಂದು ಅಸಮಾಧಾನಗೊಂಡು ನಿಗಮ-ಮಂಡಳಿ ಅಧ್ಯಕ್ಷರಾಗಲು ಒಲ್ಲೆ ಎಂದಿದ್ದಾಗಿದೆ.


ಅಂತಿಮ ಪಟ್ಟಿಯಲ್ಲಿ ತಮ್ಮ ಹೆಸರಿದ್ದರೂ ಸ್ಥಾನ ಸೂಚಿಸದಂತೆ ಸಚಿವ ಸೊಗಡು ಶಿವಣ್ಣ ಕಸರತ್ತು ನಡೆಸಿದ್ದರಿಂದ ಕುಣಿಗಲ್‌ನ ಸುರೇಶ್‌ಗೌಡ ಆಟಕ್ಕುಂಟು-ಲೆಕ್ಕಕ್ಕಿಲ್ಲ ಎಂಬ ಸ್ಥಿತಿಗೆ ಬಂದಾಗಿದೆ.

ಇನ್ನು ಕೇಂದ್ರ ಸರಕಾರವೇ ಅಧ್ಯಕ್ಷರನ್ನು ನೇಮಿಸುವ ಸಮಾಜ ಕಲ್ಯಾಣ ಸಲಹಾ ಮಂಡಳಿಗೆ ಈಗಾಗಲೇ ಜೆಡಿಎಸ್ ತಮ್ಮ ಪಕ್ಷದ ಮೂವರನ್ನು ಸೂಚಿಸಿ ಆಗಿದೆ. ಸರಕಾರ ಕೇಂದ್ರಕ್ಕೆ ಮಾಡಲಾದ ಶಿಫಾರಸ್ಸು ಪಟ್ಟಿಯಲ್ಲಿ ವಿಧಾನ ಪರಿಷತ್ ಸದಸ್ಯೆ ವಿಮಲಾಗೌಡ ಹೆಸರಿಲ್ಲ, ಹೀಗಿದ್ದು ಈ ಮಂಡಳಿಗೆ ವಿಮಲಾಗೌಡ ಅಧ್ಯಕ್ಷರೆಂದು ಬಿಜೆಪಿ ಘೋಷಿಸಿದೆ. ಸದ್ಯಕ್ಕೆ ವಿಮಲಾಗೌಡ ತ್ರಿಶಂಕು ಸ್ಥಿತಿಯಲ್ಲಿದ್ದಾರೆ.


ಸದಾನಂದಗೌಡ

ಬೆಂಗಳೂರು ಜಲಮಂಡಳಿಯಲ್ಲಿ ಆಯುಕ್ತ ಅಥವಾ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯೇ ಇಲ್ಲ, ಇರುವುದೊಂದೇ ಸ್ಥಾನ ಅಧ್ಯಕ್ಷಗಿರಿ. ಇದುವರೆವಿಗೂ ಅಧಿಕಾರಿಗಳೇ ಅದನ್ನು ನಿಭಾಯಿಸಿಕೊಂಡು ಬಂದಿದ್ದಾರೆ. ಸದ್ಯಕ್ಕೆ ಜಲಮಂಡಳಿ ಅಧ್ಯಕ್ಷರಾಗಿ ಐಎಎಸ್ ಅಧಿಕಾರಿ ಮುನಿಯಪ್ಪ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೂ ಈ ಮಂಡಳಿಗೆ ಬಿ.ಬಿ.ಶಿವಪ್ಪ ಅಧ್ಯಕ್ಷರೆಂದು ಬಿಜೆಪಿ ಆದೇಶಿಸಿದೆ. ಪ್ರತಿಪಕ್ಷದ ನಾಯಕನಾಗಲಿಲ್ಲ ಎಂದು ಕಾಂಗ್ರೆಸ್‌ಗೆ ಪಕ್ಷಾಂತರಗೊಂಡು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತು ಭ್ರಮನಿರಸನಗೊಂಡಿದ್ದ ಶಿವಪ್ಪನವರಿಗೆ ಇಲ್ಲ ಎಂಎಲ್‌ಎ ಗಿರಿ. ಇರಲಿ ನಿಗಮ-ಮಂಡಳಿ ಅಧ್ಯಕ್ಷ ಸ್ಥಾನವೂ ಗಿಟ್ಟಲಿಲ್ಲ, ಈಗ ಸುಗ್ರೀವಾಜ್ಞೆ ತಂದು ಜಲ ಮಂಡಳಿಯ ಸಂಪ್ರದಾಯ ಮುರಿದು ಶಿವಪ್ಪ ಅವರನ್ನೇ ಮಂಡಳಿ ಅಧ್ಯಕ್ಷ ಗಾದಿಗೆ ಪ್ರತಿಷ್ಠಾಪಿಸಲು ಖುದ್ದು ಯಡಿಯೂರಪ್ಪನವರೇ ತೆರೆಮರೆ ಯತ್ನದಲ್ಲಿದ್ದಾರೆಂಬ ಗುಸು-ಗುಸು ಇದೆ.


ಬಿ.ಬಿ.ಶಿವಪ್ಪ


ಶಂಕರಲಿಂಗೇಗೌಡ


ಶಕುಂತಲಾ ಶೆಟ್ಟಿ


ಅರಗ ಜ್ಞಾನೇಂದ್ರ


ವಿಮಲಾಗೌಡ

ಹಿಂದಿನಿಂದಲೂ ಮುಖ್ಯಮಂತ್ರಿಯೇ ಅಧ್ಯಕ್ಷರಾಗಿರುವ ಕರ್ನಾಟಕ ಸಾಕ್ಷರತಾ ಮಿಷನ್‌ಗೆ ಬಿಜಾಪುರದ ಬಿಜೆಪಿ ಮುಖಂಡೆ ಮಂಗಳಾದೇವಿ ಬಿರಾದಾರ ಅವರನ್ನು ನೇಮಿಸಿ, ಆದೇಶ ಹೊರಡಿಸುವುದರೊಂದಿಗೆ ಯಾವ್ಯಾವ ನಿಗಮ ಮಂಡಳಿಗೆ ಅಧ್ಯಕ್ಷರನ್ನು ನೇಮಿಸಬೇಕೆಂಬ ಸೂಕ್ಷ್ಮತೆ, ಪ್ರಜ್ಞೆಯೇ ಇಲ್ಲ ಎಂಬುದನ್ನು ಬಿಜೆಪಿ ಸಾಬೀತುಮಾಡಿದೆ.

ವಾರ್ಷಿಕ 5 ಲಕ್ಷ ಅನುದಾನವೂ ಇಲ್ಲದ, ಅಧ್ಯಕ್ಷರ ಗೂಟದ ಕಾರಿನ ಫ್ಯೂಯಲ್ಲು-ಭತ್ಯೆಗೂ ಎಟುಕದ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಳಿಗೆ ಸಚಿವ ಸ್ಥಾನ ಆಕಾಂಕ್ಷಿಯಾಗಿ ಅತೃಪ್ತಗೊಂಡಿದ್ದ ಕುಷ್ಟಗಿ ಶಾಸಕ ದೊಡ್ಡನಗೌಡರಿಗೆ ನೀಡಿ ಬಿಜೆಪಿ ನಗೆಪಾಟಲಿಗೀಡಾಗಿದೆ. ನಿಗಮ-ಮಂಡಳಿ ಅಧ್ಯಕ್ಷರ ನೇಮಕಾತಿ ಹೊರಬಿದ್ದ ಮೇಲೆ ಅತೃಪ್ತರು ಪಕ್ಷದ ಹೈಕಮಾಂಡಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ, ಕೆಲವರು ಪಕ್ಷದ ರಾಜ್ಯಾಧ್ಯಕ್ಷರಿಗೆ ಪತ್ರ ಬರೆದು ಎಚ್ಚರಿಸಿದ್ದಾರೆ.

ಸಚಿವರನ್ನಾಗಿಯೂ ಮಾಡದೇ, ಉಪಯೋಗಕ್ಕೆ ಬಾರದ ನಿಗಮ-ಮಂಡಳಿಗೆ ಅಧ್ಯಕ್ಷರಾಗಿ ಮಾಡಿ ಅವಮಾನಿಸಲಾಗಿದೆ ಎಂದು ಮೈಸೂರಿನ ಎಚ್.ಎಸ್. ಶಂಕರಲಿಂಗೇಗೌಡ, ತೀರ್ಥಹಳ್ಳಿಯ ಅರಗ ಜ್ಞಾನೇಂದ್ರ, ಪುತ್ತೂರಿನ ಶಕುಂತಲಾ ಶೆಟ್ಟಿ ಪಕ್ಷದ ಪ್ರಮುಖ ನಾಯಕರ ವಿರುದ್ಧ ಟೊಂಕ ಕಟ್ಟಿ ನಿಂತಿದ್ದಾರೆ. ಅನಂತು ಪಡಸಾಲೆಯಲ್ಲಿ ಅತೃಪ್ತರ ವೇದಿಕೆ ಸೃಷ್ಟಿಸಲಾಗುತ್ತಿದೆ ಎಂಬ ಗುಸು-ಗುಸು ಇದೆ.

ಈಗಾಗಲೇ ರಾಜ್ಯ ಬಿಜೆಪಿ ಅಧ್ಯಕ್ಷರ ನೇಮಕ ಸಂಬಂಧ ಶಿಸ್ತಿನ ಪಕ್ಷವೆಂದು ಬೀಗುತ್ತಿದ್ದ ಬಿಜೆಪಿಯಲ್ಲಿ ಭಿನ್ನಮತವೆಂಬುದು ಬೀದಿಯಲ್ಲಿ ಬಿದ್ದು ಹೊರಳಾಡಿ, ಬಿಜೆಪಿ ಸಂಸ್ಕೃತಿಯನ್ನು ಬಹಿರಂಗಗೊಳಿಸಿತ್ತು, ಹೈಕಮಾಂಡ್ ಕೊನೆಗೆ ಸದಾನಂದಗೌಡರನ್ನೇ ಅಧ್ಯಕ್ಷರಾಗಿ ಮುಂದುವರೆಸಿ ಅನಂತೂ-ಯಡ್ಡಿ ಬಣಗಳ ನಡುವಿನ ಕದನಕ್ಕೆ ತೆರೆ ಎಳೆಯಲು ಯತ್ನಿಸಿತ್ತು.

ಹೈಕಮಾಂಡಿನ ತೀರ್ಮಾನವನ್ನು ಇಲ್ಲದ ಮನಸ್ಸಿನಿಂದಲೇ ಒಪ್ಪಿಕೊಂಡ, ಅಸಮಾಧಾನಗೊಂಡ, ಸರಿಯಾದ ಅವಕಾಶಕ್ಕಾಗಿ ಕಾದು ಕೂತಿದ್ದ ಬಿಜೆಪಿಯ ಭಿನ್ನಮತೀಯರಿಗೆ ನಿಗಮ-ಮಂಡಳಿ ಅಧ್ಯಕ್ಷರ ನೇಮಕ ಮತ್ತೊಂದು ರಣರಂಗವಾಗಿ ಗೋಚರಿಸಿದಂತಿದೆ. ಅತೃಪ್ತ ಬಿಜೆಪಿಗಳೆಲ್ಲ ಮತ್ತೆ ಒಟ್ಟಾಗಿದ್ದಾರೆ. ಇಂತಹದೊಂದು ಸುವರ್ಣ ಅವಕಾಶ ಮರಳಿಬಾರದು ಎಂದು ನಿಗಮ-ಮಂಡಳಿ ಎಂಬ ಬಿಸಿ ತುಪ್ಪವನ್ನು ಹೇಗೆ ಬಳಸಬೇಕೆಂದು ಲೆಕ್ಕಾಚಾರ ಹಾಕುತ್ತಿದೆ.

-ವರದಿಗಾರ

ಭೈರಪ್ಪನ ಆವರಣ, ಚೆಡ್ಡಿಗಳ ಒಳಾವರಣವಂತಲ್ಲಾ, ಥೂತ್ತೇರಿ

ನಮ್ಮ ಸಂತೆ ಶಿವರದ ಚೆಡ್ಡಿ ಭೈರಪ್ಪ ಈಚೆಗೆ ಬರೆದಿರುವ 'ಆವರಣ' ಎಂಬ ಕಾದಂಬರಿ ಚೆಡ್ಡಿಗಳ ಒಳಾವರಣವಂತಲ್ಲಾ. ಇದನ್ನು ಓದಿದ ಚೆಡ್ಡಿಯೊಬ್ಬ ಬೆಚ್ಚಿಬಿದ್ದು ಫಾಲಿಡಾಲ್ ಕುಡಿಯಲು ಹೋಗಿದ್ದನಂತಲ್ಲಾ. ಲಂಕೇಶ್ ಪತ್ರಿಕೆಯಿಂದಲೇ ಬರವಣಿಗೆ ಕಲಿತುಕೊಂಡ ಆ ಚೆಡ್ಡಿ, ಲಂಕೇಶ್ ತೀರಿಕೊಂಡ ಕೂಡಲೇ ಭೈರಪ್ಪನನ್ನು ಬಿಗಿದಪ್ಪಿಕೊಂಡು ತಾನೂ ಒಂದು ಖಾಕಿ ಚೆಡ್ಡಿ ತೊಟ್ಟಿದ್ದಲ್ಲದೆ, ಗೌರವವಾಗಿ ಸೀರೆಯುಟ್ಟಿದ್ದ ಹೆಂಡತಿಗೂ ಒಂದು ಚೆಡ್ಡಿ ಹಾಕಿ ಫುಲ್‌ಟೈಂ ಚೆಡ್ಡಿಯಾಗಿ ಹೋದನಂತಲ್ಲಾ. ಈಗ ಭೈರು ಬರೆದಿರುವ 'ಆವರಣ' ಮಾರುತ್ತ ಕಮಿಷನ್ ಗಿಟ್ಟಿಸುತ್ತ "ಪ್ರತಿಯೊಬ್ಬ ಮಂದಮತಿಯೂ ಓದಲೇಬೇಕಾದ ಪುಸ್ತಕವಿದು. ನೀವು ಓದಿದ ಕೂಡಲೇ ಈ ದೇಶದ ಮುಸ್ಲಿಮರು, ದಲಿತರು, ಮಹಿಳೆಯರ ಬಗ್ಗೆ ನಿಮಗೆ ತಾತ್ಸಾರ ಹುಟ್ಟದಿದ್ದರೆ ನೀವು ಚೆಡ್ಡಿಗಳೇ ಅಲ್ಲ" ಎಂದು ಸಾರುತ್ತಿದ್ದಾನಂತಲ್ಲಾ. ಈ ಚೆಡ್ಡಿ ಚತುರ ತನಗಂಟಿದ ಕ್ಯಾನ್ಸರ್ ಕಾಯಿಲೆ ಎಲ್ಲರಿಗೂ ಬರಲೆಂದು ಬಾಯಿಬಡಿದುಕೊಂಡನಂತಲ್ಲಾ. ಕಳೆದ ಸಾವಿರಾರು ವರ್ಷಗಳಿಂದಲೂ ದೇವಸ್ಥಾನದಿಂದ ಹೊರಗೆ, ಊರಿನಿಂದ ಹೊರಗೆ ಜೀವಿಸುತ್ತ ಇನ್ನು ಹಿಂದೂಗಳಾಗಿಯೇ ಬದುಕುತ್ತಿರುವ ನಮ್ಮ ಹೊಲೆ ಮಾದಿಗರು, ಯಾವ ಸುಖ ಉಣ್ಣಲು ಇನ್ನೂ ಈ ಧರ್ಮದಲ್ಲಿ ಉಳಿದಿದ್ದಾರೆಂಬ ಕನಿಷ್ಠವಾದ ಪ್ರಶ್ನೆಯನ್ನೂ ಕೇಳಿಕೊಳ್ಳದೆ ನಾವೆಲ್ಲಾ ಒಂದೆಂದು ಅಕ್ರಮ ಪಿಂಡಗಳು, ಅಸ್ಪೃಶ್ಯತೆ, ಅವಮಾನದ ಕಾರಣಕ್ಕೆ, ದಲಿತರ ಶಾಪ ತಟ್ಟಿದಂತೆ ಹಾಳುಬೀಳುತ್ತಿರುವ ಗುಡಿಗೋಪುರ ರಕ್ಷಿಸಲು ಹೊರಟಿರುವುದರ ಹಿಂದಿನ ಹೊಟ್ಟೆಪಾಡನ್ನು ನೆನೆದರೆ, ಹೊಟ್ಟೆ ಹಿಡಿದುಕೊಂಡು ನಗುವಂತಾಗುತದೆಯಲ್ಲಾ, ಥೂತ್ತೇರಿ!



* * * * * * * * *

ತಮ್ಮ ಕೃತಿಗಳನ್ನು ತಾವೇ ವಿಮರ್ಶೆ ಮಾಡಿಕೊಳ್ಳುವುದು, ತಮ್ಮವರೇ ಓದುವುದು, ತಮ್ಮವರೇ ಮೆರೆಸುವುದು, ರಾಷ್ಟ್ರೋತ್ಥಾನ ಸಾಹಿತ್ಯ ಪರಂಪರೆಯಲ್ಲಿ ನಡೆದು ಬಂದಿರುವಂತೆ "ಸದರಿ ಭೈರಪ್ಪನ 'ಆವರಣ'ವನ್ನು ಕನ್ನಡ ಸಾಹಿತ್ಯದ ಯಾವ ವಿಮರ್ಶಕನೂ ವಿಮರ್ಶೆ ಮಾಡಬಾರದು, ನಮಗೂ ವಿಮರ್ಶೆ ಬರುವುದರಿಂದ ನಾವೇ ಮಾಡಿಕೊಳ್ಳುತ್ತೇವೆ" ಎಂದು ಚೆಡ್ಡಿಗಳು ಘೋಷಿಸಿಕೊಂಡಿವೆಯಂತಲ್ಲಾ, ಅಂತೂ ಚೆಡ್ಡಿಗಳೂ ವಿಮರ್ಶಕರಾಗಿ ರೂಪುಗೊಂಡರೆಂದು ಚೆಡ್ಡಿಗಳಲ್ಲದವರು ನಿಟ್ಟುಸಿರು ಬಿಡುತ್ತಿರಬೇಕಾದರೆ, ಇದೀ ಭೈರಪ್ಪನ ಸಾಹಿತ್ಯವನ್ನು ರಾಷ್ಟ್ರೋತ್ಥಾನ ಪರಿಷತ್ತಿನಿಂದಲೇ ಪ್ರಕಟಿಸಿ, ಚೆಡ್ಡಿಗಳೇ ಅವರ ಸಮಗ್ರ ಸಾಹಿತ್ಯವನ್ನು ಮರುವಿಮರ್ಶೆ ಮಾಡಿ, ಕರ್ನಾಟಕದ ಗೋಳವಲ್ಕರ್ ಎಂದು ಘೋಷಿಸಿಬಿಡಬೇಕೆಂದು ಹೊಸ ತಲೆಮಾರಿನ ಚೆಡ್ಡಿಗಳು ವಿಶ್ಲೇಷಿಸುತ್ತಿವೆಯಂತಲ್ಲಾ, ಈ ನಡುವೆ ಕೆಲವು ಹೆಬ್ಬೆಟ್ಟಿನ ಚೆಡ್ಡಿಗಳು ಮತ್ತು ಮುರ್ಖ ಭಜರಂಗಿಗಳು "ಆ ಗಿರೀಶ್ ಕಾರ್ನಾಡ್ ಎಂಬುವನ ಜ್ಞಾನಪೀಠವನ್ನು ಕಸಿದುಕೊಂಡು ನಮ್ಮ ಭೈರಪ್ಪನಿಗೆ ಕೊಟ್ಟರೆ ಹೇಗೆ" ಎಂದು ಚಿಂತಿಸುತ್ತಿರುವಾಗಲೇ ಅತ್ತ ಬಿಜೆಪಿಗಳು "ನಮ್ಮ ಸಾಂರಾಜ್ಯ ಸ್ಥಾಪನೆಗೆ ಸಾಲದೆ ಬಂದಿರುವ ಇನ್ನು ಕೇವಲ ಮುವ್ವತ್ತು ಸೀಟುಗಳನ್ನು ಹೇಗೆ ಗೆಲ್ಲಬೇಕು" ಎಂದು ಸಂಚು ರೂಪಿಸಲು ಅಮೆರಿಕದ ನೆರವನ್ನು ಕೋರಿವೆಯಂತಲ್ಲಾ, ಆ ಪ್ರಕಾರ ಇನ್ನು ಮೂವತ್ತು ಕ್ಷೇತ್ರಗಳಲ್ಲಿ ಕೋಮು ಗಲಭೆ ಎಬ್ಬಿಸುವುದು, ಮೂರ್ಖ ಸಾಬರಿಂದ ಹಿಂದೂ ಕೊಲೆಯಾಗುವಂತೆ ಮಾಡುವುದು, ಶವ ಮೆರವಣಿಗೆ ಮಾಡಿ ಸತ್ತವನ ಕುಟುಂಬಕ್ಕೆ ಒಂದು ಲಕ್ಷ ಕೊಡುವುದು, ಇದಿಷ್ಟು ಮಾಡಿದರೆ ಮುಂದಿನ ಕರ್ನಾಟಕ ಇನ್ನೊಂದು ಗುಜರಾತ್, ಎಡೂರಪ್ಪ ಮತ್ತೊಬ್ಬ ಮೋದಿಯೆಂದು ಚೆಡ್ಡಿಗಳು ಕುಣಿದಾಡುತ್ತಿವೆಯಂತಲ್ಲಾ, ಥೂತ್ತೇರಿ!!

* * * * * * * * *

ಒಂದು ವೇಳೆ ಎಡೂರಪ್ಪನನ್ನು ಈ ದೇವೇಗೌಡ ಮುಖ್ಯಮಂತ್ರಿ ಮಾಡಲು ಒಪ್ಪದೇ ಹೋದರೆ, ಉಳಿದ ಮುವ್ವತ್ತು ಕ್ಷೇತ್ರವನ್ನು ಗೆಲ್ಲಲು ಸಂಚು ರೂಪಿಸಿ, ಮೆಜಾರಿಟಿ ಪಡೆದು ಜೆ.ಡಿ. ಎಸ್ಸನ್ನು ನಿರ್ನಾಮ ಮಾಡಲು ಮನೆ ಮುರುಕ ಪ್ಲಾನುಗಳನ್ನು ರೆಡಿ ಮಾಡಿಕೊಂಡಿರುವ ಚೆಡ್ಡಿಗಳು ಇದನ್ನು ಯಾರಿಗೂ ಹೇಳದೆ ಗುಟ್ಟಾಗಿಟ್ಟಿರುವಾಗಲೇ ಸದರಿ ಸಂಗತಿ ದತ್ತನ ಮುಖಾಂತರ ದೇವೇಗೌಡರನ್ನು ತಲುಪಿದೆಯಂತಲ್ಲಾ, ಗಾಬರಿ ಬಿದ್ದ ದತ್ತ ಘಟಸರ್ಪವನ್ನು ನೋಡಿದವನಂತೆ ಭಯಭೀತನಾಗಿದ್ದರೆ, ಒಂದಿಷ್ಟೂ ತಲೆ ಕೆಡಿಸಿಕೊಳ್ಳದ ದೇವೇಗೌಡರು "ಹೆದರಬೇಡ ದತ್ತ, ಈ ದೇವೇಗೌಡನ ಒಂದೊಂದು ಅನುಭವಕ್ಕೂ ಒಂದೊಂದು ಕೂದಲು ಉದುರಿ ಹೋಗಿದೆ. ಒಂದು ಅನುಭವಕ್ಕೆ ಒಂದು ಕೂದಲ ಬಲಿ ಎಂದರೆ ನನಗೆ ರಾಜಕಾರಣದಲ್ಲಿ ಎಷ್ಟು ಅನುಭವಗಳಾಗಿರಬಹುದು, ನೀನೇ ಊಹಿಸಿಕೊ? ಈ ಬಿಜೆಪಿ ಜನಗಳಿಗೆ ಎಂಭತ್ತು ಸೀಟು ಬಂದಿರುವುದರಲ್ಲಿ ಆ ಬಂಗಾರಪ್ಪನ ಕಾಣಿಕೆ ಎಷ್ಟು ಗೊತ್ತೆ? ಅದಕ್ಕೇ



ನಾನು ಕುಮಾರನಿಗೆ ಆ ಬಂಗಾರಪ್ಪನ ಜೊತೆ ಮಾತನಾಡು ಎಂದು ಹೇಳಿದೆ. ವಿರಾಟ್ ಹಿಂದೂ ಸಮಾವೇಶದ ಮೂಲಕ ಬಹುಮತ ಪಡೆಯಲು ಹೊರಟಿರುವ ಈ ರಾಷ್ಟ್ರಪ್ರೇಮಿಗಳು ಎಷ್ಟೇ ತಿಣುಕಿದರೂ ನಲವತ್ತು ಸೀಟುಗಳನ್ನು ಗಳಿಸಲು ಒದ್ದಾಡಬೇಕಾದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಲೋಸ್ಕರವಾಗಿಯೇ ಈ ದೇವೇಗೌಡ ಹಗಲುರಾತ್ರಿ ಚಿಂತಿಸುತ್ತಿರುವುದು" ಎಂದು ಹೇಳಿ, ಗೀತೆ ಬೋಧಿಸಿದ ಕೃಷ್ಣನಂತೆ ತುಟಿ ಬಿರಿದರಂತಲ್ಲಾ. ಕೂಡಲೇ ಕಾಲಿಗೆ ಬಿದ್ದ ದತ್ತ "ನೀವು ನಮ್ಮವರಾಗಿ ಹುಟ್ಟಬೇಕಿತ್ತು ಸಾರ್" ಎಂದನಂತಲ್ಲಾ, ಥೂತ್ತೇರಿ!!

* * * * * * * * *

ಕಾವೇರಿ ತೀರ್ಪು ಪ್ರಕಟಗೊಳ್ಳುವುದಕ್ಕಿಂತ ಮೊದಲೇ ಅದು ನಮ್ಮ ಪರ ಇರುತ್ತದೆಂದು ಸಾವಿರ ಪುಟದ ತೀರ್ಪು ಓದಿದ ಸರದಾರನಂತೆ ಹೇಳಿದ್ದ ಕುಮಾರಸ್ವಾಮಿ, ವಿರೋಧ ಪಕ್ಷದವರನ್ನೆಲ್ಲಾ ಕರೆದುಕೊಂಡು ಹೋಗಿ ಪ್ರಧಾನಿ ತೋರಿಸುತ್ತೇನೆಂದು ಹೇಳಿದ್ದರೂ ಒಬ್ಬರೇ ಹೋಗಿ ಬಂದರಂತಲ್ಲಾ. ಪ್ರಧಾನಿಯಂತೂ ತಮ್ಮನ್ನು ಹುಡುಕಿಕೊಂಡು ಬಂದ ತಮ್ಮನ ಮಗನಂತೆ ಪ್ರೀತಿ ಕೋರುತ್ತ, ತುಂಬ ಹತ್ತಿರವೇ ಕೂರಿಸಿಕೊಂಡು "ಹೇಗಿದೆ ಕರ್ನಾಟಕ?" ಎಂದು ಸ್ವಚ್ಛ ಇಂಗ್ಲಿಷ್‌ನಲ್ಲಿ ಕೇಳಲಾಗಿ ಕುಮಾರಸ್ವಾಮಿ ವಿಜಯಾ ಟೈಂಸ್ ಮತ್ತು ದೇವೇಗೌಡರ ಇಂಗ್ಲಿಷ್‌ನಲ್ಲಿ "ಚೆನ್ನಾಗಿದೆ, ಶಾಂತವಾಗಿದೆ, ಪ್ರಶಾಂತವಾಗಿದೆ" ಎಂದುಬಿಟ್ಟರಂತಲ್ಲಾ. ಅಚ್ಚರಿಗೊಂಡ ಪ್ರಧಾನಿ, "ಕಾವೇರಿ ತೀರ್ಪಿನ ನಂತರವೂ ಚೆನ್ನಾಗಿದೆಯಾ?" ಎಂದು ಕೇಳಲಾಗಿ, "ಅದೆಲ್ಲೋ ಮಂಡ್ಯದಲ್ಲಿ ಒಂದಿಷ್ಟು ಕೂಗಾಡಿದರು ಅಷ್ಟೆ. ನಮ್ಮ ರಾಮನಗರ ಕೂಲಾಗಿದೆ. ನಮ್ಮ ಹೊಳೆನರಸೀಪುರವಂತೂ ಸೈಲೆಂಟಾಗಿದೆ. ಹಾಗೆ ನಮ್ಮ ತಂದೆಯವರೂ ತುಂಬಾ ಸೈಲೆಂಟಾಗಿದ್ದಾರೆ" ಎಂದರಂತಲ್ಲಾ. "ಗುಡ್" ಎಂಬ ಪ್ರಧಾನಿ ಕೈಕುಲುಕಿ ಬೀಳ್ಕೊಡುವಾಗ "ಏನು ಇಷ್ಟು ದೂರ ಬಂದಿರಲ್ಲಾ?" ಎಂದು ಕೇಳಲಾಗಿ "ಸುಮ್ಮನೆ ಬಂದೆ ಸಾರ್, ಬಿಡುವಿತ್ತು, ಹಾಗೆ ನಿಮ್ಮನ್ನು ನೋಡಿ ಮಾತಾಡಿಸೋಣ ಅನ್ನಿಸ್ತು" ಎಂದರಂತಲ್ಲಾ. ಉಳಿದದ್ದನ್ನೆಲ್ಲಾ ಅಧಿಕಾರಿಗಳು ಮಾತನಾಡಿ, ಕುಮಾರಸ್ವಾಮಿಗಳನ್ನ ಮರಳಿ ಬೆಂಗಳೂರಿಗೆ ಕರೆದುಕೊಂಡು ಬರುವಷ್ಟರಲ್ಲಿ ಮುಖ್ಯಮಂತ್ರಿಗಳ ಫೈಲನ್ನೆಲ್ಲಾ ಬಾಲಕೃಷ್ಣೇಗೌಡ ಮತ್ತು ದೇವೇಗೌಡರು ಓ.ಕೆ. ಟಿಪ್ಪಣಿ ಬರೆದು, ಸಹಿಯನ್ನು ಕೂಡ ಗುಜರಾಯಿಸಿದ್ದರಂತಲ್ಲಾ ಥೂಥೂಥೂತ್ತೇರಿ!!!

-ಯಾಹೂ

ಕಾವೇರಿ ಹೋರಾಟ

ಎಲ್ಲರೂ ದ್ರೋಹಿಗಳೆ

ಕಾವೇರಿ ಹೋರಾಟವು ಮಳೆಗಾಲದ ನದಿಯಂತೆ ಒಮ್ಮೆ ಉಕ್ಕೇರಿ ಈಗ ಬೇಸಿಗೆಯಲ್ಲಾಗುವಂತೆ ಬತ್ತಿ ಹೋಗುವ ಹಂತ ತಲುಪುತ್ತಿದೆ.

ಇವರಷ್ಟು ಜನಸಾಮಾನ್ಯರ ಆಕ್ರೋಶ ಕರಗಿ ಹೋಯಿತೆಂದಲ್ಲ. ಬದಲಾಗಿ ಈ ಪ್ರತಿರೋಧವನ್ನು ಹಾಗೆ ತಣ್ಣಗಾಗಿಸಿಬಿಡಲು ರಾಜ್ಯದ ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿಗಳು ಒಮ್ಮತದಿಂದ ತೀರ್ಮಾನಿಸಿಕೊಂಡಂತೆ ಭಾಸವಾಗುತ್ತಿದೆ. ಬಹುಶಃ ಸರ್ವಪಕ್ಷಗಳ ಆಘೋಷಿತ ನಿಲುವು ಇದೇ ಇರಬೇಕು!

ಏಕೆಂದರೆ ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪು ಕೇವಲ ಕರ್ನಾಟಕಕ್ಕೆ ಅನ್ಯಾಯ ಮಾಡಿರುವುದು ಮಾತ್ರವಲ್ಲ, ಅದು ಅವೈಜ್ಞಾನಿಕವೂ, ಅವಾಸ್ತವಿಕ ತರ್ಕಗಳಿಂದಲೂ ತುಂಬಿಹೋಗಿದೆ ಎಂಬುದೀಗ ಸಾಬೀತಾಗಿದೆ. ಈಗಿನ ತೀರ್ಪನ್ನು ಈಗಿರುವಂತೆಯೇ ಒಪ್ಪಿಕೊಂಡಲ್ಲಿ ಅದು ರಾಜ್ಯಕ್ಕೆ ಶಾಶ್ವತ ದ್ರೋಹ ಮಾಡಿದಂತೆ ಎಂಬುದೂ ಸುಳ್ಳಲ್ಲ. ವಸ್ತುಸ್ಥಿತಿ ಹೀಗಿದ್ದಾಗಲೂ ಯಾವ ರಾಜಕೀಯ ನಾಯಕನೂ

ಬಿಳಿದಾಳೆ ಈಶ


ಈಗ ಸ್ಪಷ್ಟವಾಗಿ ಮಾತನಾಡುತ್ತಿಲ್ಲ, ಖಚಿತ ನಿಲುವು ಹೇಳುತ್ತಿಲ್ಲ, ಮುಂದಿನ ಪರಿಹಾರೋಪಾಯಗಳ ಬಗ್ಗೆ ಚರ್ಚಿಸುತ್ತಿಲ್ಲ ಎಂಬುದೇ ದುರಂತ.

ಕಾಂಗ್ರೆಸ್ ನಾಟಕ

ಫೆಬ್ರವರಿ 5 ರಂದು ಅಂತಿಮ ತೀರ್ಪು ಬಂದಾಗಿನಿಂದಲೂ ರಾಜ್ಯ ಕಾಂಗ್ರೆಸ್ ಮೇಲ್ಮನೆಯ ಸಭಾಪತಿ ತಿಪ್ಪಣ್ಣ ಹಠಾವ್ ಎಂದು ಬಾಯಿ ಬಡಿದುಕೊಂಡಿದ್ದು ಬಿಟ್ಟರೆ ಕಾವೇರಿ ಬಗ್ಗೆ ಒಂದೇ ಒಂದು ಗಂಭೀರ ಚರ್ಚೆ ನಡೆಸಿಲ್ಲ, ಹೇಳಿಕೆಯನ್ನು ಕೊಟ್ಟಿಲ್ಲ. ಬೀದಿಗಳಲ್ಲಿ ಜನರ ಪ್ರತಿಭಟನೆ ಹೆಚ್ಚುತ್ತಾ ಹೋದಷ್ಟೂ ಕಾಂಗ್ರೆಸ್ಸಿಗರು ತಿಪ್ಪಣ್ಣ ವಿರುದ್ಧ ಗಲಾಟೆ ಜಾಸ್ತಿ ಮಾಡುತ್ತಾ ಹೋದರೇ ವಿನಃ ಇವತ್ತಿನ ಅಗತ್ಯ ಏನೆಂದು ನೋಡಲೇ ಇಲ್ಲ. ಇದು ಆಕಸ್ಮಿಕ ಅಲ್ಲ. ಕಾವೇರಿ



ತೀರ್ಪಿನ ವಿರುದ್ಧ ದನಿ ಎತ್ತಿದರೆ ಕೇಂದ್ರದ ಯುಪಿಎ ಸಮ್ಮಿಶ್ರ ಸರ್ಕಾರದ ಹಾಲಿ ಪಾರ್ಟನರ್ ಡಿಎಂಕೆಗೆ ಹಾಗೂ ಹೈಕಮಾಂಡ್‌ಗೆ ಇಷ್ಟವಾಗುವುದಿಲ್ಲ ಎಂಬ ಲೆಕ್ಕಾಚಾರ ರಾಜ್ಯ ಕಾಂಗ್ರೆಸ್ಸಿಗರದ್ದಾಗಿದೆ.



ಸರ್ವಪಕ್ಷ ಸಭೆ ನಡೆಯಲಿ ನಡೆಯದಿರಲಿ, ತೀರ್ಪಿನ ಪರಿಣಾಮ ಏನೇ ಆಗಲಿ ಖರ್ಗೆ, ಧರಂಸಿಂಗ್ ಹಾಗೂ ಎಚ್.ಕೆ. ಪಾಟೀಲ್ ತಲೆ ಕೆಡಿಸಿಕೊಳ್ಳುತ್ತಿಲ್ಲ. ಇದಕ್ಕಿರುವ ಇನ್ನೊಂದು ಕಾರಣ ಏನೆಂದರೆ ಕಾಂಗ್ರೆಸ್‌ನ ಈ ಮೂವರೂ ಲೀಡರ್‌ಗಳು ಉತ್ತರ ಕರ್ನಾಟಕದವರು. ಅವರು ದಕ್ಷಿಣ ಕರ್ನಾಟಕದ ಜನರ ಕಷ್ಟಗಳಿಗೇಕೆ ಕಿವಿ ಕೊಡುತ್ತಾರೆಂದು ಕಾವೇರಿ ಕಣಿವೆಯ ಕೆಲ ಕಾಂಗ್ರೆಸ್ ಶಾಸಕರೇ ಚಟಪಟಿಸುತ್ತಿದ್ದಾರೆ. ಈಗ ಫೆಬ್ರವರಿ 24 ಕ್ಕೆ ಬೆಂಗಳೂರಿನಲ್ಲಿ ಸರ್ವಪಕ್ಷ ಸಭೆ ಏರ್ಪಾಡಾಗಿದೆ. ಆದರೆ ಕಾಂಗ್ರೆಸ್‌ನ ಯಾವನೂ ಒಂದು ಸಾವಿರ ಪುಟಗಳ ತೀರ್ಪಿನಲ್ಲಿ ಏನೇನಿದೆ, ಎಂದು ತಿಳಿದುಕೊಂಡಿಲ್ಲ ತೀರ್ಪಿನ ಅರ್ಥ ವಿಶ್ಲೇಷಣೆಗಳೇನೆಂದು ತಜ್ಞರಿಂದ ಮಾಹಿತಿ ಪಡೆದುಕೊಂಡಿಲ್ಲ. ಸರ್ವಪಕ್ಷ ಸಭೆಯಲ್ಲಿ ಕಾಂಗ್ರೆಸ್ ಏನು ಕಿಸಿಯಬಹುದು ಯೋಚಿಸಿ.

ಫೂಲ್ ಮಾಡಿದ ಗೌಡ


ಕಾವೇರಿ ವಿವಾದದಲ್ಲಿ ಇಡೀ ಕರ್ನಾಟಕವನ್ನು ಫೂಲ್ ಮಾಡಿದ ರಾಜಕಾರಣಿಯೆಂದರೆ ಅದು ದೇವೇಗೌಡ!

ಗೌಡ ನೀರಾವರಿ ತಜ್ಞ, ಎಲ್ಲಾ ವಿಚಾರ ಅರೆದು ಕುಡಿದಿದ್ದಾರೆಂಬ ಆರೋಪಗಳಿವೆ. ಅದೇ ರೀತಿ ಕಾವೇರಿ ತೀರ್ಪು ಹೊರಬಿದ್ದ ನಂತರ ಮಾಧ್ಯಮಗಳು ಗೌಡರ ಅಭಿಪ್ರಾಯ ಕೇಳಲು ಊರೆಲ್ಲಾ ಹುಡುಕಾಡಿದರೂ ಯಾರ ಕೈಗೂ ಸಿಕ್ಕಿರಲಿಲ್ಲ. ಹೀಗಾಗಿ ಜನರ ಕುತೂಹಲವೂ ಹೆಚ್ಚಾಯಿತು. ಆಗ ಕಾಂಗ್ರೆಸ್ಸಿಗರೂ ಗೌಡ ಎಲ್ಲಿ ಎಂದು ಗೇಲಿ ಮಾಡತೊಡಗಿದರು. ಆಗ ಗೌಡರ ಬಲಗೈ ಬಂಟ ವೈ.ಎಸ್.ವಿ. ದತ್ತ ಒಂದು ಪತ್ರಿಕಾಗೋಷ್ಠಿಯನ್ನೇ ನಡೆಸಿ "ಗೌಡರು ಸಾವಿರ ಪುಟದ ತೀರ್ಪನ್ನು ಓದುತ್ತಿದ್ದಾರೆ, ಆಮೇಲೆ ಅಭಿಪ್ರಾಯ ಹೇಳುತ್ತಾರೆ" ಎಂದುಬಿಟ್ಟರು. ಜನ ಆಗ ಇನ್ನಷ್ಟು ಕುತೂಹಲಿಗಳಾದರು. ರಾಜ್ಯದ ಮಾಜಿ ಪಿಡಬ್ಲ್ಯುಡಿ ಮಂತ್ರಿ, ನೀರಾವರಿ ತಜ್ಞ ಗೌಡರೇನು ಹೇಳುತ್ತಾರೆಂದು ಕಾದೇ ಕಾದರು.

ಕೊನೆಗೂ ಒಂದು ವಾರದ ನಂತರ ಹೊಳೇನರಸಿಪುರದಲ್ಲಿ ಪ್ರತ್ಯಕ್ಷರಾದ ಗೌಡ 'ತೀರ್ಪಿನ ಬಗ್ಗೆ ನನಗೇನೂ ಗೊತ್ತಿಲ್ಲ, ನಾನು ಇಷ್ಟು ದಿನ ಮಣಿಪುರ ರಾಜ್ಯದಲ್ಲಿದ್ದೆ ಎಂದುಬಿಟ್ಟರು.

ರಾಜ್ಯದ ಜನತೆಗೆ ಹಸೀ ಸುಳ್ಳು ಹೇಳಿದ್ದ ಶಾಸಕ ದತ್ತ ಇಂಗು ತಿಂದ ಮಂಗನಂತಾದರು.

ಇನ್ನು ಮುಖ್ಯಮಂತ್ರಿ ಕುಮಾರಸ್ವಾಮಿ ಪ್ರತಿಕ್ರಿಯೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಸೆಕ್ಯುಲರಿಸಂ ಅಂದರೇನೆಂದು ಗೊತ್ತಿಲ್ಲದ, ಕೋಟಿಗೆಷ್ಟು ಸೊನ್ನೆ ಎಂಬುದು ಗೊತ್ತಿಲ್ಲದ ಈ ಬಾಲಕನಿಗೆ ಇನ್ನು ಕಾವೇರಿ ತೀರ್ಪಿನ ಟಿಎಂಸಿ ಲೆಕ್ಕಾಚಾರ ಗೊತ್ತಾಗಲು ಹೇಗೆ ಸಾಧ್ಯ?



ಅಷ್ಟೇ ಅಲ್ಲ ಜೆಡಿಎಸ್‌ಗೆ ಯಾವ ದಾಳ ಉರುಳಿಸಿದರೆ ರಾಜಕೀಯವಾಗಿ ಲಾಭ ಎಂಬ ಲೆಕ್ಕಾಚಾರವಿದೆಯೇ ವಿನಃ ಕರ್ನಾಟಕದ ಹಿತಾಸಕ್ತಿ ಹೇಗೆ ರಕ್ಷಿಸಬೇಕೆಂಬ ಯೋಚನೆ ಇಲ್ಲವೇ ಇಲ್ಲ.

ಹಾಗಾಗಿ ಮೊನ್ನೆ ನಡೆದ ಕಾವೇರಿ ಹಿತರಕ್ಷಣಾ ಸಮಿತಿಯು ಕರೆದಿದ್ದ ಸಂಸದರ ಸಭೆಗೆ ಹೋಗಿದ್ದರೂ ಒಂದು ಮಾತೂ ಆಡದೆ ಬಂದಿದ್ದಾರೆ ಕುಮಾರಸ್ವಾಮಿ. ಒಮ್ಮೆ ಸರ್ವಪಕ್ಷ ಸಭೆ ಕರೆದರೂ ಯಾವ ಗಂಭೀರ ಚರ್ಚೆಯನ್ನು ನಡೆಸದೆ ಸಭೆ ಮುಂದೂಡಲಾಗಿದೆ. ಪ್ರಧಾನಮಂತ್ರಿ ಮನಮೋಹನ್ ಸಿಂಗರ ಬಳಿಗೆ ಸರ್ವಪಕ್ಷ ನಿಯೋಗ ಕರೆದೊಯ್ಯುವುದಾಗಿ ಹೇಳಿದ್ದ ಕುಮಾರಸ್ವಾಮಿ ಕೊನೆಗೆ ತಾವೊಬ್ಬರೆ ದೆಹಲಿಗೆ ಹೋಗಿ ಪ್ರಧಾನಿಯನ್ನು ಭೇಟಿಯಾಗಿ ಬಂದಿದ್ದಾರೆ. ಆಗಲೂ ಸಹ ಮಹತ್ವದ ಮಾತುಕತೆ ಆಗಿಲ್ಲ. ಜೆಡಿಎಸ್‌ನ ಒಬ್ಬ ಸಂಸದ ಚಾಮರಾಜನಗರದ ಶಿವಣ್ಣ ಮಾತ್ರ ಅಂಬರೀಷ್ ರಾಜೀನಾಮೆ ಸುದ್ದಿ ಕೇಳಿ ತಾನೊಂದಿಷ್ಟು ಕಿರುಚಿಕೊಂಡರು. ಯಾವುದೋ ಸರ್ಕಲ್ ಹೆಸರೇಳಿ 'ತಾನು ಅಲ್ಲೇ ಪ್ರಾಣ ಬಿಡುವುದಾಗಿ' ವೀರಪ್ರತಿಜ್ಞೆ ಮಾಡಿಬಿಟ್ಟರು. ಈತ ಎಂತಾ ಅವಿವೇಕಿಯೆಂದರೆ ಈಗಲೂ ತೀರ್ಪಿನ ತಲೆಬುಡ ಏನೆಂದು ತಿಳಿದುಕೊಳ್ಳಲು ಹೋಗಿಲ್ಲ.

ಇನ್ನು ಬಿಜೆಪಿಗಳ ನಿಲುವೇನೆಂದು ಪರಿಶೀಲಿಸಿ ನೋಡಿ. ರಾಜ್ಯ ನೀರಾವರಿ ಸಚಿವ ಈಶ್ವರಪ್ಪ ಸ್ವತಃ ಬಿಜೆಪಿ ಲೀಡರ್. ಇಲ್ಲಿಯವರೆಗೂ ಈ ತೀರ್ಪಿನ ದೂರಗಾಮಿ ಪರಿಣಾಮಗಳ ಬಗ್ಗೆ ಬೆಳಕು ಚೆಲ್ಲುವಂತಾ ಒಂದೇ ಒಂದು ಹೇಳಿಕೆಯನ್ನು ನೀಡಿಲ್ಲ. ತೀರ್ಪಿನ ಅನ್ಯಾಯವನ್ನು ಸರಿಪಡಿಸಲು ಮರು ಪರಿಶೀಲನಾ ಅರ್ಜಿ ಹಾಕಬೇಕೆ! ಅಥವಾ ಸುಪ್ರೀಂಕೋರ್ಟಿನ ಮೊರೆ ಹೋಗಬೇಕೆ ಇಲ್ಲಾ ನೇರ ಪ್ರಧಾನಮಂತ್ರಿಯ ಮೇಲೆ ಒತ್ತಡ ತಂದು ಗಜೆಟ್ ಪ್ರಕಟಣೆ ಆಗದಂತೆ ಮಾಡಬೇಕೆ... ಇದರಲ್ಲಿ ಯಾವುದು ಸರಿ ಎಂಬುದರ ಬಗ್ಗೆ ಈಶ್ವರಪ್ಪನವರಿಗೆ ಖಚಿತ ನಿಲುವೇ ಇಲ್ಲ.

ಇಂತಾ ಅವಕಾಶವಾದಿಗಳ, ಪಲಾಯನವಾದಿಗಳ ನಾಯಕತ್ವದಲ್ಲಿರುವ ಕರ್ನಾಟಕ ರಾಜ್ಯಕ್ಕೆ ನ್ಯಾಯ ದಕ್ಕಿಸಿಕೊಳ್ಳಲು ಸಾಧ್ಯವೆ?

ಎಲ್ಲರೂ ದ್ರೋಹಿಗಳೇ ಆಗಿರುವಾಗ.

ಅಂಬಿಯ ನಕಲಿ ರಾಜೀನಾಮೆ ಪತ್ರ

ಅಂಬರೀಷ್ ನೀಡಿದ್ದ ರಾಜೀನಾಮೆಯನ್ನು ಲೋಕಸಭಾ ಸ್ಪೀಕರ್ ಸೋಮನಾಥ ಚಟರ್ಜಿ ತಿರಸ್ಕರಿಸಿದ್ದಾರೆ. ರಾಜೀನಾಮೆ ನೀಡಿರುವ ವಿಧಾನ ಕ್ರಮಬದ್ಧವಾಗಿಲ್ಲ ಎಂಬ ಕಾರಣಕ್ಕೆ. ಈಗ ಜನ ಕೇಳಬೇಕಿರುವುದು ಒಂದು ಪ್ರಶ್ನೆ.

ಮೂರು ಬಾರಿ ಎಂಪಿಯಾಗಿರುವ ಅಂಬಿಗೆ ಒಂದು ರಾಜೀನಾಮೆ ಹೇಗೆ ನೀಡಬೇಕೆಂಬ ನಿಯಮ ಗೊತ್ತಿರಲಿಲ್ಲವೆ? ಅಥವಾ ರಾಜೀನಾಮೆ ಕೊಟ್ಟಂತೆಯೂ ಆಗಬೇಕು ಆಮೇಲೆ ಅದು ಅಂಗೀಕಾರವೂ ಆಗಬಾರದೆಂದು ಅಂಬಿ ಈ ನಾಟಕ ಮಾಡಿಬಿಟ್ಟರಾ?

ಮುಂದೇನು ಮಾಡುತ್ತಾರೆಂಬುದರ ಮೇಲೆ ಈಗ ಅಂಬಿಯ ಪ್ರಾಮಾಣಿಕತೆ ಸಾಬೀತಾಗಲಿದೆ.

ಸಿನಿಮಾದವರ ಫೋಟೋ ಹೋರಾಟ

ನಮ್ಮ ಸಿನಿಮಾ ಜನ ಏನೇ ಮಾಡಿದರೂ ನಾಟಕೀಯವಾಗೇ ಇರುತ್ತೆ ಬಿಡಿ. ಅವರ ಕಾವೇರಿ ಪ್ರತಿಭಟನೆಯೂ ಹಾಗೇ ಇತ್ತು. H_2O ಸಿನಿಮಾ ಮಾಡಿದ ಉಪೇಂದ್ರನಾಗಲಿ, ಬೋರಿಂಗ್ ತತ್ವಜ್ಞಾನಿ ವಿಷ್ಣುವರ್ಧನ್‌ಗಾಗಲೀ, ಕಾವೇರಿ ತೀರ್ಪಿನ ತಾಂತ್ರಿಕ ವಿವರಗಳೇನೆಂದು ಈಗಲೂ ಗೊತ್ತಿಲ್ಲ. ಆದರೂ ಒಟ್ಟಾರೆ ಕರ್ನಾಟಕಕ್ಕೆ ಅನ್ಯಾಯ ಆಗಿದೆ ಎಂದು ಸಿನಿಮಾದ ಎಲ್ಲಾ ಜನ ಒಟ್ಟಾಗಿ ಬೀದಿಗಿಳಿದಿದ್ದು ಒಳ್ಳೆಯದೇ ಆಯಿತು. ಆದರೆ ತಮಾಷೆ ಏನು ಅಂದರೆ ಸಿನಿಮಾದವರೇ ಆದರೂ ಕೂಡ ಪೇಪರ್‌ನಲ್ಲಿ ತಮ್ಮ ಫೋಟೋ ಬರಲೀಂತ ಅವತ್ತು ಒಬ್ಬರನ್ನೊಬ್ಬರು ತಳ್ಳಿ ನೂಕಾಡಿದ್ದು. ಫಿಲಂ ಚೇಂಬರ್ ಆಫೀಸಿನಿಂದ ಹೊರಟು ಗವರ್ನರ್ ಮನೆ ತಲುಪಿದ ಮೇಲೆ ಈ ಪ್ರಹಸನಗಳು ನಡೆದವು.

ಪತ್ರಿಕಾ ಫೋಟೋಗ್ರಾಫರ್‌ಗಳು ಹಾಗೂ ಟಿವಿ ಕ್ಯಾಮರಾಗಳನ್ನು ನೋಡಿದೇಟಿಗೆ ಜೋಶ್ ಬಂದಂತೆ ಒಬ್ಬರ ಮೇಲೊಬ್ಬರು ಬಿದ್ದು ತಳ್ಳಾಡುತ್ತಾ ಕೆಲವರು ಪೋಸ್ ಕೊಟ್ಟರು. ಪ್ರಮೀಳಾ ಜೋಷಾಯ್ ಒಂದು ಸಾರಿ ಮುಂದಿನ ಸಾಲಿಗೆ ನುಗ್ಗಿ ಬಂದ ರಭಸಕ್ಕೆ, ಶ್ರೀರಕ್ಷಾ, ಮತ್ತಿಬ್ಬರು ನಟಿಯರು ಕೆಳಗೆ ಬಿದ್ದೇಬಿಟ್ಟರು. ಈ ಮಧ್ಯೆ, ತಾರಾ, ಜಯಮಾಲಾ, ಶೃತಿ ಇತ್ಯಾದಿ ನಟಿಯರು ಪ್ರತಿಭಟಿಸುತ್ತಿದ್ದದ್ದನ್ನು ಕಂಡು ಅದೆಲ್ಲಿಂದಲೋ ಹಾರಿ ಬಂದ ಕಾಮಿಡಿ ಗಣೇಶ್ ಕೂಡಾ ಕೈಯೆತ್ತಿ ಪೋಜ್ ಕೊಟ್ಟು ಪ್ರತಿಭಟನಾಕಾರನಾದ. ಘಟಾನುಘಟಿ ಹೀರೋಗಳ ನಡುವೆ ತನಗೆಲ್ಲಿ ಸ್ಥಾನ ಎಂದು ಗಣೇಶ್ ಹೀಗೆ ಓಡೋಡಿ ಬಂದಿರಬಹುದು.

ಒಂದೆರಡು ಫ್ಲಾಪ್ ಸಿನಿಮಾ ಕೊಟ್ಟಿರುವ ಹೊಸ ಹೀರೋ ಒಬ್ಬ 'ನಮಗೆ ನೀರೂ ಬೇಕು, ಬೀರೂ ಬೇಕು' ಎಂದು ಸ್ಲೋಗನ್ ಹಾಕುತ್ತಿದ್ದ. ಮತ್ತಾರೋ ನಿರ್ಮಾಪಕ 'ಓ ಉಸಿರೆ.. ಓ ಉಸಿರೆ' ಎಂದು ಕಿರುಚಿಕೊಳ್ಳುತ್ತಿದ್ದ.... ಅಕ್ಕಪಕ್ಕ ಇದ್ದವರು ಅವನ ಉಸಿರೇನಾದರೂ ಸಿಕ್ಕಿಹಾಕಿ ಕೊಂಡಿತಾ ಎಂದು ಹೋಗಿ ನೋಡಿದರೆ ಅವನು ಆರಾಮವಾಗಿ ನಿಂತು 'ಉಸಿರೇ' ಸ್ಲೋಗನ್ ಹಾಕುತ್ತಲೇ ಇದ್ದ. ಕೊನೆಗೆ ಗೊತ್ತಾಗಿದ್ದೇನೆಂದರೆ ಅವನ ಹೊಸ ಫಿಲಂ ಹೆಸರು 'ಓ ಉಸಿರೆ' ಅಂತಾ.

ಕಾವೇರಿ ಹೋರಾಟವನ್ನು ತನ್ನ ಸಿನಿಮಾದ ಪ್ರಚಾರಕ್ಕೆ ಉಪಯೋಗಿಸಿಕೊಳ್ಳುತ್ತಿದ್ದ ಆ ಭೂಪ!

ಗವರ್ನರ್ ಮನೆ ಬಾಗಿಲಲ್ಲಿ ಇನ್ನೊಂದು ತಮಾಷೆ ನಡೀತು. ಎಸ್. ನಾರಾಯಣ್ ಹಾಗೂ ಗವರ್ನರ್ ಬಂಗಲೆಯ ತೋಟದ ಕೆಲಸಗಾರ್ತಿಯ ನಡುವಿನ ಸಂಭಾಷಣೆ ಅದು.



ನಾರಾಯಣ್: (ಕೋಪ ನಟಿಸುತ್ತಾ) ಏನಮ್ಮ ಗೌರ್ನರ್ ಇದ್ದಾರ ಒಳಗೆ?

ಕೆಲಸದಾಕೆ: ಯಾಕ್ ಸಾಮಿ!

ನಾರಾಯಣ್: ಇದ್ದಾರೋ ಇಲ್ವೋ ಹೇಳು ನಾನ್ ಸ್ವಲ್ಪ ಅರ್ಜೆಂಟಾಗಿ ಮಾತಾಡ್‌ಬೇಕು.

ಕೆಲಸದಾಕೆ: (ಗಾಬರಿಯಾಗಿ) ಇಲ್ಲ ಸಾಮಿ... ಅಲ್ಲಾ ಒಳಗವ್ರೆ ಸಾಮಿ.

ನಾರಾಯಣ್: ಉಂ ಸರಿ ಬಿಡು-ಎಂದು ಸುಮ್ಮನಾದರಂತೆ.

ಗವರ್ನರ್ ಭೇಟಿಗೆ ಕೆಲಸದವಳ ಪರ್ಮಿಷನ್ ಕೇಳುತ್ತಿದ್ದ ನಾರಾಯಣ್‌ರ ಪೆದ್ದುತನ ನೋಡಿ ಅಲ್ಲಿದ್ದ ಎಲ್ಲರಿಗೂ ನಗುವೋ ನಗು.... ಕೊನೆಗೆ ಸಿನಿಮಾದವರ ನಿಯೋಗ ರಾಜ್ಯಪಾಲರಿಗೆ ಮನವಿ ನೀಡಲು ಒಳಗೆ ಹೋಯಿತು. ನಾರಾಯಣ್ ಆಚೆನೇ ಉಳಿಯಬೇಕಾಯಿತು. ಹಿರಿಯ ನಟಿ ಜಯಂತಿ ಸಹ ರಾಜ್ಯಪಾಲರ ಜೊತೆ ಕೆಲಕಾಲ ಮಾತಾಡುತ್ತಿದ್ದರು. ಅವರಿಬ್ಬರೂ ಕಾವೇರಿ ಸಮಸ್ಯೆ ಬಗ್ಗೆ ಗಾಢವಾಗಿ ಚರ್ಚಿಸುತ್ತಿರಬಹುದು ಎಂದು ಯಾರೋ ಕಿವಿಕೊಟ್ಟಾಗ ಅವರಿಬ್ಬರೂ 'ಮಂಡಿ ನೋವಿನ' ಪರಿಣಾಮಗಳ ಬಗ್ಗೆ ವಿಚಾರ ವಿನಿಮಯ ನಡೆಸುತ್ತಿದ್ದುದು ಕೇಳಿಸಿತಂತೆ!

ಅಂದಹಾಗೆ

ರಾಜ್ಯಪಾಲರ ಭೇಟಿಗೆ ಹೋದವರೆಲ್ಲಾ ಹೀರೋಗಳೆ. ಅವತ್ತಿನ ಪ್ರತಿಭಟನೆಯಲ್ಲಿ ನಟಿಯರು, ಡೈರೆಕ್ಟರ್‌ಗಳು, ತಂತ್ರಜ್ಞರು, ಸಹ ಕಲಾವಿದರು, ಟಿವಿ ಕಲಾವಿದರು, ಕಾರ್ಮಿಕರು, ವಿತರಕರು, ಥಿಯೇಟರ್ ಮಾಲೀಕರೆಲ್ಲಾ ಇದ್ದರೂ ಸಹ ಕೇವಲ ಬೆರಳೆಣಿಕೆಯಷ್ಟು ಹೀರೋಗಳು ಮಾತ್ರ ಪ್ರಚಾರ ಪಡೆದುಕೊಂಡದ್ದು ತಪ್ಪಲ್ಲವೆ?

ಏನು ಕನ್ನಡ ಚಿತ್ರೋದ್ಯಮ ಅಂದರೆ ಹೀರೋಗಳು ಮಾತ್ರನಾ?

ಕಾರ್ನಾಡ್ ವಿರುದ್ಧ ಚೆಡ್ಡಿ ಕುತಂತ್ರ

ಸಾಹಿತಿ ಗಿರೀಶ್ ಕಾರ್ನಾಡ್ ಕಾವೇರಿ ತೀರ್ಪಿನ ಬಗ್ಗೆ ಪೂರ್ಣವಾಗಿ ಅರಿತುಕೊಳ್ಳದೆ ಒಂದು ದುಡುಕಿನ ಹೇಳಿಕೆ ನೀಡಿಬಿಟ್ಟರು.. ಕಾರ್ನಾಡ್ ಹಾಗೆಂದಾಕ್ಷಣ ಇಡೀ ತೀರ್ಪೇನು ಜಾರಿಯಾಗಿ ಹೋಗಲಿಲ್ಲ ಅಥವಾ ಗಜೆಟ್‌ನಲ್ಲಿ ಪ್ರಿಂಟಾಗಲಿಲ್ಲ. ಆದರೂ ಕೆಲ ಕನ್ನಡ ಸಂಘಗಳು ಕಾರ್ನಾಡ್ ವಿರುದ್ಧ ಸಾಂಕೇತಿಕವಾಗಿ ಪ್ರತಿಭಟಿಸಿ ನಂತರ ಕೇಂದ್ರ ಸರ್ಕಾರದ ವಿರುದ್ಧ ಎಂದಿನಂತೆ ತಮ್ಮ ಹೋರಾಟ ಮುಂದುವರೆಸುತ್ತಿವೆ.



ಅದು ಸರಿ ಕೂಡಾ.

ಆದರೆ ಚಡ್ಡಿಗಳು ಮಾತ್ರ ಮುಗಿದುಹೋದ ಕಾರ್ನಾಡ್ ಹೇಳಿಕೆಯನ್ನು ಈಗಲೂ ಜನರಿಗೆ ನೆನಪಿಸುತ್ತಾ ಬೆಂಗಳೂರು, ಮೈಸೂರು, ಧಾರವಾಡಗಳಲ್ಲಿ ಗಲಾಟೆ ಮಾಡುತ್ತಿದ್ದಾರೆ.

ಅವರ ಈ ಓರಾಟಕ್ಕೆ ಕಾವೇರಿ ಬಗೆಗಿನ ಕಾಳಜಿ ಕಾರಣವಾಗಿಲ್ಲ. ಬದಲಾಗಿ ಗಿರೀಶ್ ಕಾರ್ನಾಡ್ ಹಿಂದೂ ಕೋಮುವಾದಿ ವಿರೋಧಿಯಾಗಿರುವುದೇ ಕಾರಣ. ಕನಿಷ್ಠ ಈ ಕಾವೇರಿ ನೆಪದಲ್ಲಾದರೂ ಕಾರ್ನಾಡ್ ಬಗ್ಗೆ ಜನ ಸಿಟ್ಟಿಗೇಳುವಂತೆ ಮಾಡುವ ಚೆಡ್ಡಿಗಳ ಹುನ್ನಾರ ಇದು.

ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪು:

ಅನ್ಯಾಯದ ಸರಮಾಲೆ




ಕಾವೇರಿ ವಿವಾದ ಕುರಿತಂತೆ ಟ್ರಿಬ್ಯೂನಲ್ ನೀಡಿರುವ ಅಂತಿಮ ತೀರ್ಪಿನಲ್ಲಿ ಏನೇನು ದೋಷಗಳಿವೆ ಎಂಬುದನ್ನು ನಮ್ಮ ಎಚ್.ಎಲ್.ಕೇಶವಮೂರ್ತಿಯವರು ವಿವರವಾಗಿ ಇಲ್ಲಿ ವಿವರಿಸಿದ್ದಾರೆ. ಇದನ್ನೇ ಅವರು ಮೊನ್ನೆ ರಾಜ್ಯದ ಸಂಸದರ ಸಭೆಯಲ್ಲೂ ವಿವರಿಸಿದ್ದರು. ಆ ಪುಣ್ಯಾತ್ಮರಿಗೆ ಅದೇನು ಅರ್ಥವಾಯಿತೋ ಇಲ್ಲವೋ. ಆದರೆ ಕರ್ನಾಟಕಕ್ಕೆ ಆದ ಅನ್ಯಾಯದ ಬಗ್ಗೆ ಜನರಿಗಾದರೂ ಅರಿವಾಗಲಿ ಎಂದು ಇಲ್ಲಿ ನೀಡುತ್ತಿದ್ದೇವೆ.

1. 1924ರಲ್ಲಿ ಅಂದಿನ ಮೈಸೂರು ಹಾಗೂ ಮದರಾಸು ಪ್ರಾಂತ್ಯದ ಕಾವೇರಿ ನೀರಿನ ಹಂಚಿಕೆಯ ಒಡಂಬಡಿಕೆ ಆಗಿತ್ತು. ಆಗ ...ಸು ಬಲಿಷ್ಠ ರಾಜ್ಯ ಆಗಿತ್ತು, ...ೆ ದುರ್ಬಲ ರಾಜ್ಯ ಆಗಿತ್ತು. ... ಎರಡು ಅಸಮಾನ ರಾಜ್ಯಗಳ ... ಒಡಂಬಡಿಕೆ ಇದಾಗಿತ್ತು. ...ರು ರಾಜ್ಯದ ಆಶಯಗಳಿಗೆ ...ದೇ ಮನ್ನಣೆ ನೀಡದೆ ಮದರಾಸು ...ದ ಬೇಡಿಕೆಗಳೆಲ್ಲವನ್ನು ಪುರಸ್ಕರಿಸ...ಯಿತು. ಕನ್ನಂಬಾಡಿ ಕಟ್ಟೆಯನ್ನು ...ವ ಅವಶ್ಯಕತೆ ಬಹಳವಾಗಿತ್ತಾದ್ದರಿಂದ ಮೈಸೂರು ರಾಜ್ಯ ಈ ಒಡಂಬಡಿಕೆಗೆ ಸಹಿ ಹಾಕಿತು. ಈ ಬಲವಂತದ ಸಹಿಯನ್ನೇ ಎರಡು ರಾಜ್ಯಗಳು ಇದಕ್ಕೆ ಸಮ್ಮತಿಸಿದವು ಎಂದು ಕಾವೇರಿ ನ್ಯಾಯಮಂಡಳಿ ಪುರಸ್ಕರಿಸಿದೆ. ಮಾತ್ರವಲ್ಲ, ಈ ಆಧಾರದ ಮೇಲೆ ನದಿ ನೀರಿನ ಹಂಚಿಕೆ ಮಾಡಿದೆ. ಇದರಿಂದಾಗಿ ಅಂದು ಮೈಸೂರು ರಾಜ್ಯದ ಮೇಲೆ ನಡೆದಿದ್ದ ಮದರಾಸು ರಾಜ್ಯದ ದಬ್ಬಾಳಿಕೆ ಇಂದು ನ್ಯಾಯಮಂಡಳಿಯ ಮೂಲಕ ಕಾರ್ಯರೂಪಕ್ಕೆ ಬಂದಿದೆ!

2. ಯಾವುದೇ ಅಂತರರಾಜ್ಯ ನದಿ ನೀರಿನ ಹಂಚಿಕೆಯಲ್ಲಿ ಅಂತರ್ಜಲ ಪ್ರಮುಖ ಪಾತ್ರ ವಹಿಸುತ್ತದೆ. ಒಂದು ಟಿ.ಎಂ.ಸಿ. ಅಂತರ್ಜಲ 1.6 ಟಿ.ಎಂ.ಸಿ. ಮೇಲ್ನೀರಿಗೆ ಸಮ. ತಮಿಳುನಾಡಿನ ಕಾವೇರಿ ನದಿ ಮುಖಜ ಭೂಮಿಯಲ್ಲಿ ಅಂತರ್ಜಲ ಯಥೇಚ್ಛವಾಗಿದೆ. ಅಲ್ಲಿ ಅಂತರ್ಜಲವನ್ನು ವ್ಯವಸಾಯಕ್ಕೆ ಬಳಸುತ್ತಿರುವುದೂ ಸತ್ಯಸಂಗತಿ. 20 ಟಿ.ಎಂ.ಸಿ. ಅಂತರ್ಜಲ ಬಳಸುತ್ತಿದ್ದಾರೆಂದು ನ್ಯಾಯಮಂಡಳಿಯೇ ಒಪ್ಪಿದೆ. ಅಂದರೆ ಕರ್ನಾಟಕಕ್ಕೆ 32 ಟಿ.ಎಂ.ಸಿ. ನೀರು ಲಭ್ಯ ಆಗಬೇಕಿತ್ತು. ಇದನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ.

ಅಂತರ್ಜಲ ಬಳಕೆಯನ್ನು ಕುರಿತಂತೆ ತಮಿಳುನಾಡಿನ ವಾದ ಏನು ಅಂದರೆ ಅಂತರ್ಜಲವನ್ನು ಮೆಟ್ಟೂರಿನಿಂದ ನೀರು ಬಿಡುವ ಮುನ್ನ ಸಸಿ ಬೆಳೆಯಲು ಬಳಸಲಾಗುತ್ತದೆ. ಮೆಟ್ಟೂರಿನಿಂದ ನೀರು ಬಿಟ್ಟಾಗ ಅದು ಮತ್ತೆ ರೀಚಾರ್ಜ್ ಆಗುತ್ತದೆ.ಇದನ್ನು ಪರಿಗಣಿಸಿದರೆ ಒಂದೇ ನೀರನ್ನು ಎರಡು ಬಾರಿ-ಮೆಟ್ಟೂರು ಜಲಾಶಯದಿಂದ ನೀರು ಬಿಟ್ಟಾಗ ಒಮ್ಮೆ, ಅಂತರ್ಜಲವನ್ನು ಒಮ್ಮೆ-ಅಳತೆ ಮಾಡಿದಂತಾಗುತ್ತದೆ.

ತಮಿಳುನಾಡಿನ ಈ ಅವೈಜ್ಞಾನಿಕ ವಾದವನ್ನು ನ್ಯಾಯಮಂಡಳಿ ಪುರಸ್ಕರಿಸಿದೆ.



ಅಂತರ್ಜಲ ಉತ್ಪಾದನೆಯ ಮಾರ್ಗ ಪ್ರಮುಖವಾಗಿ ಎರಡು:

ಅ) ಭೂಮಿಯ ಮೇಲೆ ಹರಿಯುವ, ನಿಲ್ಲುವ ನೀರು.

ಆ) ಭೂಮಿಯ ಮೇಲೆ ಬೀಳುವ ಮಳೆ ನೀರು.

ಹಾಗಾದರೆ ಭೂಮಿಯ ಮೇಲೆ ಮಳೆ ನೀರಿನಿಂದ ರೀಚಾರ್ಜ್ ಆಗುವುದಿಲ್ಲವೆ ಎಂದರೆ ಈಗಾಗಲೇ ಅಂತರ್ಜಲ ಸಾಕಷ್ಟು ಶೇಖರಣೆ ಆಗಿರುವುದರಿಂದ ನೈರುತ್ಯ ಮಾರುತದಿಂದ ಬೀಳುವ ಮಳೆ ನೀರೆಲ್ಲ ಸಮುದ್ರಕ್ಕೆ ಹರಿದುಹೋಗುತ್ತದೆ ಎಂಬ ವಿತಂಡ ವಾದಕ್ಕೆ ನ್ಯಾಯಮಂಡಳಿ ತಲೆಬಾಗಿಸಿದೆ. ಆದುದರಿಂದ ಅದು ನೈರುತ್ಯ ಮಾರುತದ ಮಳೆ ನೀರನ್ನು ಕಾವೇರಿ ಅಚ್ಚುಕಟ್ಟು ಪ್ರದೇಶದ ಕಾವೇರಿ ನೀರೆಂದು ಪರಿಗಣಿಸಲಾಗದು ಎಂದು ಸಾರಿದೆ.

3. 1921ರಲ್ಲಿ ಮೆಟ್ಟೂರು ಯೋಜನೆಯ ವರದಿಯನ್ನು ಅಂದಿನ ಮದರಾಸು ಪ್ರಾಂತ್ಯ ಹೊರತಂದಿತ್ತು, ಅದರಂತೆ ನೀರಾವರಿಗಾಗಿ ಮದರಾಸು ಪ್ರಾಂತ್ಯಕ್ಕೆ 242 ಟಿ.ಎಂ.ಸಿ. ನೀರು ಸಾಕು ಎಂದಿತ್ತು. ಅದನ್ನು ಪದೇ ಪದೇ ಕರ್ನಾಟಕ ಸರ್ಕಾರ ನ್ಯಾಯಮಂಡಳಿಯ ಮುಂದೆ ಪ್ರಸ್ತಾಪಿಸಿತು. ತಮಿಳುನಾಡು ಆ ವರದಿ ಅವೈಜ್ಞಾನಿಕ ಎಂದು ಹೇಳಿತು. ಇಬ್ಬರ ವಾದವನ್ನು ಕೇಳಿದ ನ್ಯಾಯಮಂಡಳಿ ಎರಡೂ ರಾಜ್ಯಗಳ ನೀರಿನ ಬೇಡಿಕೆ ಹೇಗಾದರೂ ಇರಲಿ, ನೀರಿನ ಹಂಚಿಕೆಯನ್ನು ಬೆಳೆಗಳು ಒಣಗದಂತೆಯೂ ಹಾಗೂ ಇರುವ ನೀರನ್ನು ಸಮಾನಾಂತರವಾಗಿ ಬಳಕೆಯಾಗುವಂತೆ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸೋಣ ಎಂದು ಹೇಳಿ ತಿಪ್ಪೆ ಸಾರಿಸಿತು!

4. ಕರ್ನಾಟಕದ ಪಾಲಿಗೆ ನ್ಯಾಯಮಂಡಳಿಯ ಮತ್ತೊಂದು ಮರ್ಮಾಘಾತ ತೀರ್ಪು ಇದು:

1924ಕ್ಕೆ ಮುಂಚೆ ಮದರಾಸು ಪ್ರಾಂತ್ಯದ ಕಾವೇರಿ ಕಣಿವೆ ಪ್ರದೇಶದಲ್ಲಿ 95 ಸಾವಿರ ಎಕರೆ ನೀರಾವರಿ ಪ್ರದೇಶ ಇತ್ತು, 1924 ರ ನಂತರ 90 ಸಾವಿರ ಎಕರೆ ನೀರಾವರಿ ಪ್ರದೇಶ ಆಯಿತು. ಒಟ್ಟು ಒಂದು ಲಕ್ಷದ ಎಂಬತ್ತೈದು ಸಾವಿರ ಎಕರೆ ಪ್ರದೇಶ ನೀರಾವರಿ ಆಯಿತು. ಆ ಪ್ರದೇಶದಲ್ಲಿ ತಮಿಳುನಾಡು ಸರ್ಕಾರ ಭತ್ತದ ಎರಡು ಬೆಳೆಗಳನ್ನು ಬೆಳೆಯಬಹುದು. ಆದರೆ ಅಂದಿನ ಮೈಸೂರು ಸರ್ಕಾರಕ್ಕೆ ಒಪ್ಪಿಗೆ ನೀಡಿದ್ದು 40 ಸಾವಿರ ಎಕರೆಯಲ್ಲಿ ಕಬ್ಬು ಬೆಳೆಯಲು ಮಾತ್ರ. ಯಾವುದೇ ಕಾರಣಕ್ಕೂ ಈ ಮಿತಿ ಮೀರಬಾರದು! ಇಷ್ಟೇ ಅಲ್ಲ, ಕರ್ನಾಟಕ ರಾಜ್ಯದ ಕಾವೇರಿ ಕಣಿವೆಯಲ್ಲಿ ಯಾವ ಕಾರಣಕ್ಕೂ ಬೇಸಿಗೆ ಬೆಳೆ ಬೆಳೆಯಬಾರದು! ತರಿ ಆಗಲಿ, ಅರೆ ಖುಷ್ಕಿ ಆಗಲಿ, ಒಂದು ಬೆಳೆ ಮಾತ್ರ!

5. ನ್ಯಾಯಮಂಡಳಿ ಉದಾರವಾಗಿ 18.85 ಲಕ್ಷ ಎಕರೆವರೆವಿಗೂ ನೀರಾವರಿ ಭೂಮಿ ವಿಸ್ತರಿಸಲು ಕರ್ನಾಟಕಕ್ಕೆ ಅವಕಾಶ ನೀಡಿದೆ. ಆದರೆ ಅದಕ್ಕೆ ಬೇಕಾಗುವ ನೀರು? 270 ಟಿ.ಎಂ.ಸಿ. ಸಾಲುವುದೆ? ಅಂದರೆ ಒಂದು ಟಿ.ಎಂ.ಸಿ. ನೀರಿನಲ್ಲಿ 7,000 ಎಕರೆ ಬೆಳೆ ಬೆಳೆಯಬೇಕು. ಅದೇ ತಮಿಳುನಾಡಿಗೆ 24.71 ಲಕ್ಷ ಎಕರೆಗೆ 419 ಟಿ.ಎಂ.ಸಿ. ನೀರು ನೀಡಿದೆ! ಅಂದರೆ ಒಂದು ಟಿ.ಎಂ.ಸಿ. ಯಲ್ಲಿ 6000 ಎಕರೆ ಬೆಳೆ ಬೆಳೆಯಬಹುದು. ಇದು ಯಾವ ನ್ಯಾಯ ಅಂದರೆ ಕನ್ನಂಬಾಡಿ ಅಣೆಕಟ್ಟಿನ ನೀರಾವರಿ ಪ್ರದೇಶದಲ್ಲಿ ಮಾತ್ರ ಕಬ್ಬು ಭತ್ತ ಬೆಳೆಯಲು ಅನುಮತಿ ಇದೆ. ಬೇರೆ ಅಣೆಕಟ್ಟುಗಳಲ್ಲಿ ಅರೆ ಖುಷ್ಕಿ ಮಾತ್ರ ಬೆಳೆಯಬಹುದು ಎನ್ನುತ್ತದೆ ನ್ಯಾಯಮಂಡಳಿ.

6. ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಉದ್ದೇಶಿತ ಏತ ನೀರಾವರಿ ಯೋಜನೆಗಳು ಯಾವುವೂ ಇರುವಂತಿಲ್ಲ! ಈಗಾಗಲೇ ವ್ಯಯ ಮಾಡಿರುವ ಕೋಟ್ಯಂತರ ರೂ. ಏನು ಮಾಡುವುದು ಎನ್ನುವುದಕ್ಕೆ ನ್ಯಾಯಾಧಿಕರಣದ ಉತ್ತರ ಇಲ್ಲ.

7. ಕುಡಿಯುವ ನೀರಿಗಾಗಿ ಏನು ಮಾಡುವುದು: ನ್ಯಾಯಮಂಡಳಿ ಹೇಳುತ್ತದೆ: ಬೆಂಗಳೂರು ಅಗಾಧವಾಗಿ ಬೆಳೆಯುತ್ತಿದೆ. ಕಾವೇರಿ ಕಣಿವೆಗೆ ಅದರ ದಕ್ಷಿಣ ಭಾಗ ಮಾತ್ರ ಬರುತ್ತದೆ. ಆದುದರಿಂದ 1/3 ಭಾಗದ ಬೆಂಗಳೂರಿನ ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡಿದೆ. ಅದರಲ್ಲಿ ವಾಸಿಸುವ ಶೇಕಡ 25 ಭಾಗ ಜನಕ್ಕೆ ಒಬ್ಬರಿಗೆ 135 ಲೀಟರ್ ನೀರನ್ನೂ, ಶೇಕಡ 75 ಭಾಗ ಜನಕ್ಕೆ ಪ್ರತಿ ಒಬ್ಬರಿಗೆ 100 ಲೀಟರ್ ನೀರನ್ನು ನೀಡಲಾಗಿದೆ. ಅದರಂತೆ 8.70 ಟಿಎಂಸಿ ನೀರು ಒದಗಿಸಲಾಗಿದೆ. ರಾಜ್ಯದ ಇತರೆ ಕಾವೇರಿ ಕಣಿವೆಯ ಜನರ ಕುಡಿಯುವ ನೀರಿಗೆ 8.52 ಟಿಎಂಸಿ ನೀರು ಒದಗಿಸಲಾಗಿದೆ. ಆದರೆ ಒಟ್ಟು 8.70+8.52=17.22 ಟಿಎಂಸಿ ನೀರು ಆಯಿತು.

ಇಷ್ಟು ನೀರು ದೊರೆಯುತ್ತದ ಅಂದರೆ ಇಲ್ಲವಂತೆ. ಇದರಲ್ಲಿ ಶೇಕಡ 50 ಭಾಗ ನೀರು ಅಂತರ್ಜಲದಿಂದ ಬರುತ್ತದಂತೆ. ಉಳಿದದ್ದು ಕಾವೇರಿ ನೀರಂತೆ. ಅಂದರೆ 8.61 ಟಿಎಂಸಿ ಮಾತ್ರ ಕಾವೇರಿ ನೀರು. ಇದರಲ್ಲಿ ಶೇಕಡ 20 ಭಾಗ ಮಾತ್ರ ಬಳಕೆಯಾಗುತ್ತದಂತೆ. ಉಳಿದ ಭಾಗ ಮತ್ತೆ ನದಿ ಪಾತ್ರಕ್ಕೆ ಸೇರುತ್ತದಂತೆ. 8.61ರ ಶೇಕಡ 20 ಭಾಗ ಮಾತ್ರ, ಅಂದರೆ 1.75 ಟಿಎಂಸಿ ನೀರು ಕರ್ನಾಟಕ ರಾಜ್ಯದ ಕಾವೇರಿ ನೀರು ಅದರ ಕಣಿವೆಯ ಜನರಿಗೆ ಸಾಲುತ್ತದಂತೆ!

ಇಷ್ಟೊಂದು ಅವೈಜ್ಞಾನಿಕವಾದ ತೀರ್ಪು ಇನ್ನೊಂದು ಇರಲಾರದು!

8. ಕೇರಳಕ್ಕೆ ನ್ಯಾಯಮಂಡಳಿ 30 ಟಿಎಂಸಿ ನೀರು ನೀಡಿದೆ. ಆದರೆ ಅಲ್ಲಿ ಇನ್ನೂ ಪೂರ್ಣ ನೀರು ಬಳಕೆ ಅಸಾಧ್ಯವಾಗಿರುವುದರಿಂದ ಹೀಗೆ ಬಾಕಿ ಉಳಿದಿರುವ 20 ಟಿಎಂಸಿ ನೀರನ್ನು ಬಳಕೆ ಮಾಡಿಕೊಳ್ಳಲು ತಮಿಳುನಾಡಿಗೆ ಅನುಮತಿ ನೀಡಿದೆ ನ್ಯಾಯಮಂಡಳಿ. ಇದು ಯಾಕೆ ಅಂದರೆ 1974ರ ಹೊತ್ತಿಗಾಗಲೆ ತಮಿಳುನಾಡು ಲಕ್ಷಾಂತರ ಎಕರೆ ನೀರಾವರಿ ಪ್ರದೇಶ ಆಗಿರುವುದನ್ನು ನ್ಯಾಯಮಂಡಳಿ ಗಮನಕ್ಕೆ ತಂದಿತ್ತಂತೆ. ಆದರೆ ಅದು ಅದನ್ನು ಪರಿಗಣಿಸಿರಲಿಲ್ಲವಂತೆ! ಇದನ್ನು ಸರಿದೂಗಿಸಲು ಅದು ಈ ರೀತಿ ತೀರ್ಮಾನ ನೀಡಿದೆಯಂತೆ! ಕರ್ನಾಟಕದಲ್ಲೂ ಇದೇ ರೀತಿಯ ಪರಿಸ್ಥಿತಿ ಇದ್ದರೂ ಅದು ಗಣನೆಗೇ ಬಂದಿಲ್ಲ!

9. ಕೆಲವು ಅಂಕಿ ಅಂಶಗಳನ್ನು ನ್ಯಾಯಮಂಡಳಿ ಪರಿಗಣನೆಗೇ ತೆಗೆದುಕೊಂಡಿಲ್ಲ ಎಂಬುದು ಪ್ರತಿ ತಿಂಗಳೂ ಇಂತಿಷ್ಟು ನೀರನ್ನು ಬಿಡಬೇಕು ಎಂದು ಅದು ತಿಳಿಸಿರುವುದರಿಂದ ಕಂಡುಬರುತ್ತದೆ.

ಜೂನ್ ತಿಂಗಳಿಂದ ಸೆಪ್ಟಂಬರ್‌ವರೆವಿಗೆ ತಮಿಳುನಾಡಿಗೆ 134 ಟಿಎಂಸಿ ನೀರು ಬಿಡಬೇಕು ಎನ್ನುತ್ತದೆ. ನ್ಯಾಯಮಂಡಳಿ ಬಿಳಿಗುಂಡ್ಲುವಿನಿಂದ ಕಳೆದ ಹದಿನೈದು ವರ್ಷಗಳಲ್ಲಿ ಜೂನ್ ತಿಂಗಳು ಹರಿದಿರುವ ನೀರು ಎಷ್ಟು? ನಾಲ್ಕು ವರ್ಷಗಳನ್ನು ಬಿಟ್ಟು ಉಳಿದಂತೆ ಯಾವ ವರ್ಷವೂ ಹತ್ತು ಟಿಎಂಸಿಗಿಂತ ಹೆಚ್ಚು ನೀರು ಹರಿದಿಲ್ಲ, ಆದರೂ ಕರ್ನಾಟಕ ಜೂನ್ ತಿಂಗಳಲ್ಲಿ ಹತ್ತು ಟಿಎಂಸಿ ನೀರು ಬಿಡಲು ಆದೇಶಿಸಿದೆ. ಇಲ್ಲದ ನೀರನ್ನು ಎಲ್ಲಿಂದ ತರುವುದು? ಇದಕ್ಕೇನು ನ್ಯಾಯಮಂಡಳಿ ಉತ್ತರ? ಸಂಕಷ್ಟದ ದಿನಗಳಲ್ಲಿ ರಾಜ್ಯಗಳ ಮುಖ್ಯಮಂತ್ರಿಗಳು ಮಾತನಾಡಿ ಬಗೆಹರಿಸಿಕೊಳ್ಳಬೇಕಂತೆ! ಅಂದರೆ ಇದು ನಿರಂತರ ಸಮಸ್ಯೆಯಾಗಿಯೇ ಮುಂದುವರೆಯಲಿದೆ!

10. ತಮಿಳುನಾಡು ಎಂದೂ 489 ಟಿಎಂಸಿ ನೀರಿಗಿಂತ ಹೆಚ್ಚು ಬಳಕೆ ಮಾಡಿಕೊಂಡಿಲ್ಲ.

ಸಿ.ಸಿ. ಪಟೇಲರ ವರದಿಯಂತೆ	
ವ್ಯರ್ಥವಾಗುವ ನೀರು	100 ಟಿಎಂಸಿ
ಅಂತರ್ಜಲ	109 ಟಿಎಂಸಿ
ಆಂತರಿಕ ಉತ್ಪಾದನೆ	210 ಟಿಎಂಸಿ
	419 ಟಿಎಂಸಿ


ಅಂದರೆ ನಾವು ಬಿಡಬೇಕಾದ ನೀರು 489-419=70 ಟಿಎಂಸಿ ಮಾತ್ರ. ಇದನ್ನು ಸಮರ್ಥವಾಗಿ ಕರ್ನಾಟಕ ಪ್ರತಿಪಾದಿಸಿದರೂ ನ್ಯಾಯಮಂಡಳಿಯ ಕಿವಿಗೇ ಇದು ಬಿದ್ದಿಲ್ಲ!

11. ನ್ಯಾಯಮಂಡಲಿಯ ಮಧ್ಯಂತರ ಆಜ್ಞೆ ತಮಿಳುನಾಡಿಗೆ 205 ಟಿಎಂಸಿ ನೀರು ಬಿಡಬೇಕೆಂದು ಆದೇಶಿಸಿತ್ತು. ಇದರ ಅಳತೆಯನ್ನು ಮೆಟ್ಟೂರಿನಲ್ಲಿ ಮಾಡಲಾಗುತ್ತಿತ್ತು. ಅಂತಿಮ ತೀರ್ಮಾನದಲ್ಲಿ ಬಿಳಿಗುಂಡ್ಲುವಿನಿಂದ 192 ಟಿಎಂಸಿ ನೀರು ಬಿಡಲು ಆದೇಶಿಸಿದೆ. ಇದರಿಂದ ಕರ್ನಾಟಕಕ್ಕೆ ಒಳಿತಾಗಿಲ್ಲ, ಆದರೆ 5 ಟಿಎಂಸಿ ನೀರು ಹೆಚ್ಚೇ ಬಿಡಬೇಕು ಇದನ್ನು ತಮಿಳುನಾಡಿನ ಮುಖ್ಯಮಂತ್ರಿಯವರೇ ಹೇಳಿದ್ದಾರೆ!

ಇದು ಹೇಗೆ?

ಮೆಟ್ಟೂರು-ಬಿಳಿಗುಂಡ್ಲು ನಡುವೆ ಉತ್ಪಾದನೆಯಾಗುವ ನೀರು	=25 ಟಿಎಂಸಿ
ಈ ನಡುವೆ ಉಪಯೋಗಿಸುವ ನೀರು	–7 ಟಿಎಂಸಿ
	18 ಟಿಎಂಸಿ

[illegible] 205–18=187 [illegible] 192 [illegible]



ಕಾವೇರಿ ನದಿ ನೀರಿನ ಹಂಚಿಕೆ ವಿವಾದ ಈಗ ಮತ್ತೊಮ್ಮೆ ಭುಗಿಲೆದ್ದಿರುವಾಗಲೇ ನಮ್ಮ ನೆರೆಯ ತಮಿಳುನಾಡು ರಾಜ್ಯ ಇನ್ನೊಂದು ನೆರೆರಾಜ್ಯವಾದ ಕೇರಳದೊಂದಿಗೂ ಜಗಳಕ್ಕೆ ಬಿದ್ದಿದೆ.

ಅದು ಮುಲ್ಲ ಪೆರಿಯಾರ್ ಡ್ಯಾಂ ವಿವಾದ. ಬಹುಶಃ ಭಾರತ ಗಣರಾಜ್ಯದಲ್ಲೆಲ್ಲೂ ಕಂಡುಬಾರದಿರುವ ಒಂದು ವಿಚಿತ್ರವಾದ ಹಾಗೂ ಅಷ್ಟೇ ಸಂಕೀರ್ಣವಾದ ನದಿ ನೀರಿನ ವಿವಾದ ಇದು.

ಪೆರಿಯಾರ್ ನದಿಗೆ 1895 ರಲ್ಲಿ ನಿರ್ಮಿಸಲಾದ ಮುಲ್ಲ ಪೆರಿಯಾರ್ ಅಣೆಕಟ್ಟು ಇರುವುದು ಕೇರಳ ರಾಜ್ಯದ ಇಡುಕ್ಕಿ ಜಿಲ್ಲೆಯಲ್ಲಿ. ಆದರೆ ಇದರ ಮಾಲೀಕತ್ವ ತಮಿಳುನಾಡಿನದ್ದು ಹಾಗೂ ಇದನ್ನು ನಿರ್ಮಿಸಿ, ಪೂರ್ಣ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಿರುವುದು ತಮಿಳುನಾಡು ರಾಜ್ಯ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಇದು ಸತ್ಯ.

ಕೇರಳ ತನ್ನ ಗಡಿಯೊಳಗೇ ಇರುವ, ತನ್ನ ಜಲಪ್ರದೇಶದಲ್ಲೇ ಉತ್ಪತ್ತಿಯಾಗುವ (Water Catchment Area) ನದಿ ನೀರನ್ನು ಬಳಸುವಂತಿಲ್ಲ ಎಂದರೆ 'ಇದ್ಯಾವ ಸೀಮೆ ನ್ಯಾಯ' ಎಂದು ನಿಮಗೆ ಅನ್ನಿಸಬಹುದು. ಆದರೆ ಇದು ಸತ್ಯ. ಬ್ರಿಟಿಷರ ಕಾಲದಲ್ಲಿ ಆದ ಒಪ್ಪಂದದ ಆಧಾರದಲ್ಲೇ ಸ್ವತಂತ್ರ ಭಾರತದಲ್ಲೂ ಈ ತಾರತಮ್ಯ ಮುಂದುವರೆಯುತ್ತಿದೆ.

ಈಗಿನ ಹೊಸ ವಿವಾದ ಏನೆಂದರೆ....

ಈ ಡ್ಯಾಂನ ಎತ್ತರ 46.30 ಮೀಟರ್ ಆಗಿದ್ದರೂ ಸುರಕ್ಷತೆಯ ದೃಷ್ಟಿಯಿಂದ ಕೇವಲ 41.45 ಮೀಟರ್‌ವರೆಗೆ ಮಾತ್ರ ನೀರು ನಿಲ್ಲಿಸಲಾಗುತ್ತಿದೆ. ಆದರೆ ಫಲಾನುಭವಿ ರಾಜ್ಯವಾದ ತಮಿಳುನಾಡು ಮಾತ್ರ ಡ್ಯಾಂನಲ್ಲಿ ನೀರನ್ನು ಈಗಿರುವ 41.45 ಮೀಟರ್‌ನಿಂದ 46.30 ಮೀಟರ್‌ಗೆ ಹೆಚ್ಚಿಸಬೇಕೆಂದು ಹಠ ಮಾಡುತ್ತಿದೆ. ಇದರಿಂದ ಹೆಚ್ಚು ಭೂಮಿಯನ್ನು ನೀರಾವರಿಗೆ ಒಳಪಡಿಸುವ ಉದ್ದೇಶ ತಮಿಳುನಾಡಿನದ್ದು. ಆದರೆ ಕೇರಳ ಡ್ಯಾಂ ಎತ್ತರಿಸಲು ವಿರೋಧ ವ್ಯಕ್ತಪಡಿಸಿದೆ. ಡ್ಯಾಂ ಎತ್ತರಿಸುವುದರಿಂದ ಕೇರಳ ರಾಜ್ಯದ ಇನ್ನಷ್ಟು ಭೂಮಿ ಮುಳುಗಡೆಯಾಗಿ ಸುಮಾರು 35 ಲಕ್ಷ ಜನರ ಜೀವನಕ್ಕೆ ತೊಂದರೆಯಾಗುತ್ತದೆಂಬುದೇ ಕೇರಳದ ಆತಂಕ.

ವಿಪರ್ಯಾಸವೆಂದರೆ ಸುಪ್ರೀಂಕೋರ್ಟ್ ಹಾಗೂ ಕೇಂದ್ರ ಜಲ ಆಯೋಗವೂ ಕೇರಳದ ವಾದ ನಿರ್ಲಕ್ಷಿಸಿ ತಮಿಳುನಾಡಿಗೇ ನೆರವಾಗುವಂತೆ ಈಗ ತೀರ್ಪು ನೀಡಿದೆ.

ಈ ವಿವಾದವನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳುವ ಪ್ರಯತ್ನವೊಂದು ನಡೆದಿತ್ತು. ಆದರೆ ಎರಡೂ ರಾಜ್ಯಗಳು ಪರಸ್ಪರ ಪಟ್ಟು ಸಡಿಲಿಸದೆ ಹೋದ ಕಾರಣ ಈಗ ಮಾತುಕತೆ ಮುರಿದುಬಿದ್ದಿದೆ.


ವಸಾಹತುಶಾಹಿ ಕಾಲದ ಒಪ್ಪಂದ

ಬ್ರಿಟಿಷ್ ವಸಾಹತುಶಾಹಿಗಳ ಆಳ್ವಿಕೆ ಕಾಲದಲ್ಲಿ ಆಗಿನ ಮದ್ರಾಸ್ ಪ್ರೆಸಿಡೆನ್ಸಿ ಹಾಗೂ ಕೇರಳದ ತಿರುವನಂತಪುರ ರಾಜನ ನಡುವೆ ಪೆರಿಯಾರ್ ನದಿಗೆ ಅಣೆಕಟ್ಟು ನಿರ್ಮಿಸುವ ಬಗ್ಗೆ 1886 ರಲ್ಲಿ ಒಂದು ಒಪ್ಪಂದವಾಗಿತ್ತು. ಆ ಒಪ್ಪಂದದಂತೆ ಮದ್ರಾಸ್ ಪ್ರೆಸಿಡೆನ್ಸಿಯು ಇಡುಕ್ಕಿ ಬಳಿ 3200 ಹೆಕ್ಟೇರ್ ಜಮೀನನ್ನು ಹೆಕ್ಟೇರಿಗೆ 5 ರೂ. ಬಾಡಿಗೆಯಂತೆ ಲೀಸ್‌ಗೆ ಪಡೆದು 41.25 ಮೀಟರ್ ಎತ್ತರದ ಡ್ಯಾಂ ನಿರ್ಮಿಸಿ ಆ ನೀರನ್ನು ತಮಿಳುನಾಡಿನ ತೇನಿ, ಮಧುರೈ, ಶಿವಗಂಗಾ, ರಾಮನಾಥಪುರಂ, ದಿಂಡಿಗಲ್ ಪ್ರದೇಶಗಳ 60 ಸಾವಿರ ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಿತ್ತು. ಮುಲ್ಲಪೆರಿಯಾರ್ ಡ್ಯಾಂನಿಂದ 1.6 ಕಿ.ಮೀ. ಉದ್ದದ ಸುರಂಗದ ಮೂಲಕ ತಮಿಳುನಾಡಿನ ಗಡಿ ಭಾಗದವರೆಗೆ ನೀರನ್ನು ಹರಿಸಿ ನಂತರ ಕಾಲುವೆ ಮೂಲಕ ಚುರುಲಿಯಾರ್ ನದಿಗೆ ಆ ನೀರು ಬಿಟ್ಟು ನಂತರ ವೈಗೈ ಡ್ಯಾಂಗೆ ನೀರು ತಲುಪಿಸಿ ಅಲ್ಲಿಂದಾಚೆಗೆ ಭತ್ತದ ಬೆಳೆಗೆ ನೀರು ಕೊಡಲಾಗುತ್ತಿದೆ.

1970 ರಿಂದಲೇ ಈ ಡ್ಯಾಂನ ಎತ್ತರ ಜಾಸ್ತಿ ಮಾಡುವಂತೆ ತಮಿಳುನಾಡು ಮತ್ತು ಡ್ಯಾಂನ ಆಯಸ್ಸು ಕುಂದುತ್ತಿದೆ, ಎತ್ತರಿಸಲು ಅಸಾಧ್ಯ ಎಂದೂ ಕೇರಳ ಜಗಳವಾಡಿಕೊಂಡಿದ್ದವು. ಕೊನೆಗೆ ಇದು ಸುಪ್ರೀಂ ಕೋರ್ಟಿಗೂ ತಲುಪಿ ನಂತರ ಕೇಂದ್ರ ಜಲ ಆಯೋಗದೆದುರು ವಿಚಾರಣೆಗೆ ಬಂದಿತ್ತು.

ಆಯೋಗವು ಕೇರಳ ರಾಜ್ಯಕ್ಕೆ ಪ್ರತಿಕೂಲವಾಗುವ ತೀರ್ಪು ನೀಡಿದ್ದರಿಂದ ಕೇರಳ ವಿರೋಧಿಸಿತ್ತು. ಆಗ ಕೇಂದ್ರ ಜಲಸಂಪನ್ಮೂಲ ಸಚಿವ ಸೈಫುದ್ದೀನ್ ಸೋಜ್‌ರ ಸಲಹೆ ಮೇರೆಗೆ 2006 ರ ಸೆಪ್ಟೆಂಬರ್‌ನಲ್ಲಿ ತಮಿಳುನಾಡಿನ ನೀರಾವರಿ ಸಚಿವ ದೊರೈ ಮುರುಗನ್ ಹಾಗೂ ಕೇರಳದ ಪ್ರೇಮಚಂದ್ರನ್ ಮಾತುಕತೆ ಆರಂಭಿಸಿದ್ದರು.

1979 ರಲ್ಲಿ ಕೇಂದ್ರ ಜಲ ಆಯೋಗವು ಈ ವಿವಾದದ ಬಗ್ಗೆ ಪರಿಶೀಲಿಸಿ ಡ್ಯಾಂ ಹಳೆಯದಾದ ಕಾರಣ ಸುರಕ್ಷತೆ ದೃಷ್ಟಿಯಿಂದ 41.45 ಮೀಟರ್‌ವರೆಗೆ ಮಾತ್ರ ನೀರು ನಿಲ್ಲಿಸಬೇಕು ಹಾಗೂ ಡ್ಯಾಂ ಅನ್ನು ಬಲಪಡಿಸಬೇಕೆಂದು ಹೇಳಿತ್ತು. ತಮಿಳುನಾಡು ಇದಕ್ಕೆ ಒಪ್ಪದೆ ಹೋದಾಗ 2001 ರಲ್ಲಿ ಕೇಂದ್ರ ಜಲ ಆಯೋಗದ ಆಗಿನ ಅಧ್ಯಕ್ಷ ಬಿ.ಕೆ. ಮಿತ್ತಲ್ ನೇತೃತ್ವದ ಇನ್ನೊಂದು ಸಮಿತಿ ವಿಚಾರಣೆ ನಡೆಸಿ ಡ್ಯಾಂನ ನೀರಿನ ಎತ್ತರವನ್ನು 43.28 ಮೀ.ಗೆ ಏರಿಸಲು ಶಿಫಾರಸ್ಸು ಮಾಡಿತ್ತು. ನಂತರ ಡ್ಯಾಂ ಬಲಪಡಿಸಿ ಅಂತಿಮವಾಗಿ ಮೂಲ ಒಪ್ಪಂದದಂತೆ (ಬ್ರಿಟಿಷರ ಕಾಲದ್ದು) 46.30 ಮೀ. ವರೆಗೆ ಕೇರಳ ನೀರು ನಿಲ್ಲಿಸುವಂತೆಯೂ ಆದೇಶಿಸಿದೆ.



ಮುಲ್ಲಪೆರಿಯಾರ್ ಕಾವೇರಿ ಜಲನೀತಿ ನಕ್ಷೆ

ಇದರಿಂದ ತನ್ನ ರಾಜ್ಯದ ಭೂಮಿ ಮುಳುಗಡೆಯಾಗುತ್ತದೆಂಬ ಕೇರಳದ ದೂರನ್ನು ಯಾರೂ ಕೇರ್ ಮಾಡುತ್ತಿಲ್ಲ. ಈ ಒಪ್ಪಂದದ ಇನ್ನೊಂದು ಅತಿರೇಕ ಏನೆಂದರೆ ಈ ಡ್ಯಾಂನ ಹಿನ್ನೀರಿನಲ್ಲೂ ಕೇರಳದ ಮೀನುಗಾರರು ಮೀನು ಹಿಡಿಯಲು ತಮಿಳುನಾಡು ತೀರಾ ಇತ್ತೀಚಿನವರೆಗೂ ಒಪ್ಪಿಗೆ ಕೊಟ್ಟಿರಲಿಲ್ಲ!

ಬಹಳ ಚೌಕಾಸಿ ಮಾಡಿ ಭೂ ಬಾಡಿಗೆಯನ್ನು ಈಗ ಹೆಕ್ಟೇರಿಗೆ 30 ರೂ. ನೀಡಲು ತಮಿಳುನಾಡು ಒಪ್ಪಿದೆ.

ಕೇರಳ ಪ್ರತಿರೋಧ-ಸಾಂವಿಧಾನಿಕ ಬಿಕ್ಕಟ್ಟು

ಕೇಂದ್ರ ಜಲ ಆಯೋಗದ-ಪಕ್ಷಪಾತದ ತೀರ್ಪು ವಿರೋಧಿಸಿ ಕೇರಳ ಶಾಸನಸಭೆ 2006 ರ ಮಾರ್ಚ್‌ನಲ್ಲಿ ಒಂದು ಸರ್ವಾನುಮತದ ನಿರ್ಣಯ ಮಾಡಿತು. ಅಷ್ಟೇ ಅಲ್ಲ Kerala Irrigation and W[...] Conservaion Amendment Act [...] ಎಂಬ ಕಾಯ್ದೆ ರೂಪಿಸಿ ಕೇರಳ ರಾಜ್ಯಾದ್ಯಂತ[...] 22 ಅಣೆಕಟ್ಟುಗಳ ಸುರಕ್ಷತಾ ಉಸ್ತುವಾರಿಗೆ [...] Safety Authority (DSA) ರಚಿಸಿತು. [...] ನಾಡಿನ ಮಾಲೀಕತ್ವದ ಕೇರಳ ಭೌಗ[...] ಪ್ರದೇಶ ದೊಳಗಿರುವ ಮುಲ್ಲಪೆರಿ[...] ಡ್ಯಾಂ ಅನ್ನು ಸಹ ಈ DSA ನಿಯಂ[...] ಒಪ್ಪಿಸಲಾಯಿತು. ಈಗ ತಮಿಳ[...] ಸರ್ಕಾರ ಕೇರಳ ವಿಧಾನಸಭೆ ತಂ[...] ಈ ಕಾಯ್ದೆಯನ್ನು ಅಸಿಂಧು [...] ಘೋಷಿಸುವಂತೆ ಮತ್ತೆ ಸುಪ್ರೀಂಕೋ[...] ಅರ್ಜಿ ನೀಡಿದೆ. 1999 ರಲ್ಲಿ ಕ[...] ಮಧ್ಯಂತರ ತೀರ್ಪಿನ ವಿರುದ್ಧ ಕರ್ನಾಟ[...] ಇದೇ ರೀತಿ ಒಂದು ಸುಗ್ರೀವಾಜ್ಞೆ ಹೊ[...] ನಂತರ ಕೋರ್ಟು ಅದನ್ನು ಅ[...] ಎಂದು ಪರಿಗಣಿಸಿದ್ದನ್ನು ನಾವಿಲ್ಲಿ [...] ಬಹುದು.

ಈಗ ಸುಪ್ರೀಂಕೋರ್ಟ್ ಕೇ[...] ತಮಿಳುನಾಡಿನ ಡ್ಯಾಂ ವಿವಾದವನ್ನು[...] ಬಗೆಹರಿಸುವುದೋ ಕಾದು ನೋಡ[...] ಆದರೆ 21ನೇ ಶತಮಾನದ ಹೊಸ್ತಿಲಲ್ಲಿ ನಿಂ[...] ಸ್ವತಂತ್ರ ಭಾರತ ಗಣರಾಜ್ಯದ ನಮಗೆ ಪದೆ[...] ಅಂತರರಾಜ್ಯ ನದಿ ನೀರಿನ ವಿವಾದಗಳು ಎದುರಾ[...] ಬ್ರಿಟಿಷರ ಕಾಲದಲ್ಲಿ ಅಧೀನ ರಾಜ್ಯಗಳೂ [...] ಬ್ರಿಟಿಷ್ ನೇರಾಳ್ವಿಕೆಯಿದ್ದ ಪ್ರಾಂತ್ಯಗಳ ಮಧ್ಯೆ ಆ[...] ಅಸಮಾನ ಒಪ್ಪಂದಗಳಿಗೆ ಈಗಲೂ ಮಾನ್ಯತೆ ನೀ[...] ಭಾರತಕ್ಕೆ ಈಗಲಾದರೂ ಒಂದು ರಾಷ್ಟ್ರೀಯ ಜ[...] ಬೇಡವೆ ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳ[...] ಅಲ್ಲವೆ?

ಭಾರತವೂ ಕೇವಲ ಒಂದು ದೇಶವಾಗಿರದೆ [...] ರಾಜ್ಯಗಳ ಒಕ್ಕೂಟ ಅರ್ಥಾತ್ ಗಣರಾಜ್ಯವ[...] ವುದರಿಂದ ಎಲ್ಲರಿಗೂ ನ್ಯಾಯ ಸಿಗಬಹು[...] ರಾಷ್ಟ್ರೀಯ ಜಲನೀತಿಯ ಅಗತ್ಯ ಹಿಂದೆಂದಿಗೀ[...] ಈಗ ಅನಿವಾರ್ಯ.

—

ತಮಿಳು ಚಾನೆಲ್ ಬರಲಿ[...] ತಮಿಳು ಪತ್ರಿಕೆ ಸುಡದಿ[...]

ಕಾವೇರಿ ನೀರು ಹಂಚಿಕೆಯ ಅನ್ಯಾಯ[...] ಕರ್ನಾಟಕದಲ್ಲಿರುವ ತಮಿಳು ಭಾಷಿಕ ಅಲ್ಪಸಂ[...] ರಿಗೂ ಯಾವುದೇ ಸಂಬಂಧವಿಲ್ಲ ಎಂಬ[...] ಎಲ್ಲರಿಗೂ ಗೊತ್ತು. ನ್ಯಾಯಮಂಡಳಿಯ ಅವಿವ[...] ತೀರ್ಪಿಗೆ ಕೇಂದ್ರ ಸರ್ಕಾರ, ಕೇಂದ್ರ ಜಲ ಮ[...] ಹಾಗೂ ತಮಿಳುನಾಡಿನ ದುರಾಶಪೀಡಿತ ಸ[...] ಗಳೇ ನೇರ ಹೊಣೆಯಾಗಿವೆ. ವಸ್ತುಸ್ಥಿತಿ ಹೀಗಿರು[...] ಕರ್ನಾಟಕದ ಜನ ಈಗ ತಮ್ಮ ಹೋರಾಟ[...] ಕೇಂದ್ರೀಕರಿಸಬೇಕಿರುವುದು ಕೇಂದ್ರ ಸರ್ಕಾರದ ವಿ[...] ಕರ್ನಾಟಕದ ಬೇಜವಾಬ್ದಾರಿ ಸಂಸತ್ ಸದಸ್ಯರ ವಿ[...] ಮಾತ್ರ. ಕನ್ನಡ ಚಳವಳಿಗಾರರು, ರೈತರು ಹಾ[...] ಸಾರ್ವಜನಿಕರು ಇದನ್ನು ಚೆನ್ನಾಗಿ ಅರ್ಥಮಾಡಿಕೊ[...] ದ್ದಾರೆ. ಆದರೆ ಈ ಹೋರಾಟದ ದಿಕ್ಕು ತಪ್ಪಿ[...] ಕೆಲ ಕಿಡಿಗೇಡಿಗಳು ತಮಿಳು ಟಿವಿ ಚಾನಲ್ ಬ[...] ತಮಿಳು ಪತ್ರಿಕೆಗಳಿಗೆ ಬೆಂಕಿ ಹಾಕುವಂತಹ ಜ[...] ಗೀಯ ದ್ವೇಷ ಹುಟ್ಟು ಹಾಕುವ ಯತ್ನ ನಡೆಸಿ[...] ಫೆಬ್ರವರಿ 10 ರಂದು ಮೈಸೂರಿನಲ್ಲಿ ತಮಿ[...] ಪತ್ರಿಕೆಗಳಿಗೆ ಬೆಂಕಿ ಹಚ್ಚಿದ್ದು ಮಾಜಿ ಶಾಸಕ[...] ರಾಮದಾಸ್ ನೇತೃತ್ವದ ಗುಂಪು.

ಇವರು ಬಿಜೆಪಿಯವರು ಎಂಬುದನ್ನು ಕನ್ನಡಿ[...] ನೆನಪಿಟ್ಟುಕೊಂಡು ಅಂತವರಿಂದ ದೂರ ನಿಲ್ಲಬೇ[...]

ಹೊಸ ಭರವಸೆಯ ಹೊಸ ಸಂಘಟನೆ

ಪಾಪ್ಯೂಲರ್ ಫ್ರಂಟ್ ಆಫ್ ಇಂಡಿಯಾ (PFI) ಹುಟ್ಟಿಸಿದ ಹೊಸ ತಲ್ಲಣ

ಎರಡನೆ ಮಹಾಯುದ್ಧದ ಸಂದರ್ಭದಲ್ಲಿ ಪ್ರಪಂಚವನ್ನೇ ನುಂಗಲು ಹೊರಟಿದ್ದ ಹಿಟ್ಲರ್‌ನ ಫ್ಯಾಸಿಸಂ ತನಗೆ ಸೃಷ್ಟಿಸಬಹುದಾಗಿದ್ದ ಅಪಾಯವೇನೆಂದು ಆರಂಭದಲ್ಲಿ ಜರ್ಮನ್ ಜನತೆ ಅರ್ಥ ಮಾಡಿಕೊಂಡಿರಲಿಲ್ಲ. ಜನಾಂಗೀಯ ದ್ವೇಷದ ರಥವೇರಿ ಇಡೀ ಪ್ರಪಂಚಕ್ಕೆ ಬೆಂಕಿ ಹಚ್ಚಲು ಹೊರಟಿದ್ದ ಹಿಟ್ಲರ್ ಮೊದಲು ತನ್ನ ದೇಶದಲ್ಲಿ ತನಗೆ ಬರಲಿದ್ದ ಪ್ರತಿರೋಧವನ್ನು ಮಟ್ಟ ಹಾಕಬೇಕೆಂದು ಅರಿತಿದ್ದ. ಹೀಗಾಗಿಯೇ ಒಂದೊಂದೇ ಸಮುದಾಯದ ನರಮೇಧ ನಡೆಸಿದ. ಮೊದಲು ಯಹೂದಿಗಳನ್ನು, ನಂತರ ಮುಸ್ಲಿಮರನ್ನು, ನಂತರ ಕ್ಯಾಥೋಲಿಕರನ್ನು, ನಂತರ ಕಮ್ಯುನಿಸ್ಟರನ್ನು ಕಗ್ಗೊಲೆ ಮಾಡಿದ. ಇದನ್ನು ಮುಂದಾಗಿಯೇ ಅರಿಯದಿದ್ದುದರಿಂದ ಜರ್ಮನ್ ಜನತೆ ಬಹಳಷ್ಟು ರಕ್ತ ಚೆಲ್ಲಬೇಕಾಯಿತು. ಇದರ ಅರಿವು ಮೂಡಿದ ನಂತರ ಜರ್ಮನಿಯ ಜನತೆ ಮತ್ತು ಪ್ರಪಂಚದ ಹಲವು ದೇಶದ ಜನತೆ ಧರ್ಮ ಹಾಗೂ ಕ್ರೌರ್ಯಕ್ಕೊಳಗಾದ ಜನರನ್ನು ಸೇರಿಸಿ ಫ್ಯಾಸಿಸಂ ವಿರುದ್ಧ ಪಾಪ್ಯುಲರ್ ಫ್ರಂಟ್ ಎಂಬ ಐಕ್ಯರಂಗವನ್ನು ಸ್ಥಾಪಿಸಿಕೊಂಡರು. ಜಗತ್ತಿನಾದ್ಯಂತ ಮುಖ್ಯವಾಗಿ ಸೋವಿಯತ್ ರಷ್ಯಾದ ಬೆಂಬಲದೊಂದಿಗೆ ವಿಶ್ವದ ಜನತೆ ಈ ಪಾಪ್ಯೂಲರ್ ಫ್ರಂಟ್ ಎಂಬ ಐಕ್ಯರಂಗದಡಿ ನಡೆಸಿದ ಸಮರದಿಂದಾಗಿಯೇ ಜಗತ್ತು ಫ್ಯಾಸಿಸಂ ಅಪಾಯದಿಂದ ಪಾರಾಯಿತು. ಪ್ರಜಾತಂತ್ರ ಉಳಿಯಿತು. ಹಲವು ದೇಶಗಳಲ್ಲಿ ಸಮಾಜವಾದ ಸಾಕಾರವಾಯಿತು.

ಮೊನ್ನೆ ಬೆಂಗಳೂರಿನಲ್ಲೂ ಅದೇ ಹೆಸರಿನ ಅದೇ ಆಶಯಗಳನ್ನುಳ್ಳ ಸಂಘಟನೆ ಜನ್ಮ ತಾಳಿದೆ. ಸಂದರ್ಭದ ಹಿನ್ನೆಲೆಯೂ ಅದರಂತೇ ಇದೆ. ಇಂದು ಭಾರತದಲ್ಲಿ ಫ್ಯಾಸಿಸಂ ಗರಿಗೆದರುತ್ತಿದೆ. ದಲಿತರನ್ನು ಸುಟ್ಟ ಬೆಂಕಿ, ಮುಸ್ಲಿಮರ ಮನೆಗಳಿಗೂ, ಬದುಕಿಗೂ ಬೆಂಕಿ ಹಚ್ಚಿ ನರಮೇಧ ನಡೆಸುತ್ತಿದೆ. ಪೊಳ್ಳು ರಾಷ್ಟ್ರೀಯವಾದದ ಭ್ರಾಂತಿಯಲ್ಲಿ ದೇಶಕ್ಕೆ ಮತೋನ್ಮಾದದ ಸನ್ನಿ ಹಚ್ಚಿ ಶೋಷಿತ-ದಮನಿತ ಸಮುದಾಯಗಳಲ್ಲಿ, ವಿಶೇಷವಾಗಿ ಅಲ್ಪಸಂಖ್ಯಾತರಲ್ಲಿ ಅದರಲ್ಲೂ ಮುಸ್ಲಿಮರಲ್ಲಿ ಹಿಂದೆಂದೂ ಇಲ್ಲದ ಆತಂಕವನ್ನು ಸೃಷ್ಟಿಸುತ್ತಿದೆ. ಫ್ಯಾಸಿಸಂನ ಕೆನ್ನಾಲಗೆ ಕರ್ನಾಟಕದಲ್ಲಿ ಕರಾವಳಿಗೆ, ಮಲೆನಾಡಿಗೆ ಸೀಮಿತವಾಗಿದ್ದುದು ಇದೀಗ ಇಡೀ ರಾಜ್ಯಕ್ಕೆ ಹಬ್ಬುತ್ತಿದೆ. ಈ ನಾಡಿನ ಎಡ-ಪ್ರಗತಿಪರ ಶಕ್ತಿಗಳು ಒಗ್ಗಟ್ಟಾಗಿ ಇದರ ವಿರುದ್ಧ ಕೋಮು ಸೌಹಾರ್ದ ವೇದಿಕೆಯಂತಹ ಸಂಘಟನೆಗಳಡಿ ಸಮರ್ಥ ಪ್ರತಿರೋಧ ತೋರುತ್ತಿರುವ ಹೊತ್ತಿನಲ್ಲಿ ಕರ್ನಾಟಕದ ಸೌಹಾರ್ದ ಪ್ರಿಯ ಜನತೆಯ ಉತ್ಸಾಹ ಇಮ್ಮಡಿಸುವ ಮತ್ತು ಫ್ಯಾಸಿಸ್ಟರನ್ನು ಕಂಗಾಲಾಗಿಸುವ ಉತ್ತಮ ಬೆಳವಣಿಗೆ ನಡೆದಿದೆ.

ಹಿಟ್ಲರನ ಫ್ಯಾಸಿಸಂ ವಿರುದ್ಧ ಸ್ಪಷ್ಟ ತಿಳಿವಳಿಕೆ ಮತ್ತು ಕಾರ್ಯಾಚರಣೆಯಿಂದ ಅಸ್ತಿತ್ವಕ್ಕೆ ಬಂದ ಪಾಪ್ಯುಲರ್ ಫ್ರಂಟ್ ಎಂಬ ಹೆಸರನ್ನಿಟ್ಟುಕೊಂಡೇ "ಪಾಪ್ಯೂಲರ್ ಫ್ರಂಟ್ ಆಫ್ ಇಂಡಿಯಾ" ಎಂಬ ಹೊಸ ಸಂಘಟನೆ ಬೆಂಗಳೂರಿನಲ್ಲಿ ಅಭೂತಪೂರ್ವ ಸಮಾವೇಶ ಸಂಘಟಿಸುವುದರೊಂದಿಗೆ ಅಸ್ತಿತ್ವಕ್ಕೆ ಬಂದಿದೆ. ಕರ್ನಾಟಕ ಕರಾವಳಿಯಲ್ಲಿ ಹಾಗೂ ಇತ್ತೀಚಿಗೆ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಮುಸ್ಲಿಂ ಯುವ ಜನತೆಗೆ-ಸಂಘಪರಿವಾರದ ಫ್ಯಾಸಿಸಂ ಬಗ್ಗೆ ಅದಕ್ಕೆ ಪುಷ್ಟಿ ಕೊಡುತ್ತಿರುವ ಅಮೆರಿಕಾ ಸಾಮ್ರಾಜ್ಯವಾದದ ಬಗ್ಗೆ ಮತ್ತು ಮುಸ್ಲಿಮರು ದಲಿತರು ಮತ್ತು ಹಿಂದುಳಿದವರೊಂದಿಗೆ ಐಕ್ಯಗೊಳ್ಳಬೇಕಾದ ಅನಿವಾರ್ಯತೆ ಬಗ್ಗೆ ಶಿಕ್ಷಣ ನೀಡುತ್ತಾ ಅತ್ಯಂತ ಕಡಿಮೆ ಅವಧಿಯಲ್ಲಿ ಸಹಸ್ರಾರು ಯುವಕರನ್ನು ಸಂಘಟಿಸಿರುವ ಕರ್ನಾಟಕ ಫೋರಂ ಫಾರ್ ಡಿಗ್ನಿಟಿ (KFD), ಕೇರಳದ NDF ಮತ್ತು ತಮಿಳುನಾಡಿನ ಸಂಘಟನೆ ಒಟ್ಟು ಸೇರಿ ಈ ಪಾಪ್ಯೂಲರ್ ಫ್ರಂಟ್ ಆಫ್ ಇಂಡಿಯಾ (PFI) ಜನ್ಮ ತಾಳಿದೆ. ಹೀಗಾಗಿ PFI ನ ರಾಜಕೀಯ ನೆಲೆ, ನಿಲುವುಗಳು ಈಗಾಗಲೇ ಪರಿಚಿತವಾದದ್ದೇ ಆಗಿದ್ದರೂ ಬೆಂಗಳೂರಿನಲ್ಲಿ ನಡೆದ ಪ್ರಥಮ ಸಮ್ಮೇಳನ ಅದನ್ನು ಇನ್ನಷ್ಟು ಸ್ಪಷ್ಟಗೊಳಿಸಿದೆ.

ಸಮ್ಮೇಳನದ ಅಂತಿಮ ದಿನ ಫೆ. 17 ರಂದು ಈ ಮೂರು ರಾಜ್ಯಗಳಿಂದ ಕನಿಷ್ಠವೆಂದರೂ 60,000 ಮುಸ್ಲಿಂ ಯುವಕರು ಬೆಂಗಳೂರು ಅರಮನೆ ಮೈದಾನದ ಶಹೀದ್ ಟಿಪ್ಪುಸುಲ್ತಾನ್ ನಗರದಲ್ಲಿ ಜಮಾಯಿಸಿದ್ದರು. ಸಂಜೆ 4 ರಿಂದ 9 ರವರೆಗೆ 5 ಗಂಟೆಗಳ ಕಾಲ ನಡೆದ ಆ ಬೃಹತ್ ಸಮಾವೇಶದಲ್ಲಿ ಅಮೆರಿಕ, ಇಂಗ್ಲೆಂಡ್‌ಗಳಿಂದ ಬಂದಿದ್ದ ಮಾನವ ಹಕ್ಕು ಕಾರ್ಯಕರ್ತರು, ಸಂಪಾದಕಿ ಗೌರಿ ಲಂಕೇಶ್‌ರನ್ನು ಒಳಗೊಂಡಂತೆ ದೇಶದ ವಿವಿಧ ಭಾಗಗಳಿಂದ ಬಂದಿದ್ದ ಭಾಷಣಕಾರರು ಇಂಗ್ಲಿಷ್, ಕನ್ನಡ, ಮಲೆಯಾಳಂನಲ್ಲಿ ಮಾತಾಡುತ್ತಿದ್ದರೆ ಆ ಇಡೀ ಜನಸ್ತೋಮ ಐದೂ ಗಂಟೆಗಳ ಕಾಲ ಬಿಟ್ಟೂಬಿಡದಂತೆ ಸತತ ಕರತಾಡನದ ಮೂಲಕ ತನ್ನ ವಿಶ್ವಾಸಪೂರಿತ ಸಮ್ಮತಿ, ಬೆಂಬಲವನ್ನು ವ್ಯಕ್ತಪಡಿಸುತ್ತಿತ್ತು.

ಸಭೆಯನ್ನು ಉದ್ಘಾಟಿಸಿದ PFI ನ ಅಧ್ಯಕ್ಷ ಅಬೂಬಕ್ಕರ್ ಅತ್ಯಂತ ನಿಖರವಾದ ಮಾತುಗಳಲ್ಲಿ "ತಮ್ಮ ಈ ಹೋರಾಟ ಹಿಂದೂಗಳ ವಿರುದ್ಧವಲ್ಲ, ಸಾಮಾನ್ಯ ಹಿಂದೂಗಳು ನಮ್ಮಷ್ಟೇ ನೊಂದವರು, ನಮ್ಮ ಸಹೋದರರು. ಆದರೆ ಸಂಘಪರಿವಾರ ಮತ್ತು ಅವರು ಪ್ರತಿಪಾದಿಸುವ ಹಿಂದೂತ್ವ ಮುಸ್ಲಿಮರಿಗೆ ಮಾತ್ರವಲ್ಲ ಹಿಂದೂಗಳಿಗೂ, ಈ ದೇಶಕ್ಕೂ, ಈ ದೇಶದ ಅಭಿವೃದ್ಧಿಗೂ ಪ್ರಧಾನ ಶತ್ರು" ಎಂದು ಘೋಷಿಸಿದರು. "ಸಂಘ ಪರಿವಾರದ ಈ ಫ್ಯಾಸಿಸಂನ ವಿರುದ್ಧ ಅದನ್ನು ಪೋಷಿಸುತ್ತಿರುವ ಅಮೆರಿಕ ಸಾಮ್ರಾಜ್ಯದಿದ್ದಕ್ಕೆ ವಿರುದ್ಧ ಈ ದೇಶದ ಜನಜಾಗೃತರಾಗಿದ್ದಾರೆ, ಸಿಡಿದೆದ್ದಿದ್ದಾರೆ ಎಂಬುದಕ್ಕೆ ಈ ಸಮ್ಮೇಳನ ಸಾಕ್ಷಿ" ಎಂದಿದ್ದಕ್ಕೆ ಇಡೀ ಜನಸ್ತೋಮ ಬೃಹತ್ ಕರತಾಡನದೊಂದಿಗೆ ಒಪ್ಪಿಗೆ ಸೂಚಿಸಿತು.





ಪಿಎಫ್‌ಐ ಸಮಾವೇಶದ ಎರಡು ದೃಶ್ಯಗಳು

ಸಮ್ಮೇಳನ ಪ್ರಾರಂಭಗೊಂಡಿದ್ದು ಮಹಮದ್ ಇಕ್ಬಾಲರ "ಸಾರೇ ಜಹಾಂಸೆ ಅಚ್ಛಾ" ಎಂಬ ಐಕ್ಯತೆಯ ಗಾನದಿಂದ. ಅದಕ್ಕೆ ಠಾಗೂರರು ರಚಿಸಿದ ರಾಷ್ಟ್ರಗೀತೆ "ಜನಗಣಮನದ" ಹಿನ್ನೆಲೆ ಸಂಗೀತವಿತ್ತು, ಹಿಂದೂ-ಮುಸ್ಲಿಂ ಐಕ್ಯತೆಯ, ರಾಷ್ಟ್ರ ನಿಷ್ಠೆಯ ಸಂದೇಶವನ್ನು ಸಾರಿತು. ಈ ಮೂಲಕ ಪ್ರಾರಂಭದಲ್ಲೇ ಈ ಸಮ್ಮೇಳನ ತಮ್ಮ ರಾಷ್ಟ್ರನಿಷ್ಠೆಯನ್ನು ಯಾರೂ ಪ್ರಶ್ನಿಸುವ ಅಗತ್ಯವಿಲ್ಲವೆಂದೂ ಮತ್ತು ದೇಶಭಕ್ತಿಯನ್ನು ಯಾರ ಎದುರು ಸಾಬೀತುಪಡಿಸುವ ಅಗತ್ಯವಿಲ್ಲವೆಂದು ಪರಿಣಾಮಕಾರಿಯಾಗಿ ಘೋಷಿಸಿ ಆಗಿತ್ತು. ಸಭೆಯ ಶಿಸ್ತು ರಾಜಕೀಯ ಪ್ರಜ್ಞೆ ಹೊಸ ಭರವಸೆಯನ್ನು ಹುಟ್ಟಿಸುವಂತಿತ್ತು ಎಂಬುದರಲ್ಲಿ ಅತಿಶಯೋಕ್ತಿಯೇನಿಲ್ಲ....!

ಈ ಶಿಸ್ತು ಹಾಗೂ ಆಶಯಗಳು ಪೀಪಲ್ಸ್ ಫ್ರಂಟಿನ ಸಭೆಯ ಅರಾಜಕತೆಗೆ, ಹಿಂದೂ ಸಮಾಜೋತ್ಸವದ ದ್ವೇಷಪೂರಿತ-ಉನ್ಮಾದಕ್ಕೆ ತದ್ವಿರುದ್ಧವಾಗಿತ್ತು. ಎರಡರಲ್ಲೂ ಭಾಗವಹಿಸಿದ ಪತ್ರಕರ್ತರೊಬ್ಬರು ಅಭಿಪ್ರಾಯಪಟ್ಟಂತೆ 'ಹಿಂದೂ ಸಮಾಜೋತ್ಸವದಲ್ಲಿ ದ್ವೇಷದ ಹೀನಾಯ ಮುಸ್ಲಿಂ ನಿಂದನೆಗಳಿಗೆ ಚಪ್ಪಾಳೆ ಬೀಳುತ್ತದೆ. ಆದರೆ ಇಲ್ಲಿ ಪ್ರತಿ ಭಾಷಣಕಾರ ದಲಿತ-ಮುಸ್ಲಿಂ ಐಕ್ಯತೆಯ ಬಗ್ಗೆ, ದೇಶದ ಬಡಜನತೆಯ ಬವಣೆಯ ಬಗ್ಗೆ ಮಾತನಾಡುತ್ತಿದ್ದರೆ ಜನಸ್ತೋಮ ಚಪ್ಪಾಳೆ ತಟ್ಟುತ್ತಿದೆ'. ಈ ಸಮ್ಮೇಳನಕ್ಕೆ ಮುಂದಿನ ಎರಡು ದಿನಗಳ ಕಾಲ ಅದೇ ಮೈದಾನದಲ್ಲಿ ಈ ದೇಶಕ್ಕೆ ಹತ್ತಿರುವ ಬ್ರಾಹ್ಮಣವಾದ ಮತ್ತು ಸಾಮ್ರಾಜ್ಯವಾದದ ಕಳಂಕದಿಂದ ಈ ದೇಶವನ್ನು ವಿಮೋಚನೆಗೊಳಿಸುವುದು ಹೇಗೆ ಎಂಬ ನಿರಂತನ ಚಿಂತನ-ಮಂಥತನಗಳು ನಡೆದವು. ಇದರಲ್ಲಿ ನಾಡಿನ ಬಹಳಷ್ಟು ಸಮಾನಮನಸ್ಕ ವ್ಯಕ್ತಿಗಳು ಮತ್ತು ನಾನಾ ಸಂಘಟನೆಗಳು ಭಾಗವಹಿಸಿದ್ದರು. ಈ ಎಲ್ಲಾ ಚಿಂತನ ಮಂಥನಗಳಿಂದ ಹೊರಬಂದ ಅಂಶಗಳನ್ನು ಕ್ರೂಢೀಕರಿಸಿ PFI ತನ್ನ ಮುಂದಿನ ಹೋರಾಟದ ದಿಕ್ಕು-ದಿಸೆಗಳ ಬಗ್ಗೆ ಎಂಟಕ್ಕೂ ಹೆಚ್ಚು ನಿರ್ಣಯಗಳನ್ನು ಸ್ವೀಕರಿಸಿತು. ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಗಳ ನವವಸಾಹತೀಕರಣದ ವಿರುದ್ಧ, ಈ ದೇಶದ ದಲಿತ-ಶೂದ್ರರ ಅಲ್ಪಸಂಖ್ಯಾತರ ಬದುಕನ್ನು-ಭವಿಷ್ಯವನ್ನು ತುಳಿದಿಟ್ಟಿರುವ ಬ್ರಾಹ್ಮಣವಾದಿ ಫ್ಯಾಸಿಸಂ ವಿರುದ್ಧ, ಕಾವೇರಿ ಜಲ ಹಂಚಿಕೆಯಲ್ಲಿ ನ್ಯಾಯಬದ್ಧ ಸೂತ್ರ ಅನ್ವಯಿಸಲು ಒತ್ತಾಯಿಸಿ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಟಿಪ್ಪುವಿನ ಹೆಸರಿರುವಂತೆ, ಮತ್ತೆ ಬಾಬ್ರಿ ಮಸೀದಿಯನ್ನು ಪುನರ್ ನಿರ್ಮಾಣ ಮಾಡಲು ಒತ್ತಾಯಿಸಿ, ಇನ್ನಿತರ ಹಲವು ನಿರ್ಣಯಗಳನ್ನು ಸಭೆ ಸ್ವೀಕರಿಸಿತು.

ಈ ಬೃಹತ್ ಸಮ್ಮೇಳನ ನಡೆದ ಅರಮನೆ ಮೈದಾನಕ್ಕೆ ಶಹೀದ್ ಟಿಪ್ಪು ಸುಲ್ತಾನ್ ನಗರವೆಂದು ಹೆಸರಿಟ್ಟಿದ್ದರು. ಇದರ ಬಗ್ಗೆ ಪ್ರಸ್ತಾಪಿಸುತ್ತಾ ಸಂಪಾದಕಿ ಗೌರಿ ಲಂಕೇಶರು "ಟಿಪ್ಪು ಕಂಡ ಕನಸು-ಪಾಳೇಗಾರಶಾಹಿ ಮುಕ್ತ, ಬ್ರಾಹ್ಮಣಶಾಹಿ ಮುಕ್ತ ವಿಮೋಚಿತ ಭಾರತದ ಕನಸು ಇನ್ನು ನನಸಾಗಿಲ್ಲ" ಎಂಬ ವಾಸ್ತವತೆಯನ್ನು ಹೇಳುತ್ತಲೇ "ಇಂದು ಈ ಸಮ್ಮೇಳನ ಸಾಧಿಸಿರುವ ಮುಸ್ಲಿಂ, ದಲಿತ-ಪ್ರಗತಿಪರ ಐಕ್ಯತೆ "ಸಾರೇ ಜಹಾಂಸೆ ಅಚ್ಛಾ" ಆಗಿರುವ ಭಾರತವನ್ನು ನಿಜವಾಗಿಯೂ ಟಿಪ್ಪುವಿನ ಕನಸಿನ ಭಾರತವನ್ನಾಗಿ ಮಾಡುವ ಭರವಸೆ ಹುಟ್ಟಿಸಿದೆ' ಎಂದರು. ಮತ್ತು ಆದ್ದರಿಂದಲೇ "ಹಂ ಹೋಂಗೆ ಕಾಮಿಯಾಬ್, ಮನ್‌ಮೆ ಹೈ ವಿಶ್ವಾಸ್ ಪೂರಾ ಹೈ ವಿಶ್ವಾಸ್" ಎಂದು ನುಡಿದದ್ದು ನೆರೆದ ಜನಸ್ತೋಮದ ಮನದಾಳದ ಇಂಗಿತದಂತಿತ್ತು.

●

ಎರಡನೇ ವಾರ್ಷಿಕೋತ್ಸವಕ್ಕೆ ಶುಭಾಶಯಗಳು

ಬರುವ ತಿಂಗಳು ಮಾರ್ಚ್ ಲರಂದು ತಮ್ಮ ಪತ್ರಿಕೆಯ ವಾರ್ಷಿಕೋತ್ಸವದ ಶುಭ ಸಂದರ್ಭಕ್ಕೆ ತಮ್ಮ ಪತ್ರಿಕೆಯ ಖಾಯಂ ಓದುಗಾರನಾದ ನಾನು ಹೃತ್ಪೂರ್ವಕವಾದ ಶುಭಾಶಯಗಳನ್ನು ಸಲ್ಲಿಸುತ್ತೇನೆ.




ನಮ್ಮ ಪ್ರೀತಿಯ ಮಾಸ್ತರರಾದ ದಿ. ಪಿ. ಲಂಕೇಶ್‌ರವರು ಸುಮಾರು ಎರಡು ದಶಕಗಳ ಹಿಂದೆ ಜಾಣ ಜಾಣೆಯರ ಲಂಕೇಶ್ ಪತ್ರಿಕೆಯನ್ನು ಪ್ರಾರಂಭಿಸಿ ಪತ್ರಿಕೋದ್ಯಮದಲ್ಲಿ ಒಂದು ಹೊಸ ಚರಿತ್ರೆಯನ್ನೇ ಸೃಷ್ಟಿಸಿದ್ದರು. ಅಷ್ಟೇ ಅಲ್ಲದೇ ರಾಜಕೀಯ, ಧಾರ್ಮಿಕ, ಮೌಢ್ಯ, ಭ್ರಷ್ಟಾಚಾರ, ಕೋಮುವಾದ, ಜಾತೀಯತೆ ಇತ್ಯಾದಿ ವಿಷಯಗಳ ಬಗ್ಗೆ ದಿಟ್ಟ ನಿಲುವನ್ನು ತಾಳುತ್ತಿದ್ದರು. ಇದೆಲ್ಲದರಿಂದ ಹಲವು ಜನರಿಂದ ಜೀವ ಬೆದರಿಕೆ ಉಂಟಾದರೂ ತಮ್ಮ ಲೇಖನದ ಹರಿತವನ್ನು ಲಂಕೇಶರು [illegible] "ರಾಘವೇಂದ್ರ, [illegible]ಗಳನ್ನು ಈ ನಾಡಿನಾದ್ಯಂತ ಜನಪ್ರಿಯಗೊಳಿಸಿರುವುದು ಸರಿಯೇ" ಎಂದು ಕೆಚ್ಚೆದೆಯಿಂದ ಪ್ರಶ್ನಿಸಿದ್ದರು.

ತಮ್ಮ ತಂದೆಯವರು ಎಲ್ಲಾ ಕ್ಷೇತ್ರಗಳಲ್ಲಿ ತೋರಿದ ದೈತ್ಯ ಪ್ರತಿಭೆಯನ್ನೇ ತಾವುಗಳೂ ಕೂಡ ತಮ್ಮ ಜೀವನದಲ್ಲಿ ಹಾಗೂ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಚಾಚೂ ತಪ್ಪದೇ ಅಳವಡಿಸಿಕೊಂಡು ಬಂದಿರುವುದು ನಿಜಕ್ಕೂ ಅಭಿನಂದನಾರ್ಹವಾದದ್ದು.

ನಕ್ಸಲೈಟ್ ಚಳವಳಿಯಾಗಲೀ, ಕೋಮುಗಲಭೆಗಳ ವಿಷಯದಲ್ಲಾಗಲೀ, ಸಮಾಜದಲ್ಲಿ ಗಣ್ಯರೆಂದು ಬಿರುದು ಬಾವಲಿಗಳನ್ನು ಪಡೆದು ಸಮಾಜಘಾತಕ ಕಾರ್ಯಗಳನ್ನು ಮಾಡುತ್ತಿರುವ ಕೆಲವು ರಾಜಕಾರಣಿಗಳು ಹಾಗೂ ಮಠಾಧೀಶರುಗಳ ಬಗ್ಗೆ ತಮ್ಮ ಲೇಖನಗಳ ಮೂಲಕ ದಿಟ್ಟ ನಿಲುವನ್ನು ಪ್ರತಿಪಾದಿಸುತ್ತಿದ್ದೀರಿ. ಬಹುತೇಕ ಪತ್ರಕರ್ತರು ಇನ್ಫೋಸಿಸ್ ಸಂಸ್ಥೆಯ ಶ್ರೀಮತಿ ಸುಧಾಮೂರ್ತಿರವರ ಕೃಪಾಕಟಾಕ್ಷಕ್ಕೆ ಸಿಲುಕಿ ಆಕೆಯ ಬಗ್ಗೆ ಉತ್ಪ್ರೇಕ್ಷೆಯಿಂದ ಕೂಡಿದ ಲೇಖನಗಳನ್ನು ಪ್ರಕಟಿಸಿದ್ದರೂ ಕೂಡ ತಾವುಗಳು ದಿಟ್ಟತನದಿಂದ ಈಕೆಯ ಬಗ್ಗೆ ಸತ್ಯಾಂಶವುಳ್ಳ ಅಂಕಣವನ್ನು ಪ್ರಕಟಿಸಿರುವುದು ಸರ್ವರೂ ಮೆಚ್ಚುವಂತಹ ವಿಷಯವಾಗಿದೆ.

ಕೋಮುಸೌಹಾರ್ದತೆ ಬಗ್ಗೆ ಹಾಗೂ ಕೋಮುವಾದಿಗಳ ಶಕ್ತಿಯ ವಿರುದ್ಧ ಹೋರಾಟ ಮಾಡುವ ವಿಷಯದಲ್ಲಿ ತಾವುಗಳು ತೋರಿಸಿರುವ ಆಸಕ್ತಿ ಬಹಳ ಪ್ರಶಂಸನೀಯವಾದದ್ದು. ತಮ್ಮ ಪತ್ರಿಕೆ ಇದೇ ಹಾದಿಯಲ್ಲಿ ಮುಂದುವರೆದು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲಿ ಎಂದು ಶುಭ ಹಾರೈಸುತ್ತೇನೆ.

ಬಿ.ಎಸ್. ಜ್ಞಾನಪ್ರಕಾಶ್,
ಪ್ರಗತಿಪರ ಚಿಂತನಾ ವಕೀಲರ
ವೇದಿಕೆ, ಬೆಂಗಳೂರು



17ರಂದು ಶನಿವಾರ ಎಂಪವರ್ ಇಂಡಿಯಾ ಸಮ್ಮೇಳನಕ್ಕೆ ತಾವುಗಳು ಭಾಷಣಕ್ಕಾಗಿ ಹೋಗಿದ್ದು ಸಂತಸದ ವಿಷಯ. ಇದೀಗ ವಿಷಯಕ್ಕೆ ಬರುತ್ತೇನೆ. ಇಂದಿನ ಹಿಂದುಳಿದ ವರ್ಗದವರ, ಅದರಲ್ಲೂ ಅಲ್ಪಸಂಖ್ಯಾತರ ದುರವಸ್ಥೆಗೆ ಪ್ರಧಾನ ಕಾರಣ ಅನಕ್ಷರತೆ. ಆಧುನಿಕ ವಿದ್ಯಾಭ್ಯಾಸವಿಲ್ಲದೆ ಇವರ ಪ್ರಗತಿ ಅಸಾಧ್ಯ. ಪ್ರಗತಿಪರ ಪೀಳಿಗೆ ಬೆಳೆದುಬರಬೇಕಾದರೆ ವಿದ್ಯಾಭ್ಯಾಸ ಅತ್ಯಗತ್ಯ. "ನೀವು ಚೀನಾ ದೇಶಕ್ಕಾದರೂ ಹೋಗಿ ವಿದ್ಯಾಭ್ಯಾಸವನ್ನು ಪಡೆಯಿರಿ" ಎಂದು ಸ್ವತಃ ಪ್ರವಾದಿ ಮಹಮ್ಮದರೇ ಕರೆ ಕೊಟ್ಟಿದ್ದಾರೆ.

- ರಹಮತ್ ಅಲಿ (ಬಾವ),
ಬೆಂಗಳೂರು

ಲಂಕೇಶ್ ವಾರಪತ್ರಿಕೆಯಲ್ಲಿ ಬಂದ ಒಂದು ಪತ್ರ ಶ್ರೀ ರಹಮತ್ ಅಲಿ (ಬಾವ) ಅವರಿಗೆ ನೂರು ನಮಸ್ಕಾರಗಳು. ಅಂತಹ ಪತ್ರ ಓದಿ ಬಹಳ ದಿನಗಳಾಗಿದ್ದವು. ಅಮಾಯಕರನ್ನು ಹಾಳು ಮಾಡುವವರು ಎಲ್ಲ ಧರ್ಮಗಳ ಮಠಾಧೀಶರು. ಇದರಿಂದ ಈ ದೇಶದಲ್ಲಿ ಧರ್ಮವೆಂಬುದು ಒಂದು ದಂಧೆಯಾಗಿದೆ. ನಮಗೆ ತಿಳಿದ ಮಟ್ಟಿಗೆ ಸ್ವತಃ ನಾವು ಬುದ್ಧಿವಂತರಾಗದೆ ಇದು ಸೂರ್ಯ ಚಂದ್ರರು ಇರುವವರೆಗೆ ಹೋಗಲಾರದು. ಮೊನ್ನೆ ಬೆಂಗಳೂರಿನ ಗಲಭೆಯಲ್ಲಿ ತಂದೆ ತಾಯಿ ಇಲ್ಲದ ಹುಡುಗ ಜೀವ ಕಳೆದುಕೊಂಡಿದ್ದು ಗುಂಡಿನಿಂದಲ್ಲ, ನೀಚ ಧರ್ಮಗಳಿಂದ. ಆ ಜೀವಕ್ಕೆ ಶಾಂತಿ ಸಿಗಲಿ. ಇಂತಹ ಲೇಖನಗಳು ಪತ್ರಿಕೆಯಲ್ಲಿ ಬರಲಿ.

-ಟಿ.ಯು. ಕುಮಾರ ಬೆಳಗಾಂ

ಕೇವಲ 25 ವರ್ಷದ ಹಿಂದೆ ಕಾಳೇಗೌಡರು ನಡೆದು ಬರುತ್ತಿದ್ದರೆ ಏಕೆ ಕಾಲೋನಿಗೆ ಕಾಲೋನಿಯೇ ಎದ್ದು ನಿಂತು ನಮಸ್ಕರಿಸುತ್ತಿತ್ತು. ಅವರು ಕಾಮಾಕ್ಷಿಪಾಳ್ಯದ ಕೊನೆಯ ಪಂಚಾಯ್ತಿ ಛೇರ್ಮನ್. ಆವತ್ತಿನ ಅವರ ಗತ್ತು ಗೈರತ್ತನ್ನು ಕಂಡವರೆಲ್ಲ ಇವತ್ತಿಗೂ ಅವರನ್ನು 'ದಿ ಲಾಸ್ಟ್ ಎಂಪರರ್ ಕಾಳೇಗೌಡ' ಅಂತಲೇ ಗೇಲಿ ಮಾಡುತ್ತಾರೆ. ಆವತ್ತು ದುಗ್ಗಾಣಿ ರೇಟಿಗೆ ತಮ್ಮ ಭೂಮಿ ಮಾರಿಕೊಂಡ ಹಳೇ ತಲೆಮಾರಿನ ಗೌಡರಿಗೂ ಈಗ ಭೂಮಿಗೆ ಬಡಿದಾಡುತ್ತಲೇ ರಕ್ತ ಹರಿಸುತ್ತಿರುವ ಹೊಸ ಪೀಳಿಗೆಯ ಹುಡುಗರಿಗೂ ಮಧ್ಯದ ಏಕೈಕ ಪಳೆಯುಳಿಕೆಯಂತಿದ್ದಾರೆ.

ರಿವೇಂಜ್ ಕಿಲ್ಲಿಂಗ್ಸ್ 18


ರಾ. ಸೋಮನಾಥ್



ಲಾಸ್ಟ್ ಎಂಪರರ್ ಕಾಳೇಗೌಡ!

ಗತ ಸಾಮ್ರಾಜ್ಯವೊಂದರ ಕಟ್ಟಕಡೆಯ ಸಾಮ್ರಾಟನಂತಿದ್ದಾರೆ ಕಾಮಾಕ್ಷಿಪಾಳ್ಯದ ಕಾಳೇಗೌಡ!

ತುಂಬಾ ಹಿಂದೇನಲ್ಲ; ಇಲ್ಲಿಗೆ ಕೇವಲ 25 ವರ್ಷದ ಹಿಂದೆ ಕಾಳೇಗೌಡರು ನಡೆದು ಬರುತ್ತಿದ್ದರೆ ಏಕೆ ಕಾಲೋನಿಗೆ ಕಾಲೋನಿಯೇ ಎದ್ದು ನಿಂತು ನಮಸ್ಕರಿಸುತ್ತಿತ್ತು. ಅವರು ಕಾಮಾಕ್ಷಿಪಾಳ್ಯದ ಕೊನೆಯ ಪಂಚಾಯ್ತಿ ಛೇರ್ಮನ್. ಆವತ್ತಿನ ಅವರ ಗತ್ತು ಗೈರತ್ತನ್ನು ಕಂಡವರೆಲ್ಲ ಇವತ್ತಿಗೂ ಅವರನ್ನು 'ದಿ ಲಾಸ್ಟ್ ಎಂಪರರ್ ಕಾಳೇಗೌಡ' ಅಂತಲೇ ಗೇಲಿ ಮಾಡುತ್ತಾರೆ. ಮುಂದೊಮ್ಮೆ ಕಾಮಾಕ್ಷಿಪಾಳ್ಯದಲ್ಲಿ ಈಪಾಟಿ ರಕ್ತ ಹರಿದೀತೆಂಬ ಸಣ್ಣದೊಂದು ನಿರೀಕ್ಷೆ ಕೂಡ ಇಲ್ಲದಂತೆ ಮೆರೆದ ಛೇರ್ಮನ್ ಕಾಳೇಗೌಡ, ಆವತ್ತು ದುಗ್ಗಾಣಿ ರೇಟಿಗೆ ತಮ್ಮ ಭೂಮಿ ಮಾರಿಕೊಂಡ ಹಳೇ ತಲೆಮಾರಿನ ಗೌಡರಿಗೂ ಈಗ ಭೂಮಿಗೆ ಬಡಿದಾಡುತ್ತಲೇ ರಕ್ತ ಹರಿಸುತ್ತಿರುವ ಹೊಸ ಪೀಳಿಗೆಯ ಹುಡುಗರಿಗೂ ಮಧ್ಯದ ಏಕೈಕ ಪಳೆಯುಳಿಕೆಯಂತಿದ್ದಾರೆ.



ಚೆನ್ನಿಗಪ್ಪ

"ಮಚ್ಚ ಮತ್ತು ಗೋಪಾಲಯ್ಯನ ಕಡೆಯ ಹುಡುಗರ ಬಡಿದಾಟದಿಂದಾಗಿ ದೊಡ್ಡ ಲುಕ್ಸಾನು ಅಂತ ಆಗಿದ್ದು ಯಾರಿಗೆ ಗೊತ್ತಾ?"

ತಣ್ಣಗೆ ಪ್ರಶ್ನಿಸಿದರು ಕಾಳೇಗೌಡ.

"ಯಾರಿಗೆ?" ಕೇಳಿತು ಪತ್ರಿಕೆ

"ಇನ್ಯಾರಿಗೆ? ಕಾಮಾಕ್ಷಿಪಾಳ್ಯಕ್ಕೆ!"

ಸಾವರಿಸಿಕೊಂಡೇ ಉತ್ತರಿಸಿದರು ಕಾಳೇಗೌಡ. ಅವರಿಗೀಗ ಅರವತ್ತೈದರ ಇಳಿವಯಸ್ಸು. 1967 ರ ತನಕ ಕಾಮಾಕ್ಷಿಪಾಳ್ಯ ಪಂಚಾಯ್ತಿ ಛೇರ್ಮನ್ ಆಗಿದ್ದ ಕಾಳೇಗೌಡರು ಗುಂಡೂರಾಯರ ಸರ್ಕಾರ ಇಲ್ಲಿನ ರೈತರ ಭೂಮಿ ಕಸಿಯಲು ಯತ್ನಿಸಿದಾಗ ಬೀದಿಗಿಳಿದು ಪ್ರತಿಭಟಿಸಿದವರು. ಭೂಮಿಯೇನೋ ಉಳಿಯಿತಾದರೂ ಅದು ಶಾಶ್ವತವಾಗಿ ಇಲ್ಲಿನ ಗೌಡರಿಗೆ ದಕ್ಕುವಂತಿರಲಿಲ್ಲ, ಪ್ರತಿಯೊಬ್ಬರೂ ತಂತಮ್ಮ ಜಮೀನನ್ನು ಸೈಟು ಮಾಡಿ ಎಲ್ಲೆಲ್ಲಿಂದಲೋ ವಲಸೆ ಬಂದವರಿಗೆ ಮಾರಿಕೊಂಡರು. ಈ ಪೈಕಿ ಕಾಳೇಗೌಡರ ಹತ್ತಿರ ಜಮೀನೇ ಮುಂದೆ ವೃಷಭಾವತಿ ನಗರವಾಗಿ ತಲೆ ಎತ್ತಿತು. ಅದರ ಪಕ್ಕದ್ದೇ ಸಣ್ಣಕ್ಕಿಬೈಲು. ಮಾಗಡಿ, ಕುಣಿಗಲ್ ಕಡೆಯಿಂದ ವಲಸೆ ಬಂದ ಒಂದಷ್ಟು ಮಂದಿ ಗೌಡರನ್ನು ಹೊರದುಪಡಿಸಿದರೆ ಬಹುಪಾಲು ಸೈಟುಗಳೆಲ್ಲ ಆಂಧ್ರ ಮೂಲದ ಕೆಂಪಾಪುರ ಅಗ್ರಹಾರದ ಕಡೆಯಿಂದ ವಲಸೆ ಬಂದಿದ್ದ ನೇಕಾರರ ಪಾಲಾಯಿತು.



ಹತನಾದ ಮಚ್ಚ

ಬರುಬರುತ್ತ ಸಣಕ್ಕಿಬೈಲು, ವೃಷಭಾವತಿನಗರ, ರಂಗನಾಥಪುರ, ಕಾವೇರಿಪುರ ಇತ್ಯಾದಿ ಏರಿಯಾಗಳೆಲ್ಲ ಕಾಮಾಕ್ಷಿಪಾಳ್ಯವನ್ನೇ ಮೀರಿ ಬೆಳೆದವು. ಛೇರ್ಮನ್ ಕಾಳೇಗೌಡರಿಗೆ ಮಂತ್ರಿ ರಾಮಚಂದ್ರಗೌಡ, ಕಾಂಗ್ರೆಸ್ ನಾಯಕ ಡೀಕೆ, ಮಾಜಿ ಕಾರ್ಪೊರೇಟರ್ ಗೋಪಾಲಯ್ಯ, ಕಡೇ ಮನೆ ಸಂಪತ್ತು, ಅವರಪ್ಪ ಪೇಟೆ ಮರಿಯಪ್ಪ ಎಲ್ಲರೂ ಸಂಬಂಧಿಕರೆ. ಅಲ್ಲಿಯತನಕ ದೇವೇಗೌಡರೆಂದರೆ ಪ್ರಾಣ ಬಿಡುತ್ತಿದ್ದ ಕಾಳೇಗೌಡ 1996 ರಲ್ಲಿ ಜನತಾದಳದಿಂದ ಕಾಮಾಕ್ಷಿಪಾಳ್ಯದ ಪಾಲಿಕೆ ಚುನಾವಣೆಗೆ ನಿಂತರು. ಏನೆಂದರೂ ಊರ ಹಿರೀಕ, ಜನ ಖಂಡಿತ ಗೆದ್ದೇ ಗೆಲ್ಲಿಸುತ್ತಾರೆಂಬ ನಂಬಿಕೆಯಿತ್ತು. ಅದನ್ನು ಹುಸಿಗೊಳಿಸಿದ್ದು ಮತ್ತು ಗೆದ್ದದ್ದು ಬಿಜೆಪಿಯ ಕೆ. ರಂಗಣ್ಣ. ಇದು ಕಾಮಾಕ್ಷಿಪಾಳ್ಯ ಆ ಊರಿನ ಪೂರ್ವಜರ ಅಂಕೆ ಮೀರಿ ಪಡ್ಡೆ ಹುಡುಗರ ಹಿಡಿತಕ್ಕೆ ಸಿಲುಕಿದ್ದರ ಸಂಕೇತವಾಗಿತ್ತು. ಪಕ್ಕದ ವೃಷಭಾವತಿನಗರ ವಾರ್ಡಿನಿಂದ ಗೋಪಾಲಯ್ಯ ಗೆದ್ದು ಕೌನ್ಸಿಲರ್ ಆಗಿದ್ದ.

ಏನ್ ಸ್ವಾಮೀ ಮಾಡ್ತೀರಿ? ಹೊಸ ಹುಡುಗರು ದುಡ್ಡೂ ಕಾಸು ಖರ್ಚು ಮಾಡಿ ನಮ್ಮಂಥವರನ್ನೇ ಸೋಲಿಸಿಬಿಟ್ರಲ್ಲ; ಇನ್ನು ಪಡ್ಡೆ ಹೈಕಳು ನಮ್ಮ ಮಾತು ಕೇಳ್ತಾರ? ಆ ಮಚ್ಚ ಅನ್ನೋನು ಯಾರು, ಎತ್ತ ಅನ್ನೋದೇ ನನಗೆ ಗೊತ್ತಿರಲಿಲ್ಲ, ಅದ್ಯಾರೋ ಬೈಲು ರವಿ ಅನ್ನೋನ್ನ ಆತ ಯಾಕೆ ಕೊಂದ ಅನ್ನೋದು ನಮಗೆ ಗೊತ್ತಾಗಲಿಲ್ಲ, ಯಾವತ್ತು ಊರಲ್ಲಿ ಎರಡು ಪಾರ್ಟಿ ಅಂತ ಆಯ್ತೋ ನಾವು ಕಾಮಾಕ್ಷಿಪಾಳ್ಯದವರೆಲ್ಲ ಗೋಪಾಲಯ್ಯನನ್ನೇ ಬೆಂಬಲಿಸಿದ್ವಿ. ಏಕೆಂದ್ರೆ ಆತ ನಮಗೆ ಸಂಬಂಧ ನೋಡಿ.....!



ಕೆ. ನಟರಾಜ್

ಇದು ಕಾಳೇಗೌಡರ ಮಾತಿನ ದಾಟಿ.

ಅಲ್ಲೀ ಊರಲ್ಲಿ ಗೋಲಿ ಆಡೋ ಹುಡುಗರು ಕೂಡ ಒಂದಲ್ಲಾ ಒಂದು ಗ್ಯಾಂಗಿನ ಜೊತೆ ಗುರುತಿಸಿಕೊಳ್ಳಬೇಕು ಅನ್ನೋ ಸ್ಥಿತಿ ನಿರ್ಮಾಣವಾಗುವ ತನಕ ನೀವು ದೊಡ್ಡೋರು ಏನು ಮಾಡ್ತಿದ್ರೀ ಎಂಬ ಪ್ರಶ್ನೆಗೆ ಅವರು ಬಾಯಿಂದ ಬಂದ ಮಾತಿದು. ಅವರಿಗೆ ತಿಳಿದಂತೆ ಪ್ರಾರಂಭದಲ್ಲಿ ಗೋಪಾಲಯ್ಯನ ತಮ್ಮ ಬಸವನ ಜೋಡಿದಾರನಾಗಿದ್ದ ಮಚ್ಚ ಉರ್ಫ್ ಮಂಜುನಾಥ ಮೂಲತಃ ಸಣ್ಣಕ್ಕಿ ಬೈಲಿನವನು. 1999 ರ ಹೊತ್ತಿಗೆ ಗೋಪಾಲಯ್ಯನ ಅಕ್ಕನ ಮಗ ಆನಂದ ವೃಷಭಾವತಿ ನಗರದಲ್ಲೊಂದು ಎಸ್‌ಟಿಡಿ ಬೂತ್ ಇಟ್ಟುಕೊಂಡಿದ್ದ. ಅಲ್ಲಿಗೆ ಮಚ್ಚನ ಬಂಟ ಬೂನು ಉರ್ಫ್ ಮನೋಹರ್ ಎಂಬಾತನೂ ಬಂದು ಅಡ್ಡೆ ಹಾಕುತ್ತಿದ್ದ. ಇಬ್ಬರೂ ಪಡ್ಡೆಗಳೆ. ಇಬ್ಬರ ಮಧ್ಯೆ ಹುಡುಗಾಟಕೆಗೆ ಶುರುವಾದ ಚಿಲ್ರೆ ಜಗಳ ಹೊಡೆದಾಟಕ್ಕೆ ತಿರುಗಿ, ಗೋಪಾಲಯ್ಯನ ಅಕ್ಕನ ಮಗ ಆನಂದ ಬೂನು ಎಂಬಾತನಿಗೆ ನಾಲ್ಕು ಬಾರಿಸಿಬಿಟ್ಟ.

ಇದು ಕ್ಷುಲ್ಲಕ ಜಗಳ. ಹೊಡೆದಾಡಿಕೊಂಡ ಯಾರೂ ಮೀಸೆ ಬಲಿತವರಲ್ಲ, ಆದರೆ ಮಚ್ಚ ಮಾತ್ರ ಆನಂದನ ವಿರುದ್ಧ ತನ್ನ ಬಂಟ ಬೂನು ಬೆಂಬಲಕ್ಕೆ ನಿಂತುಬಿಟ್ಟ. ಮಚ್ಚನ ಕಡೆಯ ನಾಲ್ಕಾರು ಹುಡುಗರ ಜೊತೆ ನುಗ್ಗಿದ್ದೇ ಬೂನು ಆನಂದನನ್ನು ಹಿಡಿದು ಬಡಿದ. ತನ್ನ ನೆರಳಲ್ಲೇ ಬೆಳೆದು ತನ್ನ ಅಕ್ಕನ ಮಗನನ್ನೇ ಹೊಡೆಸುವಷ್ಟರ ಮಟ್ಟಿಗೆ ಬೆಳೆದ ಮಚ್ಚನ ವಿರುದ್ಧ ಮೊದಲ ಬಾರಿಗೆ ಗೋಪಾಲಯ್ಯ ತಿರುಗಿಬಿದ್ದಿದ್ದ.

ಏನೋ ಹುಡುಗಾಟಕೆ ಜಗಳ ಎಲ್ಲಾ ಸರಿಹೋಗುತ್ತೆ ಅಂತ ನಾವ್ಯಾ ತಲೆ ಕೆಡಿಸಿಕೊಳ್ಳಲಿಲ್ಲ, ಆದರೆ ಇದೇ ಕಾಮಾಕ್ಷಿಪಾಳ್ಯದ ಸರ್ವನಾಶಕ್ಕೆ ಮೂಲವಾಯಿತು. ಮೊದಮೊದಲು ಪಡ್ಡೆ ಹುಡುಗರ ಲೀಡರ್‌ನಂತಿದ್ದ ಮಚ್ಚ ಕ್ರಮೇಣ ತಿಮ್ಮೇನಹಳ್ಳಿ ತಮ್ಮಯ್ಯನ ಬೆಂಬಲದಿಂದ ಬೆಳೆಯುತ್ತಲೇ ಹೋದ. ಬೆಳೆಸಿದ ತಪ್ಪಿಗೆ ಗೋಪಾಲಯ್ಯನೇ ಸಿಕ್ಕಾಪಟ್ಟೆ ತಲೆ ಕೆಡಿಸಿಕೊಳ್ಳಬೇಕಾಗಿ ಬಂತು. ಅಲ್ಲಿಯತನಕ ಎಲೆಕ್ಷನ್ನು ಪಾರ್ಟಿ, ಸಂಘಟನೆ ಮಾಡಿಕೊಂಡಿದ್ದ ಗೋಪಾಲಯ್ಯ ಮಚ್ಚನ ಮೇಲೆ ಜಿದ್ದಿಗೆ ಬಿದ್ದು ತನ್ನದೇ ಪ್ರತ್ಯೇಕ ರೌಡಿ ಗ್ಯಾಂಗ್ ಕಟ್ಟತೊಡಗಿದ.

ಇದೇ ವೃಷಭಾವತಿನಗರದ ದಡಿಯಾ ಮಂಜ, ರೇಜರ್ ಸೀರ ಮುಂತಾದ ಪುಡಿ ರೌಡಿಗಳು ಗೋಪಾಲಯ್ಯನ ಬೆನ್ನಿಗೆ ನಿಂತರೆ, ಮಚ್ಚನ ಟೀಮಿನಲ್ಲಿ ಪೆದ್ದುಗುಂಡ, ತುರೆ ಸತೀಶ, ಕೋಳಿ ಶಿವಾ, ಜಾನಿ, ಕೋತಿರಾಮ, ಕೇಸಿ ಸೂರಿ ಮುಂತಾದ ಡೆಡ್ಲಿ ಹುಡುಗರ ಹಿಂಡೇ ಜಮೆಯಾಯಿತು. ಯಾವತ್ತು ಗೋಪಾಲಯ್ಯ ಗೆದ್ದು ಮೊದಲ ಬಾರಿಗೆ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲರ್ ಆದನೋ ಮಚ್ಚನ ವಿರುದ್ಧ ಗ್ಯಾಂಗ್ ಕಟ್ಟಲು ನಿಂತವನು ಹುಮ್ಮಸ್ಸಿಗೆ ಬಿದ್ದು ಬಿಜೆಪಿ ಕಾರ್ಯಕರ್ತ ಪ್ರಕಾಶನ ಹತ್ಯೆಗೆ ಕಾರಣನಾದ. ದುಡುಕಿಗೆ ಬಿದ್ದ ಗೋಪಾಲಯ್ಯನ ಹುಡುಗರು ಆತನ ಮನೆ ಮುಂದೆಯೇ ನಾಗರಾಜ್ ಉರ್ಫ್ ವಾಟೆಯ ಮೇಲೆ ದಾಳಿ ಮಾಡಲು ಹೋಗಿ ಅನ್ಯಾಯವಾಗಿ ಪ್ರಕಾಶನನ್ನು ಕೊಂದು ಬಿಟ್ಟರು. ಇಷ್ಟಾಗಿದ್ದೇ ತಡ ಮಚ್ಚನ ಪಡೆ ಗೋಪಾಲಯ್ಯನಿಗೆ ಸುದ್ದಿ ಮುಟ್ಟಿಸುತ್ತಾನೆಂದು ಬೈಲ್ ರವಿಯನ್ನು ನಡುರಸ್ತೆಯಲ್ಲಿ ಕೊಚ್ಚಿ ಹಾಕಿತು.



ಕೋತಿ ರಾಮ

ಅಲ್ಲಿಗೆ ಕಾಮಾಕ್ಷಿಪಾಳ್ಯದಲ್ಲಿ ಎರಡು ಹೆಣ ಬಿದ್ದಂತಾಗಿತ್ತು. ಗೋಪಾಲಯ್ಯ ಮತ್ತು ಮಚ್ಚ ಸಮಸಮನಾಗಿ ತಲಾ ಒಂದೊಂದು ಕೊಲೆ ಕೇಸಿನಲ್ಲಿ ಜೈಲು ಕಂಡಿದ್ದರು. ಏನೂ ಇಲ್ಲದ, ನಿರ್ಗತಿಕನಾಗಿದ್ದ ಒಂದಾನೊಂದು ಕಾಲಕ್ಕೆ ಗೋಪಾಲಯ್ಯನ ಹಂಗಿನಲ್ಲೇ ಬದುಕುತ್ತಿದ್ದ ಮಚ್ಚ ಉರ್ಫ್ ಮಂಜುನಾಥ್ ಅಂಥ ಸಣ್ಣ ಅವಧಿಯಲ್ಲೇ ಗೋಪಾಲಯ್ಯನನ್ನೇ ಮೀರಿಸುವಂಥ ದೊಡ್ಡ ಪಡೆಯನ್ನೇ ಕಟ್ಟಿಬಿಟ್ಟಿದ್ದ. ಆತನಿಗೆ ಅಷ್ಟೊಂದು ಆರ್ಥಿಕ ಶಕ್ತಿ ಬಂದದ್ದಾದರೂ ಹೇಗೆಂದು ಗೋಪಾಲಯ್ಯ ತಲೆ ಕೆಡಿಸಿಕೊಂಡ. ಅದಕ್ಕೆ ಕಾರಣವಾದದ್ದು ಕೇಬಲ್ ವಾರ್!

ಆಗ ಸಣ್ಣಕ್ಕಿಬೈಲಿನಲ್ಲಿ ಅಶ್ವಿನಿ ಕೇಬಲ್ ನೆಟ್‌ವರ್ಕ್ ನಡೆಸಿಕೊಂಡಿದ್ದವನು ಗೋವಿಂದ. ಸ್ವಭಾವತಃ ಆತ ರೌಡಿಯಲ್ಲ, ಆತನಿಗೆ ಕೇಬಲ್ ಹಾಕಿ ಕೊಟ್ಟಿದ್ದು ವಿಜಯನಗರದ ಮತ್ತೊಬ್ಬ ಕೇಬಲ್ ಕುಳ ದ್ವಾರಕ ಎಂಬಾತ. ಈತನೂ ಒಂದಾನೊಂದು ಕಾಲದ ಪಂಟರ್. ಚೋಳೂರುಪಾಳ್ಯದ ನಾಗ ಉರ್ಫ್ ನಾಗರಾಜ ಎಂಬಾತನೂ ಈತನ ಬೆನ್ನಿಗಿದ್ದ ಇವರಿಬ್ಬರೂ ಸೇರಿ ಸಣ್ಣಕ್ಕಿಬೈಲಿನ ಗೋವಿಂದನ ಕೇಬಲ್ ವಶಪಡಿಸಿಕೊಳ್ಳಲು ಮುಂದಾಗಿ ಒಂದೆರಡು ಬಾರಿ ಗೋವಿಂದನಿಗೆ ವಾರ್ನ್ ಕೂಡ ಮಾಡಿದ್ದರು. ಹಾಗಂತ ಗೋವಿಂದ ಜಗ್ಗಲಿಲ್ಲ, ಆತ ನೇರವಾಗಿ ಮಚ್ಚನ ಜೊತೆ ಡೀಲ... ಕುದುರಿಸಿದ. ನನ್ನ ಕೇಬಲ್ ಉಳಿಸಿಕೊಟ್ಟರೆ ನೀನು ನನ... ಫಿಫ್ಟೀ ಪರ್ಸೆಂಟ್ ಪಾರ್ಟ್‌ನರ್ ಎಂದು ಮಚ್ಚನನ್ನ... ಒಪ್ಪಿಸಿದ.

ಮಚ್ಚನಿಗೂ ಅದೇ ಬೇಕಾಗಿತ್ತು, ದ್ವಾರಕ... ಚೋಳೂರುಪಾಳ್ಯದ ನಾಗ ಮುಂತಾದ ಇಪ್ಪತ್ತು ಮಂದಿ... ಹುಡುಗರ ದಂಡು ಇನ್ನೇನು ಸಣ್ಣಕ್ಕಿಬೈಲಿನ ಮೇಲೆ... ದಂಡೆತ್ತಿ ಬಂದು ಗೋವಿಂದನ ಕೇಬಲ್ ವಶಪಡಿಸಿಕೊಳ್ಳ... ಬೇಕೆನ್ನುವಷ್ಟರಲ್ಲಿ ಮಚ್ಚ ಎಂಥಾ ಸೈನ್ಯ ಸೇರಿಸಿಬಿಟ್ಟನೆಂದರೆ... ಪೆದ್ದಗುಂಡ, ಕಲಗಚ್ಚು ಸೀನ, ಹಂಡೆಕುಮಾರ, ಕೋಳಿ... ಶಿವಾ, ಕೋತಿರಾಮ, ಸೂರಿ, ತುರೆ ಸತೀಶ ಮುಂತಾದ... ಅಪಾಯಕಾರಿ ಹುಡುಗರಿದ್ದ ದೊಡ್ಡ ಹಿಂಡೇ ಗೋವಿಂದನ... ಕೇಬಲ್ ಅಡ್ಡೆಯ ಸುತ್ತ ಜಮೆಯಾಯಿತು.


ಈ ಬಗ್ಗೆ ಯಾವುದೇ ಮುನ್ಸೂಚನೆ ಯಿಲ್ಲದೆ... ಇಪ್ಪತ್ತು ಮಂದಿ ಚೋಳೂರುಪಾಳ್ಯದ ಹುಡುಗರ ಜೊತೆ... ಬಂದಿದ್ದ ದ್ವಾರಕ ಮತ್ತು ನಾಗರನ್ನು ಮಚ್ಚನ ಗ್ಯಾಂಗ್... ಸಣ್ಣಕ್ಕಿ ಬೈಲಿನ ಗಲ್ಲಿಗಳಲ್ಲಿ ಅಟ್ಟಾಡಿಸಿಕೊಂಡು ಬಡಿದು... ಹಾಕಿತು. ಪ್ರಾಣ ಉಳಿದದ್ದೇ ಹೆಚ್ಚು ಎಂಬಂತೆ ಓಡಿಹೋದ... ದ್ವಾರಕನ ಪಡೆ ಮತ್ತೆಂದೂ ಸಣ್ಣಕ್ಕಿ ಬೈಲಿನತ್ತ ತಲೆ ಹಾಕಲಿಲ್ಲ... ಅಲ್ಲಿಗೆ ಗೋವಿಂದನ ಅಶ್ವಿನಿ ಕೇಬಲ್ಲಿಗೆ ಮಚ್ಚ ಅಧಿಕೃತ... ಪಾರ್ಟ್‌ನರ್ ಆಗಿಬಿಟ್ಟ. ಅಕ್ಕಪಕ್ಕದ... ವೃಷಭಾವತಿನಗರ, ವಿನಾಯಕ ಲೇಔಟ್... ಚೆನ್ನಿಗಪ್ಪ ಲೇಔಟ್, ಕಾವೇರಿಪುರದ... ಸಣ್ಣಪುಟ್ಟ ಕೇಬಲ್ ಆಪರೇಟರುಗಳೇ... ಥಂಡಾ ಹೊಡೆದು ತಮ್ಮೆಲ್ಲ ಕೇಬಲ್... ದಂಧೆಗಳನ್ನು ಮಚ್ಚನಿಗೆ ಮಾರಿಬಿಟ್ಟರು...

ಸರಿ ಸುಮಾರು ಸಾವಿರದೈನೂರು... ಮನೆಗಳ ಕೇಬಲ್ ನೆಟ್‌ವರ್ಕ್ ಅಂದರೆ... ಕಮ್ಮಿಯೆ? ತಿಂಗಳಿಗೆ ಆದೇ ಎರಡು... ಕಾಲು ಲಕ್ಷದ ಆದಾಯ!

ಇದರಲ್ಲಿ ಅರ್ಧ ಅಂದರೆ ಮಚ್ಚನಿ... ತಿಂಗಳೊಂದಕ್ಕೆ ಸರಿಸುಮಾರು ಒಂದು... ಲಕ್ಷದ ನೆಟ್ ಇನ್‌ಕಮ್. ಒಂದೇ ಒಂದು... ಸಣ್ಣ ಹೊಡೆದಾಟದಿಂದಾಗಿ ಮಚ್ಚ... ತಿಂಗಳೊಂದಕ್ಕೆ ಲಕ್ಷ ರೂಪಾಯಿಯ ಒಡೆಯನಾಗಿದ್ದ... ಬಹುಪಾಲು ದುಡ್ಡನ್ನೆಲ್ಲ ಹುಡುಗರಿಗೇ ತಿನ್ನಿಸುತ್ತಿದ್ದ ಕ್ರಮೇಣ... ಲಗ್ಗೆರೆ, ಸುಂಕದ ಕಟ್ಟೆ, ಗೊಲ್ಲರಹಟ್ಟಿ, ಕಡಬಗೆರೆ ಮುಂತಾದ... ಏರಿಯಾಗಳ ಲ್ಯಾಂಡ್ ಉಸಾಬರಿಗೂ ಕೈಯಿಟ್ಟ. ಮಚ್ಚನ... ಏಳಿಗೆಯನ್ನು ಕಂಡೇ ಗೋಪಾಲಯ್ಯ ದಂಗಾಗಿ ಹೋದ...

ಇದಕ್ಕೆ ನಾವು ಊರಿನ ಹಿರಿಯರು ತಾನೇ ಹೇ... ಹೊಣೆ? ಎನ್ನುತ್ತಾರೆ ಮಾಜಿ ಛೇರ್ಮನ್ ಕಾಳೇಗೌಡ.

Of course ಕಾಮಾಕ್ಷಿಪಾಳ್ಯವಷ್ಟೇ ಅಲ್ಲ; ಇಡೀ... ಬೆಂಗಳೂರೇ ತನ್ನ ಅಂಕೆ ಮೀರಿ ಬೆಳೆಯುತ್ತಿತ್ತು, ಛೇರ್ಮನ್... ಕಾಳೇಗೌಡರ ತಂದೆ ಚೆನ್ನಿಗಪ್ಪ ಕೂಡ ಇದೇ ಕಾಮಾಕ್ಷಿಪಾಳ್ಯದ... ಛೇರ್ಮನ್ ಆಗಿದ್ದರು. ಅವರ... ಪಾಲಿನ ಜಮೀನೆಲ್ಲ ಎಂದೋ... ಬಕರಿಯಾಗಿ ಹೋಗಿತ್ತು, ಇದ... ಇಬ್ಬರು ಗಂಡು ಮಕ್ಕಳ ಪೈಕಿ... ಹಿರಿಯವನೇ ಕೆ. ನಟರಾಜ್... ಕ್ರಮೇಣ ಈತನೇ ಫೈನಾನ್ಸಿಂಗ್... ಮತ್ತು ಲ್ಯಾಂಡ್ ಡೀಲು ಮಾಡಿ... ಬದುಕಬೇಕಾದ ಅನಿವಾರ್ಯತೆ... ಬಂದೊದಗಿತ್ತು, ಕಾಮಾಕ್ಷಿಪಾಳ್ಯವಷ್ಟೇ... ಅಲ್ಲ, ಅಕ್ಕಪಕ್ಕದ ಸುಂಕದಕಟ್ಟೆ... ಲಗ್ಗೆರೆ, ಮಾಳಗಾಳ, ಗೊಲ್ಲರಹಟ್ಟಿ... ಕುರುಬರಹಳ್ಳಿ, ಹೆಗ್ಗನಹಳ್ಳಿ... ನಾಗರಬಾವಿ ಮುಂತಾದ ಏರಿಯಾ... ಗಳೆಲ್ಲ ಯಾವುದೋ ಅದೃಶ್ಯ... ರೋಗವೊಂದಕ್ಕೆ ತುತ್ತಾಗುತ್ತಿದ್ದದ್ದು... ಕೊನೆಯ ಛೇರ್ಮನ್ ಕಾಳೇಗೌಡರಿಗೆ ಹೇಗೆ ತಾನೆ... ಗೊತ್ತಾಗಲು ಸಾಧ್ಯವಿತ್ತು?



ಗೋಪಾಲಯ್ಯ

(ಮುಂದಿನ ವಾರಕ್ಕೆ...)

ಬೆಳಗಾಂ ಅಧಿಕಾರಿ ಧೂಮಾಳೆಯಿಂದ ಯುವಕನ ಮೇಲೆ ಅತ್ಯಾಚಾರ

"ಇದೊಂದು ಹೇವರಿಕೆ ಹುಟ್ಟಿಸುವಂತಹ ಅತ್ಯಾಚಾರ ಘಟನೆ. ಇದಕ್ಕೆ ಬಲಿಯಾದವನು ಬೆಳಗಾಂ ಜಿಲ್ಲಾ ಪಂಚಾಯಿತಿಯ ಜಲ ನಿರ್ಮಲ ಯೋಜನಾ ವಿಭಾಗದ ಕಂಪ್ಯೂಟರ್ ಆಪರೇಟರ್ ಮಹೇಶ್ (ಹೆಸರು ಬದಲಿಸಿದೆ). ತನ್ನ ವಿಕೃತ ಲೈಂಗಿಕ ತೀಟೆಗಳಿಗೆ ಈ ಅಮಾಯಕ ಹುಡುಗನನ್ನು ಬಳಸಿಕೊಂಡವನು ಎ.ಜೆ. ಧೂಮಾಳೆ ಎಂಬ ಕೆಎಎಸ್ ಅಧಿಕಾರಿ.

ಈ ವಿಕೃತ ಘಟನೆಯ ಇನ್ನೊಂದು ವಿಶೇಷ ಏನೆಂದರೆ ಬೇರೆಲ್ಲಾ ಅತ್ಯಾಚಾರ ಪ್ರಕರಣಗಳಲ್ಲಿ ನೊಂದವರು ದೂರು ಕೊಡುತ್ತಾರೆ. ಆರೋಪಿಗಳು ನಾಪತ್ತೆಯಾಗುವುದು ಒಂದು ವಾಡಿಕೆ ಆದರೆ ಅತ್ಯಾಚಾರಿ ಧೂಮಾಳೆ ಈಗಲೂ ಧಿಂರಂಗ ಅಂತಾ ಓಡಾಡಿಕೊಂಡೇ ಇದ್ದಾನೆ. ಆದರೆ ಅತ್ಯಾಚಾರಕ್ಕೆ ತುತ್ತಾದ ಇವನ ಕಚೇರಿಯ ನೌಕರ ಭಯಭೀತನಾಗಿ ತಲೆ ಮರೆಸಿಕೊಂಡಿದ್ದಾನೆ.

ಈ ಧೂಮಾಳೆಯ ಅಸಲಿಯತ್ತೇ ಇದು.

ಇವನ ಹಲ್ಕಟ್‌ಗಿರಿ, ಭ್ರಷ್ಟಾಚಾರಗಳೆಲ್ಲಾ ಇಡೀ ಲೋಕಕ್ಕೆ ಗೊತ್ತಿದ್ದರೂ ಜಿಲ್ಲೆಯ ನಾಯಕರಾದ ರಮೇಶ್ ಜಿಗಜಿಣಗಿ, ಜಿಲ್ಲಾ ಉಸ್ತುವಾರಿ ಸಚಿವ ಶಶಿಕಾಂತ ನಾಯಕ್‌ನು ಗೊತ್ತಿಲ್ಲದವರಂತೆ ನಾಟಕ ಆಡುತ್ತಿರುತ್ತಾರೆ. ಬೆಳಗಾಂನ ಕೆಲ ಪತ್ರಕರ್ತರಿಗಂತೂ, ಧೂಮಾಳೆ ಆಗಾಗ್ಗೆ ಏರ್ಪಡಿಸುವ ಡ್ರಿಂಕ್ಸ್ ಪಾರ್ಟಿಗಳಿಗೆ ಹೋಗಿ ಗುಂಡು ಹಾಕಿ ತುಂಡು ಕಡಿದುಬಂದಿರುವ ಋಣವಿದೆ. ಹಾಗಾಗಿ ಧೂಮಾಳೆಯ ಸುತ್ತಾ ಎಷ್ಟೇ ಧೂಳೆದ್ದರೂ ಒಂದಕ್ಷರವನ್ನೂ ವರದಿ ಮಾಡುತ್ತಿಲ್ಲ.


ಜಿಲ್ಲಾಧಿಕಾರಿ ಶಾಲಿನಿ


ಇಷ್ಟಕ್ಕೂ ನಡೆದ ಘಟನೆ ಏನೆಂದರೆ ಫೆಬ್ರವರಿ 8ರ ಗುರುವಾರ ಈ ಧೂಮಾಳೆ ಯಾವುದೋ ಕೆಲಸದ ಮೇಲೆ ಊರೂರು ಅಲೆಯುತ್ತಾ ರಾತ್ರಿ ಹಿಡಕಲ್ ಡ್ಯಾಂ ಮೇಲಿರುವ ಹುನ್ನೂರ್ ಐಬಿಗೆ ಬಂದಿದ್ದಾನೆ. ಅವತ್ತು ಜೊತೆಯಲ್ಲಿ ತನ್ನ ಕಚೇರಿಯ ಕಂಪ್ಯೂಟರ್ ಆಪರೇಟರ್ ಮಹೇಶ್‌ನನ್ನೂ ಕರೆತಂದಿದ್ದಾನೆ. ರಾತ್ರಿಯಾಯಿತೆಂದರೆ ನಾಲ್ಕು ಪೆಗ್ ಏರಿಸಿ ವಿಕೃತ ಚೇಷ್ಟೆಗಳಿಗೆ ಅಣಿಯಾಗುವುದು ಧೂಮಾಳೆಯ ಪ್ರವೃತ್ತಿ. ನಿಷ್ಪಾಪಿ ಮಹೇಶ್‌ಗೆ ಅದ್ಯಾವುದರ ಅರಿವೇ ಇಲ್ಲದೆ ಸಾಹೇಬರು ಕರೆದರು ಅಂತಾ ಅದಲ್ಲವೇ ಭಾಗ್ಯ ಎಂದುಕೊಂಡು ಕುರಿಯಂತೆ ಹೋಗಿದ್ದಾನೆ. ಹಾಗೆ ನೋಡಿದರೆ ಈ ಮಹೇಶ್ ನೇಮಕವಾಗಿರುವುದು ಕಚೇರಿಯ ಕಂಪ್ಯೂಟರ್ ಆಪರೇಟರಾಗಿ. ಆದರೆ ಸ್ಮಾರ್ಟಾಗಿದ್ದ ಮಹೇಶ್‌ನನ್ನು ಕಚೇರಿ ಬಿಡಿಸಿ ಜೊತೆಯಲ್ಲಿ ಕರೆದುಕೊಂಡು ಊರೂರು ಅಲೆಯುತ್ತಿದ್ದ ಧೂಮಾಳೆ.

ಅದೇ ರೀತಿ ಫೆಬ್ರವರಿ 8 ರಂದು ಈ ಸಾಹೇಬ-ನೌಕರ ಜೋಡಿ ಹುನ್ನೂರ್ ಡ್ಯಾಂಗೆ ಬಂದಿಳಿದಿದೆ. ಜೊತೆಯಲ್ಲಿದ್ದ ಡ್ರೈವರನಿಗೆ ಜೀಪ್‌ನಲ್ಲೇ ನಿದ್ದೆ ಮಾಡಲು ಹೇಳಿ ಐಬಿ ರೂಂ ಬಾಗಿಲು ಹಾಕಿ 'ನಿನ್ ಪ್ಯಾಂಟ್ ಬಿಚ್ಚು' ಎಂದನಂತೆ ಹಲ್ಕಟ್ ಧೂಮಾಳೆ. ಮಾರನೆ ಬೆಳಗ್ಗೆ ಎಂದಿನಂತೆ. ಕಚೇರಿಗೆ ಬಂದ ಮಹೇಶ್ ಮುಖದಲ್ಲಿ ಪ್ರೇತಕಳೆ ಕಂಡು ಸಹೋದ್ಯೋಗಿಗಳು ಗಾಬರಿಯಾಗಿದ್ದಾರೆ. ನಂತರ ವಿಚಾರಿಸಿದಾಗ ಧೂಮಾಳೆ ಸಾಹೇಬರ ವಿಕೃತ ಬುದ್ಧಿ ಏನೆಂಬುದು ಎಲ್ಲರಿಗೂ ಗೊತ್ತಾಗಿದೆ. ರೊಚ್ಚಿಗೆದ್ದ ನೌಕರರು ಪ್ರತಿಭಟಿಸಬೇಕೆನ್ನುವಷ್ಟರಲ್ಲೇ ಈಗ ಮಹೇಶ್ ನಾಪತ್ತೆಯಾಗಿಬಿಟ್ಟಿದ್ದಾನೆ. ತನ್ನ ಬಣ್ಣ ಬಯಲಾದರೆ ಗತಿ ಏನೆಂದು ಹೆದರಿದ ಧೂಮಾಳೆ ಕೆಲ ಪುಂಡರನ್ನು ಮಹೇಶ್ ಮನೆಗೇ ಕಳುಹಿಸಿ ಧಮಕಿ ಹಾಕಿಸಿ ಊರು ಬಿಡಿಸಿದ್ದಾನೆಂಬ ಅನುಮಾನಗಳಿವೆ.

ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಫಕೀರಪ್ಪ ಗೋಳಬಾಳ್ ಎಂಥ ನಾಲಾಯಕ್ ಮನುಷ್ಯನೆಂದರೆ ತನ್ನ ಕಚೇರಿಯಲ್ಲೇ ಇಂಥ ಅಸಹ್ಯಗಳು ನಡೆಯುತ್ತಿದ್ದರೂ ತಲೆ ಕೆಡಿಸಿಕೊಂಡಿಲ್ಲ.

[illegible]

ಬೆಳಗಾಂ ಜಿಲ್ಲೆಯ ಚಿಕ್ಕೋಡಿಯ ಸದಲಗಾ ಗ್ರಾಮದವನಾದ ಎ.ಜೆ. ಧೂಮಾಳೆ ಈಗ್ಗೆ 20 ವರ್ಷಗಳ ಹಿಂದೆ KAS ಪಾಸು ಮಾಡಿ ಕೆಲಕಾಲ ತಹಶೀಲ್ದಾರನಾಗಿದ್ದ. ಧೂಮಾಳೆ ಆಗೆಲ್ಲಾ ಸಂಸದ ಬಿ. ಶಂಕರಾನಂದರ ಹೆಸರು ಬಳಸಿಕೊಂಡು ಮೆರೆಯುತ್ತಿದ್ದ. ಆಮೇಲೆ ಬಡ್ತಿಯಾಗಿ ಕಾರವಾರ ಅಸಿಸ್ಟೆಂಟ್ ಕಮಿಷನರಾದ. ಒಮ್ಮೆ ಕುಡಿದು ತಟ್ಟಾಡುತ್ತಾ ಬಸ್ ಸ್ಟ್ಯಾಂಡಿನಲ್ಲೇ ಯಾರೋ ಹೆಂಗಸೊಬ್ಬಳನ್ನು ಹಿಡಿದುಕೊಳ್ಳಲು ಹೋದಾಗ ಸಾರ್ವಜನಿಕರು ಹಿಡಿದು ಸಮಾ ಏಟು ಕೊಟ್ಟಿದ್ದರು. ಅವತ್ತು ಸಸ್ಪೆಂಡಾಗುವುದರಿಂದ ಬಚಾವಾಗಿದ್ದ ಧೂಮಾಳೆ ಮತ್ತೆ ಬಂದು ಬೆಳಗಾವಿಗೇ ಒಕ್ಕರಿಸಿಕೊಂಡ. ಜಲ ನಿರ್ಮಲ ಯೋಜನೆಯ ಜಿಲ್ಲಾ ಪ್ರಾಜೆಕ್ಟ್ ಮ್ಯಾನೇಜರ್ ಆದ. ಇವನು ಕೆಲಸ ಮಾಡುತ್ತಿದ್ದುದು ಜಲ ನಿರ್ಮೂಲನೇ ಆದರೂ ಮನಸ್ಸು ದೇಹ ಮಾತ್ರ ಗಲೀಜೇ...!


ಎ.ಜೆ.ಧೂಮಾಳೆ

ನಿತ್ಯ ಸಂಜೆ ಆಗುತ್ತಿದ್ದಂತೆ ಬಾಟಲ್ ಓಪನ್ ಮಾಡಿ ಕೂರುವುದು, ಬಗಲಿಗೆ ಯಾರನ್ನಾದರೂ ಕರೆಸಿ ಕೂರಿಸಿಕೊಳ್ಳುವುದೇ ಇವನ ದಿನಚರಿಯಾಗಿದೆ. ಇನ್ನು ಹಗಲು ಹೊತ್ತಾದರೂ ನೆಟ್ಟಗೆ ಡ್ಯೂಟಿ ಮಾಡುತ್ತಾನಾ ಎಂದರೆ ಅಲ್ಲೂ ಭ್ರಷ್ಟಾಚಾರದ ಗಬ್ಬುನಾತವೆ. ನಕಲಿ ಟಿಎ ಬಿಲ್ಲು, ಬೋಗಸ್ ಬಿಲ್ಲುಗಳು, NGO ಗಳಿಂದ ಹಫ್ತಾ ವಸೂಲಿಗಳೇ ಇವನ ನಿತ್ಯ ಕಾಯಕ. ಹೀಗೆ ಹಣ ಕದ್ದೂ ಕದ್ದೂ ಹೆಂಡತಿ ಮೈಮೇಲೆ ಕೇಜಿಗಟ್ಟಲೆ ಬಂಗಾರ ಹೇರಿದ್ದಾನೆ. ನಾದಿನಿಯರಿಬ್ಬರಿಗೂ ಚಿನ್ನ ವಜ್ರ ಕೊಡಿಸಿ ಹುಟ್ಟೂರು ಸದಲಗಾ ಗ್ರಾಮದಲ್ಲೇ ನೂರಾರು ಎಕರೆ ತೋಟ ಮಾಡಿಕೊಂಡಿದ್ದಾನೆ. ಇದೇ ಜಮೀನನ್ನು ಲೆವೆಲ್ ಮಾಡಿಸಿ, ಬೋರ್‌ವೆಲ್, ರಸ್ತೆ ಎಲ್ಲವನ್ನು ವಿವಿಧ ಸರ್ಕಾರಿ ಇಲಾಖೆಗಳಿಂದಲೇ ಮಂಜೂರು ಮಾಡಿಸಿಕೊಂಡಿದ್ದಾನೆ. ಈಗ ಬೆಳಗಾವಿ ಹೊರವಲಯದ ಹನುಮಾನ್ ನಗರದಲ್ಲಿ ಭರ್ಜರಿ ಬಂಗಲೆಯನ್ನು ಎಬ್ಬಿಸಿದ್ದಾನೆ.

ಅಂದಹಾಗೆ ಇಂಥ ಕಡುಭ್ರಷ್ಟ ಹಗಲು ಹೊತ್ತೇ ಹಲ್ಕಟ್‌ಗಿರಿ, ವಿಕೃತ ಲೈಂಗಿಕ ಚೇಷ್ಟೆಗಳನ್ನು ನಡೆಸುವ ಕೆಎಎಸ್ ಅಧಿಕಾರಿ ಧೂಮಾಳೆಗೆ ಒಮ್ಮೆ ಸನ್ಮಾನವೂ ಆಗಿತ್ತು.

ಮಾಡಿದವರು ದಲಿತ ಸಂಘಟನೆಯವರು! ಇದು ಪತ್ರಿಕೆಗಳಲ್ಲೂ ಫೋಟೋದೊಂದಿಗೆ ಪ್ರಕಟವಾಗಿತ್ತು. ಬರೆದವರು ಧೂಮಾಳೆಯ ಗುಂಡು ಪಾರ್ಟಿಗೆ ತಪ್ಪದೆ ಹೋಗುವ ಪತ್ರಕರ್ತರು!!

ಇವರೆಲ್ಲರೂ ಧೂಮಾಳೆಯ ಜಲಪಾನ ಮಾಡುತ್ತಿರುವುದರಿಂದಲೇ ಮಹೇಶ ಅತ್ಯಾಚಾರ ಪ್ರಕರಣವು ವಿಜಯ ಕರ್ನಾಟಕ ಬಿಟ್ಟು ಬೇರೆ ಯಾವ ಪತ್ರಿಕೆಗಳಲ್ಲೂ ವರದಿಯಾಗಲೇ ಇಲ್ಲ.


ಜಿಲ್ಲಾಧಿಕಾರಿ ಶಾಲಿನಿ ರಜನೀಶ್ ಕೂಡ 'ಗ್ರಾಮ ವಾಸ್ತವ್ಯ'ದ ಡ್ರಾಮಾ ಮಾಡಿಕೊಂಡು ತಿರುಗುತ್ತಿದ್ದಾರೆಯೇ ವಿನಃ ಧೂಮಾಳೆಯಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿಲ್ಲ.

-ಮೇಘರಾಜ್

ಖೋಟಾನೋಟಿನ ದಂಧೆಯಲ್ಲಿ ಅಸಲಿ ನೋಟಿನ ಆಸೆ!

ಈತ ಪೂರಾ ಸರ್ವಿಸ್‌ನಲ್ಲಿ ಮಾಡಿದ್ದು ಅಷ್ಟರಲ್ಲೇ ಇದೆ. ಈಗ ನಿವೃತ್ತಿ ಹೊಂದುವ ಮುನ್ನ ಉಳಿದಿರುವ ಸಮಯದಲ್ಲಿ ಸಾಧ್ಯವಾದಷ್ಟನ್ನು ಗಳಿಸುವ ಉದ್ದೇಶದಿಂದ ಸಿಕ್ಕಿದ್ದನ್ನೆಲ್ಲ ಮುಕ್ಕುತ್ತಿದ್ದಾನೆ. ಇವನೇ ಹಾವೇರಿಯ ಪ್ರಭಾರಿ ಎಸ್‌ಪಿ ಹೊನ್ನಾಳ.

ಹಿಂದಿದ್ದ ಎಸ್‌ಪಿ ಸಿದ್ದಣ್ಣ ಇದ್ದಷ್ಟು ದಿನ ತಿಂದು, ಆಕಳಿಸಿ ಕೊಪ್ಪಳಕ್ಕೆ ಹಾರಿ ಹೋದ. ಆದರೆ ಅದಕ್ಕೂ ಮುನ್ನ ತನ್ನ ಸಾಧನೆ ಎಂಬುದೊಂದು ಹಾವೇರಿ ಜಿಲ್ಲೆಯಲ್ಲಿ ಇರಲಿ ಅಂತ ಇನ್ನೊಂದು ತಂದೂರ್ ಡಾಬಾ ತೆರೆದ. ಅಷ್ಟು ಬಿಟ್ಟು ಈ ಸಿದ್ದಣ್ಣನ ಸಾಧನೆ ಎಂಬುದು ಬೇರೇನೂ ಇಲ್ಲ. ಸಿದ್ದಣ್ಣ ಕೊಲಗಿದ್ದ ತಡ ಹೆಚ್ಚುವರಿ ಎಸ್‌ಪಿ ಹೊನ್ನಾಳ ಆತ ಬಿಟ್ಟು ಹೋದ ಖಾಲಿ ಜಾಗಕ್ಕೆ ವಕ್ಕರಿಸಿಬಿಟ್ಟ. ಕೊಪ್ಪಳದಿಂದ ಹಾವೇರಿಗೆ ಬರಬೇಕಿದ್ದ ಐ.ಪಿ.ಎಸ್ ಅಧಿಕಾರಿ ಪದ್ಮನಯನ "ಅಲ್ಲಿ ಇಂಕಂ ಕಡಿಮೆ. ಸಿದ್ದಣ್ಣ ಹಾಳು ಮಾಡಿರೋದನ್ನು ರಿಪೇರಿ ಮಾಡುವುದೇ ಒಂದು ದೊಡ್ಡ ಕೆಲಸ. ಸಾವಿಲ್ಲದೆ ಹೆಣವಾಗುವ ಉಸಾಬರಿ ನನಗಂತೂ ಬೇಡ" ಎಂದು ರಾಯಚೂರಿಗೆ ಜಿಗಿದದ್ದೂ ಹೊನ್ನಾಳನಿಗೆ ದಾರಿ ಮಾಡಿಕೊಟ್ಟಂತಾಯಿತು.


ಅರವಿಂದ

[illegible]

ಹಾವೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಬರಲು ಸದ್ಯ ಯಾರೂ ಒಪ್ಪುತ್ತಿಲ್ಲವಂತೆ. ಸಿದ್ದಣ್ಣ ಹೋಗಿ [illegible] ತಿಂಗಳಾಗುತ್ತಾ ಬಂದರೂ ಈ ವಿಷಯದಲ್ಲಿ [illegible] ಮಂತ್ರಿ ಸಿ. ಎಂ. ಉದಾಸಿಯದ್ದು ಎಂದಿನ [illegible]. ಈ ಬಗ್ಗೆ "ನಾಸಿರುವ ತನಕ ಯಾರೂ ಬರುವುದು ಬೇಡ ಪ್ರಭುವೇ" ಎಂದು ಹೊನ್ನಾಳ ಹೇಳಿರಬಹುದೋ ಅಥವಾ "ಸಿದ್ದಣ್ಣನಿಗಿಂತ ಹತ್ತು ಪರ್ಸೆಂಟ್ ಜಾಸ್ತಿ ಕೊಡುತ್ತೇನೆ. ಫೆಬ್ರವರಿ ಮುಗಿಯುವವರೆಗೆ ತಡೆದುಕೊಳ್ಳಿ" ಎಂದಿರಬಹುದೋ ಎಂದು ಹಾವೇರಿಗರು ಚರ್ಚಿಸುತ್ತಿದ್ದಾರೆ.

ಹೊನ್ನಾಳ ಚಾರ್ಜ್ ವಹಿಸಿಕೊಂಡ ಮೇಲೆ ಜಿಲ್ಲೆಯ ಪೊಲೀಸರಲ್ಲಿ ಎನರ್ಜಿ ಹೆಚ್ಚಾಗಿದೆ. ಹೆದ್ದಾರಿ ಉದ್ದಕ್ಕೂ ಜೀಪು ನಿಲ್ಲಿಸಿಕೊಂಡು ಲಾರಿ ತೋರಿಸುವ ಕಾಯಕವನ್ನು ಎಲ್ಲಾ ತಾಲೂಕ್ ಇನ್ಸಪೆಕ್ಟರಗಳು ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ. ಈ ದಕ್ಷ ಕಾರ್ಯಾಚರಣೆಯಿಂದಾಗಿ ತಮ್ಮ ಸಾಹೇಬರ ಗಲ್ಲಾ ಪೆಟ್ಟಿಗೆಗೆ ವಾರಕ್ಕೊಮ್ಮೆ ಕಾಣಿಕೆ ಹಾಕಿ ಪಾವನರಾಗುತ್ತಿದ್ದೇವೆ ಎಂದು ಸಂತೋಷಪಡುತ್ತಿದ್ದಾರೆ.

ರಾಣೆಬೆನ್ನೂರಿನ ಡಿ.ವೈ.ಎಸ್.ಪಿ ಅಗಡಿ, ಹಾವೇರಿಯ ಹೊಸಮನಿ, ಸವಣೂರಿನ ಪೂಜಾರ, ಹಾನಗಲ್ಲಿನ ಅರವಿಂದ, ಶಿಗ್ಗಾಂವಿಯ ವೇಣುಗೋಪಾಲ ಎಲ್ಲರೂ ನಿವೃತ್ತಿಗೆ ಹತ್ತಿರವಿರುವ ತಮ್ಮ ಸಾಹೇಬರ ದಿಲ್ ಖುಷ್ ಮಾಡಲು ಹಗಲಿರುಳೂ ಶ್ರಮಿಸುತ್ತಿದ್ದಾರೆ. ಇದರ ಪ್ರತಿಫಲವೆಂಬಂತೆ, ಜಿಲ್ಲೆಯಲ್ಲಿ ಕ್ರೈಂ ಸಂಖ್ಯೆ ಹೆಚ್ಚಾದಂತೆ ಹಣದ ಹರಿವೂ ಹೆಚ್ಚಾಗುವುದು ಈ ಖಾಕಿ ಜನರಿಗೆ ಹಬ್ಬವೇ ಆಗಿದೆ.

[illegible]

ಸಿದ್ದಣ್ಣನ ಕಾಲದಲ್ಲಿ ಸೈಲೆಂಟಾಗಿದ್ದ ಕ್ರೈಂ ಬೀಟ್ ಆಗಿಹೋಗಿದ್ದೆ ತಡ ಫಾಸ್ಟ್ ಆಯಿತು. ಇವರ ಹುರುಪನ್ನು ನೋಡಿದರೆ ಒಂದೇ ತಿಂಗಳಲ್ಲಿ ಎಲ್ಲಾ ಪಾತಕಿಗಳಲ್ಲಿ ನಡುಕ ತಂದು ಬಿಡುತ್ತಾರೆ, ಖೋಟಾನೋಟಿನ ಭಾರೀ ಜಾಲವನ್ನು ಪತ್ತೆ ಮಾಡುತ್ತಾರೆ ಎಂದೆಲ್ಲ ಜನ ಭಾವಿಸಿದ್ದರು. ಆದರೆ ಅದಕ್ಕೆ ತದ್ವಿರುದ್ಧವಾಗಿ, ಖೋಟಾನೋಟಿನ ಕೇಸನ್ನೇ ತಮ್ಮ ಹಾಸಿಗೆ ಕೆಳಗೆ ಹಾಕಿ ನಿದ್ರಿಸಲಾರಂಭಿಸಿದರು. ಅದಕ್ಕೆ ಸರಿಯಾಗಿ ಈ ಜಾಲದಲ್ಲಿ ಪ್ರಮುಖ ಆರೋಪಿಯಾಗಿದ್ದ ಹಾವೇರಿಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚೆನ್ನವೀರ ಸ್ವಾಮಿ ಹಿರೇಮಠ ನ್ಯಾಯಾಲಯದಿಂದ ಬೇಲ್ ಪಡೆದು ಈಗ "ಬಚಾವಾದೆನಲ್ಲ, ಅದೇ ಸಾಕೀಗ" ಎಂದು ನಿಟ್ಟುಸಿರು ಬಿಡುತ್ತಿದ್ದಾನೆ.


ಉದಾಸಿ

ಹಾವೇರಿ

"ಕಾಂಗ್ರೆಸ್ಸಿನ ಚೆನ್ನವೀರ ಸ್ವಾಮಿ ಹಿರೇಮಠ ಮತ್ತು ಸಾಲೀಮಠ ಹಾಗೂ ಕರೀಂಲಾಲನ ಶಿಷ್ಯ ಅಸ್ಲಂನ ಪರಮ ಭಂಟ ಮತ್ತು ಖೋಟಾನೋಟಿನ ದಿಸೈನರ್ ಶರಣ ಹಿರೇಮಠನನ್ನು ಹಿಡಿದರೆ ಎಲ್ಲಾ ಗೊತ್ತಾಗುತ್ತದೆ" ಎಂದೆಲ್ಲಾ ಡೈಲಾಗ್ ಹೊಡೆಯುತ್ತಿದ್ದ ಹೊನ್ನಾಳ ಈಗ ಗಪ್‌ಚುಪ್ ಆಗಿದ್ದಾನೆ. ಅಷ್ಟೇ ಅಲ್ಲ ಈ ದಂಧೆಯ ಪ್ರಮುಖ ಆರೋಪಿಗಳಲ್ಲಿ ಇಬ್ಬರು ಹಿರೇಮಠರನ್ನು ತಮ್ಮ ಠಾಣೆಗೇ ಆಹ್ವಾನಿಸಿ, ಕಾಫಿ-ಬಿಸ್ಕತ್ ಕೊಟ್ಟು "[illegible] ಹಾಯ್" ಎಂದರಲ್ಲದೆ [illegible]

ಇದಾದನಂತರ, ರಾಜ್ಯವ್ಯಾಪಿ ಹರಡಿರುವ ಖೋಟಾನೋಟಿನ ದಂಧೆಯ ಪ್ರಮುಖರೆನಿಸಿಕೊಂಡಿರುವ ಈ ಇಬ್ಬರು ಹಿರೇಮಠರು ಸದ್ಯ ಹೊನ್ನಾಳರಿಗೆ ಫ್ರೆಂಡ್ಸ್ ಆಗಿದ್ದಾರೆ. ಹೊನ್ನಾಲ ಸಾಹೇಬರು ಆದಷ್ಟು ಲಕ್ಷಕ್ಕೆ ವ್ಯವಹಾರ ಕುದುರಿಸಿರಬಹುದು ಎಂದು ಹಾವೇರಿ ಜನ ಮಾತಾಡಿಕೊಳ್ಳುತ್ತಿದ್ದಾರೆ. ಈ ಮಧ್ಯೆ ಸಾಲಿಮಠ ಕೂಡಾ ಬೇಲ್ ಮೇಲೆ ರಿಲೀಸ್ ಆಗಿ, ಹಾನಗಲ್ ಮಾರ್ಕೆಟ್ಟಿನಲ್ಲಿ ನಿಂತು ಮನಿಪವರ್, ಪೊಲಿಟಿಕಲ್ ಪವರ್ ಎಂದು ಭಾಷಣ ಬಿಗಿಯುತ್ತಿದ್ದಾನೆ.


ಬಂದಷ್ಟು ಬರಲಿ ಎಂಬ ಖಯಾಲಿಗೆ ಬಿದ್ದಿರುವ ಎಸ್. ಪಿ ಹೊನ್ನಾಳನ ಪೊಲೀಸರ ತಂಡ ಯಾವುದೇ ಪ್ರಕರಣದಲ್ಲಿ ಸಿಕ್ಕಿಬಿದ್ದ ವಾಹನಗಳನ್ನು ಖೋಟಾನೋಟಿನ ಜಾಲದೊಂದಿಗೆ ಸೇರಿಸಿ ವಾಹನಗಳ ಮಾಲೀಕರಿಂದ ಹಣ ಸುಲಿಗೆಗೆ ನಿಂತಿದ್ದಾರೆ. ಶಿಗ್ಗಾಂವಿಯ ತಡಸ ಠಾಣೆಯಲ್ಲಿದ್ದ ಬೈಕ್ ವೊಂದನ್ನು ವಾಪಸ್ ಕೊಡಲು ಸಾವಿರಾರು ರೂಪಾಯಿಗಳನ್ನು ಅಲ್ಲಿನ ಪೊಲೀಸರು ಕೇಳಿದ್ದಾರೆ. ಕೊನೆಗೆ 10 ಸಾವಿರಕ್ಕೆ ಒಪ್ಪಂದವಾಗಿ ಹಾನಗಲ್ ಹತ್ತಿರದ ನಾಲ್ಕರ ಕ್ರಾಸ್‌ನಲ್ಲಿ ಹಣ ನೀಡುತ್ತೇನೆಂದು ಬೈಕ್ ಮಾಲೀಕ ಹೇಳಿದ್ದಾನೆ. ಹಣಕ್ಕೆಂದೇ ಬಾಯಿ ತೆರೆದು ಕುಳಿತಿರುವ ಪೊಲೀಸ್ ಕಾನ್‌ಸ್ಟೇಬಲ್ ರಾಯಣ್ಣ ಅಂಟಾಳ ಎಂಬಾತನನ್ನು ಕಳುಹಿಸಿದ್ದಾರೆ.

ಆದರೆ ಬೈಕ್ ಮಾಲೀಕ ಪ್ಲಾನ್ ಮಾಡಿ [illegible] ಯುಕ್ತರೊಂದಿಗೆ ಕಾಯುತ್ತಿದ್ದ. ಅಸಲಿ ನೋಟಿನ ಆಸೆಗೆ ಬಕರಾ ಆದ ಈ ಕಾನ್‌ಸ್ಟೇಬಲ್ ಅಂಟಾಳ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾನೆ. ಈ ಸುದ್ದಿ ತಿಳಿದು ಅಲ್ಲಿನ ಇನ್‌ಪೆಕ್ಟರ್ ಅರವಿಂದ ಹಾಗೂ [illegible] ಜಾಗ ಖಾಲಿ ಮಾಡಿದ್ದಾರಂತೆ.

[illegible]

-[illegible]

ಸೀತಾಪಹರಣಕ್ಕೆ ಶೃಂಗಾರವೇಕೆ?



ಅಕಾಮಳಾದ ಸೀತೆ ಪನ್ನಗೇಂದ್ರನ ವಧುವಿನಂತೆ ತಳುಕು ಹಾಕಿಕೊಳ್ಳುತ್ತಿರಲು ಕಾಮಾರ್ಥಿಯಾದ ರಾವಣನು ಅವಳನ್ನು ಪಡೆದು ಜಿಗಿದನು. ಹೀಗೆ ಇದು ಪದದಲ್ಲೂ, ಪ್ರತಿಪದಾರ್ಥದಲ್ಲೂ, ವಾಚ್ಯದಲ್ಲೂ ಮತ್ತು ಧ್ವನಿಯಲ್ಲೂ ಹೇಗೆ ಒಂದು ವಿಶಿಷ್ಟವಾದ ಶೃಂಗಾರವಾಗಿಬಿಟ್ಟದೆ, ಗಮನಿಸಿ.

ಇಲ್ಲಿ ಕಾವ್ಯವು ಧ್ವನಿಸುವ ವಿಷಯವೇನೆಂದರೆ ಸತಿಯಾದ ಸೀತೆ ಸತಿಯಂತೆ ಪ್ರತಿಕ್ರಿಯಿಸುವಂತೆಯೇ, ಆ ಪ್ರತಿಕ್ರಿಯಿಸುವ ವಿಧಾನ, ರೀತಿ ಅಥವಾ ಶೈಲಿಯಲ್ಲೇ ಹೆಣ್ಣಾದ, ಮಾನವಿಯಾದ ಸೀತೆ ಹೆಣ್ಣಾಗಿ, ಮಾನವಿಯಾಗಿ ತನ್ನ ಲೈಂಗಿಕ ಅಭಿವ್ಯಕ್ತಿಯನ್ನು ಮರೆಮಾಚಿ ಪಡೆದುಕೊಳ್ಳುವುದು. ಸೀತೆಗೆ ಎಲ್ಲೋ ಅಂತರ್ಯದಲ್ಲಿ ಗೊತ್ತಿರುಹಾಗೆ ಕಾಣಿಸುತ್ತದೆ. ತಾನು ಈ ರೀತಿ ಲೈಂಗಿಕ ಸಂತೃಪ್ತಿಯನ್ನು ಗುಪ್ತವಾಗಿ ಸವಿಯುವುದು ತಪ್ಪು, ಪಾಪವೆಂದು; ಏಕೆಂದರೆ ಅವಳು ಮುಂದೆ ಅಶೋಕವನದಲ್ಲಿ ಹನುಮಂತನು ತನ್ನನ್ನು ಹೆಗಲಮೇಲೆ ಹೊತ್ತುಕೊಂಡು ರಾಮನಲ್ಲಿಗೆ ಕರೆದೊಯ್ಯುತ್ತೇನೆಂದಾಗ ಸೀತೆ ತಾನು ರಾಮನ ಹೆಂಡತಿಯಾಗಿ ಪರರನ್ನು ಮುಟ್ಟಲಾರೆನೆನ್ನುತ್ತಾ ಈ ಮಾತನ್ನು ಆಡುತ್ತಾಳೆ:

ಭರ್ತೃಭಕ್ತಿಂಪುರಸ್ಕೃತ್ಯ ರಾಮಾದಿನ್ಯಸ್ಯವಾನರ
ನಸ್ಪೃಶ್ಯಾಮಿಶರೀರಂ ಪುಂಸೋವಾನರಪುಂಗವ
ಯವಹಂಗಾತ್ರಸಂಸ್ಪರ್ಶಂ ರಾವಣಸ್ಯಬಲಾದ್ಗತಾ
ಅನೀಶಾಕಿಂಕರಿಷ್ಯಾಮಿ ವಿನಾಥಾಂವಿವಶಾಸತೀ

(ಹನುಮಂತ, ಪತಿಭಕ್ತಿಯೊಂದನ್ನೇ ಗೌರವಿಸಿದ ನಾನು ರಾಮನ ಹೊರತು ಇನ್ನೊಬ್ಬನ ದೇಹವನ್ನು ಮುಟ್ಟುವುದಿಲ್ಲ, ರಾವಣನು ಬಲಾತ್ಕಾರವಾಗಿ ನನ್ನನ್ನು ಎತ್ತಿತಂದಾಗ ಅವನ ದೇಹ ಸ್ಪರ್ಶವಾಗಿದ್ದರೆ, ನಾನು ಏನು ಮಾಡಲಿ? ಅನಾಥಳೂ, ಕೈಲಾಗದವಳೂ, ಪರಾಧೀಳನೂ ಆಗಿದ್ದೆ) (ಸುಂ. 37. 60-61)

ಸೀತೆಯು ತಾನೇ ಕೊಟ್ಟ ಈ ರಾವಣನ ಬಗೆಗಿನ ವಿವರಣೆ ಒಂದು ರೀತಿಯಲ್ಲಿ ಅವಳಲ್ಲಿನ ಅಡಗಿದ್ದಿರಬಹುದಾಗಿದ್ದ ತಪ್ಪಿತಸ್ಥ ಮನೋಭಾವ, ಗಿಲ್ಟಿ-ಕಾನ್‌ಷನ್ಸ್ (guilty consience) ಅನ್ನು ಹೊರಗೆಡಹುತ್ತಿದ್ದಂತೆ ಕಾಣುವುದಿಲ್ಲವೆ? ಅಲ್ಲದೆ ಪರಪುರುಷನ ಮುಟ್ಟು ತನ್ನ ಸತೀತ್ವವನ್ನು ಭ್ರಷ್ಟಗೊಳಿಸುವಷ್ಟು ಘೋರವೆಂದು ತಿಳಿದವಳು ರಾವಣನು ಅವಳನ್ನು ಲೈಂಗಿಕವಾಗಿ "ಕಾಮಾರ್ಥ"ನಾಗಿ ಹಿಡಿದೆಳೆದಾಗ ತಾನು ಶಾಪ ಹಾಕಲಾರದಷ್ಟು ಅಶಕ್ತಳಲ್ಲ, ಅಲ್ಲವೇ? ಇಲ್ಲಿ, ರಾವಣ ಸೀತೆಯನ್ನು ಕಾಮಾರ್ಥನಾಗಿ ಹಿಡಿದೆಳೆದಾಡಿದ ಸಂದರ್ಭದಲ್ಲಿ, ಸೀತೆಯ ಪ್ರತಿಕ್ರಿಯೆಯ ರೀತಿಯನ್ನು ಗಮನಿಸುವ:

ತಾಮಕಾಮಾಂಸಕಾವರ್ತಃ ಪನ್ನಗೇಂದ್ರವಧೂಮಿವ
ವಿವೇಷ್ಟಮಾನಾಮಾದಾಯ ಉತ್ಪಪಾತಾನರಾವಣಃ

(ನಿಷ್ಕಾಮಳಾದ ಸೀತೆಯು ಹೆಣ್ಣು ಸರ್ಪದಂತೆ ಹೊರಳಾಡುತ್ತಿರಲು, ಕಾಮಾರ್ಥನಾದ ರಾವಣನು ಅವಳನ್ನು ಹೊತ್ತು ಗಗನವನ್ನು ಅಡರಿದನು).

(ಅರಣ್ಯ, 49, 22-23)

ನಮ್ಮಲ್ಲಿ "ರೀತಿರಾತ್ಮಾಕಾವ್ಯ"ವೆಂಬ ಮಾತಿದೆ. ಕಾವ್ಯದ ರೀತಿ, ಶೈಲಿ, ಸ್ಟೈಲ್ (style) ಎಂಬುವುದೇ ಅದರ ತಿರುಳು-ಆ ರೀತಿ, ಶೈಲಿ, ಸ್ಟೈಲೇ ಕಾವ್ಯವನ್ನು ಕಾವ್ಯವಾಗಿಸುವ, ಅದರ ಧ್ವನಿಯನ್ನೇ ವ್ಯಂಜಿಸುವ ಸಾಧನೆ. ಈ ಮೇಲಿನ ಕಾವ್ಯವನ್ನು ನೋಡಿ. ಅದನ್ನು ಭಾಷಾಂತರಿಸಿದ ರಂಗನಾಥಶರ್ಮರು, ಮೋಟಗಾನಹಳ್ಳಿಯವರು ಅದನ್ನು ನಿರ್ವಿಕಾರವಾದ ವಸ್ತುನಿಷ್ಠುರತೆಯಿಂದ ಭಾಷಾಂತರಿಸಿಲ್ಲ; ಅವರಲ್ಲಿನ ಶ್ರೀ ರಾಮಸ್ವಾಮಿಯ ಭಕ್ತಿ, ಅವರ ಸಹೃದಯೀ ಪ್ರಾಮಾಣಿಕವಾದ' ಮುನುಶಿದೆ. ಅವರ ಅದಷ್ಟು ಪ್ರಾಮಾಣಿಕವಾದ ಭಾಷಾಂತರ ಓಗೆ ನಾವಬಹುದೇನಿಸುತ್ತದೆ.


ಆಕಾಮಳಾದ ಸೀತೆಯು ಪನ್ನಗೇಂದ್ರನ (ಅಂದರೆ ಆದಿಶೇಷನ) ವಧುವಿನಂತೆ ಸುತ್ತಿಕೊಳ್ಳುತ್ತಿರಲು, ಕಾಮಾರ್ಥನಾದ ರಾವಣನು ಅವಳನ್ನು ಹೊಂದಿ ಎಗರಿದನು.

ಇಲ್ಲಿ 'ವಿವೇಷ್ಟ' ಎನ್ನುವ ಪದದ ಅರ್ಥ 'ಸುತ್ತುವರಿ' 'ಸುತ್ತಿಕೊಳ್ಳು' 'ತಳಕು ಹಾಕಿಕೊ' (to wind, to twist, to surround) ಎಂಬುದು; 'ಹೊರಳಾಡು' ಎಂದಲ್ಲ. 'ಹೊರಳಾಡು' ಎನ್ನುವುದಕ್ಕೆ ಸರಿಯಾದ ಪದ, ನನ್ನ ಸಂಸ್ಕೃತ ಪ್ರಾಧ್ಯಾಪಕ ಮಿತ್ರರು ಸೂಚಿಸುವಂತೆ 'ವಿವರ್ತ' ಎನ್ನುವುದು. ಇಲ್ಲಿ ಕವಿಯು 'ಹೊರಳಾಡು' ಎನ್ನುವ ಅರ್ಥವನ್ನು ಸೂಚಿಸುವವನಾಗಿದ್ದರೆ 'ವಿವರ್ತ' ಎನ್ನುವ ಪದವನ್ನು 'ವಿವೇಷ್ಟ'ವೆನ್ನುವ ಪದದ ಬದಲು, ಛಂದಸ್ಸಿಗೆ ಭಂಗಬರದಂತೆ, ಉಪಯೋಗಿಸಬಹುದಾಗಿತ್ತು. ಆದರೆ ಇಲ್ಲಿಯ ಕ್ರಿಯೆ ಬಹಳ ಧ್ವನಿಗರ್ಭಿತವಾದ ಹಾವು ಸುತ್ತಿಕೊಳ್ಳುವ, ತಳಕುಹಾಕಿಕೊಳ್ಳುವ ಪ್ರಸಂಗ. ಈ 'ಸುತ್ತಿಕೊಳ್ಳುವ' 'ತಳಕುಹಾಕಿಕೊಳ್ಳುವ' ಕ್ರಿಯೆಯನ್ನು ಸಮರ್ಥಿಸಲು, ಅಲ್ಲಿನ ಪ್ರಾಣಿ 'ಪನ್ನಗೇಂದ್ರನ ವಧು', ಪನ್ನಗೇಂದ್ರನ ಪ್ರೇಯಸಿ, ಆದಿಶೇಷನೆಂಬ ಸರ್ಪರಾಜನು, ಸರ್ಪದೇವತೆಯ ವರಿಸಿದ ಕನ್ಯೆ-ಅಂದರೆ ಶೃಂಗಾರಕ್ಕೆ ಪಕ್ಕಾದವಳು; ಅಂತಹ ಪನ್ನಗೇಂದ್ರನ ವಧುವು ಕಾಮ ಸಂದರ್ಭದಲ್ಲಿ (ತನ್ನ ಪ್ರಿಯನನ್ನು) 'ಸುತ್ತಿಕೊಳ್ಳುತ್ತಾಳೆ', 'ತಳುಕು ಹಾಕಿಕೊಳ್ಳುತ್ತಾಳಾಗಲಿ, ಹೊರಳಾಡುವುದಿಲ್ಲ; ವಿವೇಷ್ಟಿತಳಾಗುತ್ತಾಳಾಗಲಿ, ವಿವರ್ತಳಾಗುವುದಿಲ್ಲ. ಈ ಕಾಮಕ್ರಿಯೆಯನ್ನು ಪುಷ್ಟೀಕರಿಸುವ, 'ಅಕಾಮ' 'ಕಾಮಾರ್ಥ' ಎನ್ನುವ ಕಾಮ ಪದದ ಎರಡು ಉಪಯೋಗಗಳನ್ನು, ವಧು ಎನ್ನುವ ಶೃಂಗಾರ ವಿಶಿಷ್ಟತೆಯ ಪದವನ್ನೂ ಹಾಗೂ 'ಪನ್ನಗೇಂದ್ರ'ನ ಹಾವಿನ ಪ್ರಖರವಾದ ಲೈಂಗಿಕ, ಫ್ಯಾಲಿಕ್ (phallic) ಸಂಕೇತವನ್ನೂ ಗಮನಿಸಬೇಕಾಗಿದ್ದಿದೆ. ವಾಚ್ಯದಲ್ಲಿ 'ಅಕಾಮ' ಎಂದಿದ್ದಾಗ್ಯೂ ಆ ಪದ ಆ ಸಂದರ್ಭದ 'ಕಾಮಾರ್ಥಿ'ಯ ಎದುರಿನಲ್ಲಿ, ಅವಳು 'ವಧುವಾಗಿರುವ, ಹೋಲಿಕೆಯಲ್ಲಿ, ಆ ಹೋಲಿಕೆ ಸೂಚಿಸುವ ಲೈಂಗಿಕ ಸಂಕೇತವಾದ 'ಪನ್ನಗ'ನಲ್ಲಿ ಅದರಲ್ಲೂ ಇಂದ್ರಿಯ ಸುಖದ 'ಇಂದ್ರ'ನಲ್ಲಿ ಅದು 'ಸಕಾಮ'ದ ಆಯಾಮವನ್ನೇ, ವಾತಾವರಣದ ಪ್ರಾಬಲ್ಯದಿಂದ, ಪಡೆದುಕೊಳ್ಳುತ್ತದೆ: 'ಅಕಾಮ'ವೆಂಬುದು ಐರಾನಿಕ್, ಆಗಿ ಸಕಾಮವನ್ನೇ ವ್ಯಂಜಿಸುತ್ತದೆ.

ಇಲ್ಲಿ ಕವಿಯು ರಾಕ್ಷಸನಾದ ರಾವಣನೆದುರು ಮಾನವಿಯಾದ ಸೀತೆಯನ್ನು ನಿಲ್ಲಿಸಿದ್ದಾನೆ: ಅಂದರೆ ತಮಸ್ಸಿನೆದುರು ಸತ್ವ ನಿಂತಿದೆ, ತಮಸ್ಸು ಸತ್ವವನ್ನು

ಡಾ. ಪ್ರೋಲಂಕಿ ರಾಮಮೂರ್ತಿಯವರ

10 ಸೀತಾಯಣ



ದುರಾಕ್ರಮಿಸುತ್ತದೆಯಲ್ಲವೇ? ಆದರೆ ಕಾವ್ಯ ತದ್ವಿರುದ್ಧ ವ್ಯಾಪಾರವನ್ನು ಎಷ್ಟು ಪ್ರಬಲವಾಗಿ ಧ್ವನಿಸುತ್ತದೆ ಎಂಬುದನ್ನು ನೋಡಿ. ರಾಕ್ಷಸನಾದ ರಾವಣ ಇಲ್ಲಿ ಭೋಗವೈಭವದ 'ಪನ್ನಗೇಂದ್ರ'ನಾಗಿದ್ದಾನೆ; ಲೈಂಗಿಕ ದುರಾಕ್ರಮಣಕ್ಕೆ ಒಳಗಾದ ಬಲಿಪಶು ಸೀತೆ, ದಾಂಪತ್ಯದ 'ವಧು'ವಾಗಿದ್ದಾಳೆ; ಭಯಾನಕವೂ ಕರುಣಾಜನಕವೂ ಆದ ಸೀತೆಯ ಹೊರಳಾಟ 'ಶೃಂಗಾರದ ತಳಕು' 'ತೆಕ್ಕೆ'ಯಾಗಿದೆ-'ವೇಷ್ಟ'ವೆಂಬ ಪದ 'ವೇಷ್ಟಕ' ಎನ್ನುವ ಪದಕ್ಕೆ ಎಷ್ಟು ಹತ್ತಿರವಾಗಿದೆ ನೋಡಿ: "ವೇಷ್ಟಕ"ವೆಂದರೆ ಒಂದು ರೀತಿ... ಸಂಭೋಗ; 'ಪನ್ನಗೇಂದ್ರ ವಧು'ವು ವಿವೇಷ್ಟ'ವಾಗುವುದೆಂದರೆ', (... ಗೇಂದ್ರನಿಗೆ ಅವನ ವಧುವು) "ತಳುಕುಹಾಕಿ"ಕೊಳ್ಳುವ ಸಂಭೋ... ಕ್ರಿಯಾವಿಶೇಷವಿರಬೇಕಲ್ಲವೇ?

ಈ ಸಾಲುಗಳನ್ನು ನಾವು ಪದಗಳ ನೆಲೆಯಲ್ಲೇ, ವಾಚ್ಯದ... ಇಟ್ಟಾಗ ಹೇಗೆ ಮೇಲಿನ ಅರ್ಥ ಒತ್ತಾಗಿ ನಮ್ಮನ್ನು ತಟ್ಟುತ್ತದೆ ನೋ... ಅಕಾಮಳಾದ ಸೀತೆ ಪನ್ನಗೇಂದ್ರನ ವಧುವಿನಂತೆ ತಳುಕು ಹಾಕಿಕೊಳ್ಳುತ್ತಿರ... ಕಾಮಾರ್ಥಿಯಾದ ರಾವಣನು ಅವಳನ್ನು ಪಡೆದು ಜಿಗಿದನು. ಹೀ... ಇದು ಪದದಲ್ಲೂ, ಪ್ರತಿಪದಾರ್ಥದಲ್ಲೂ, ವಾಚ್ಯದಲ್ಲೂ ಮತ್ತು ಧ್ವನಿಯಲ್ಲೂ ಹೇಗೆ ಒಂದು ವಿಶಿಷ್ಟವಾದ ಶೃಂಗಾರವಾಗಿಬಿಟ್ಟದೆ, ಗಮನಿಸಿ.

ಆದಿಕವಿಯಾದ ವಾಲ್ಮೀಕಿಯು ಇಂತಹ ಭಯಾನಕ ಭೀಭತ್ಸ ಸನ್ನಿವೇ... ವನ್ನು ಶೃಂಗಾರಕ್ಕೆ ತಿರುಗಿಸಿರಬೇಕಾದರೆ, ಕವಿಗೆ ಪದೋಪಯೋಗ... ಯುಕ್ತಾಯುಕ್ತ ವಿವೇಚನೆ ಇಲ್ಲವೆಂದು ಹೇಳಲಾದೀತೆ? ಅಷ್ಟೇ ಅ... ರಾವಣನು ಸೀತೆಯನ್ನು ಆಕಾಶಮಾರ್ಗದಲ್ಲಿ ಅಪಹರಿಸಿಕೊಂಡು ಹೋ... ತ್ತಿರುವಲ್ಲಿ ವಾಲ್ಮೀಕಿಯ ವರ್ಣನೆ ಅವರಿಬ್ಬರ ಜೋಡಿಯನ್ನು ಪರ... ಸಾದೃಶ್ಯತೆ, ಅನುರೂಪತೆ, ಶೋಭಾಯಮಾನತೆಯ ಉಪಮೆ ಮಹೋ... ಮೆಗಳಲ್ಲಿ ವಿಜೃಂಭಿಸಿರುವುದು, ಅವರ ಜೊತೆಯನ್ನು ಪರಸ್ಪರತೆಯ... ಪಂಚಭೂತಗಳ ಸಮನ್ವಯದಲ್ಲಿ ವೈಭವೀಕರಿಸಿ ಸಹಜಗೊಳಿಸುವು... ಪ್ರಕೃತಿಯ ಉಪಮೆಗಳಲ್ಲಿ ರೂಪಕಗಳಲ್ಲಿ ಅವರಿಬ್ಬರನ್ನೂ ಸಂಯೋ... ಸುವುದು ವಾಗರ್ಥಗಳ ಸಂಪೃಕ್ತತೆಯನ್ನರಿಯದ ಕುಕವಿಯ ಕೆಲಸ... ಲಾದೀತೇ?

ಅಲ್ಲದೇ "ಹಾವಿ"ನ ಪದದ ಉಪಯೋಗ ರಾಮಲಕ್ಷ್ಮಣರು ವಿರಾಧನ... ಕೊಲ್ಲುವಲ್ಲಿ, ನೋಡಿ: "ಆಗ ಲಕ್ಷ್ಮಣನು ಕೆಣಕಿದ ಕೃಷ್ಣ ಸರ್ಪದ... ಫೂತ್ಕರಿಸುತ್ತಾ" "ಅಬ್ರವೀಲಕ್ಷ್ಮಣಃಕ್ರುದ್ಧೋರುದ್ಧೋನಾಗ ಇವ" (ಅ... 2, 22). ಇಲ್ಲಿಯ "ನಾಗ" ಸರಿಯಾದ ಯುಕ್ತಪದ: ಭೀಮ... ಮೂದಲಿಕೆಗೆ ಕೊಳದಲ್ಲೇ ಚೆವರಿದ ಕೋಪಿಷ್ಠ ದುರ್ಯೋಧನನ... ರನ್ನನು "ಉರಗಪತಾಕ", ಹಾವಿನ ಪತಾಕೆಯುವನು ಎನ... ಪದ-"ನೀರೊಳಗಿರ್ದುಂ ಬೆಮರ್ದನುರಗಪತಾಕಂ"- ಎಷ್ಟು ಸು... ಧ್ವನಿಪೂರ್ಣ ನೋಡಿ. ಹಾವು ಕೋಪಕ್ಕೆ, ರೊಚ್ಚಿಗೆ, ಛಲಕ್ಕೆ ಹೆಸರಾಗಿರುವು... ಹೇಗೆ ಛಲದಂಕಮಲ್ಲನಿಗೆ ಹಾಗೂ ಲಕ್ಷ್ಮಣನಿಗೆ, ಒಪ್ಪುವ ರೂಪಕವಾ... ನೋಡಿ. ನಾವು "ಪನ್ನಗೇಂದ್ರವಧು"ವು "ವಿವೇಷ್ಟಿ"ತಳಾದಳೆಂ... "ಹೊರಳಾಡಿದಳು" ಎಂದು ಅರ್ಥ ಮಾಡಿದರೂ ಕಾಮುಕಳ... ಅಮೃತಮತಿ ಬದಗನ ಚಾವಟ ಏಟಿಗೆ "ಕೇರೆಪೊರಳ್ದಂತೆ ಪೊರಳ್ದಳ... ("ನಾಗರ ಹಾವಿನ ವಧುವಾದ) ಕೇರೆಹಾವು ಹೊರಳಾಡಿದ... ಹೊರಳಾಡಿದಳು" (ಕಾಮೋನ್ಮಾದದಿಂದ) ಎನ್ನುವುದನ್ನು ನೆನೆಯಬೇ...

(ಜನ್ನನ 'ಯಶೋಧರಚರಿತೆ')

ಆಂಬಿಗ್ಯುಯಿಟ (ambiguity) ಎನ್ನುವುದು. ವಿವಿಧಾ... ವಿರೋಧಾರ್ಥಗಳ ಸಂಯೋಜಿತತೆ, ಕಾವ್ಯದ ವಿಶೇಷ ಲಕ್ಷಣವೆಂಬುದು... ನಾವು ಅರಿತಾಗ ಇಲ್ಲಿನ ಸೀತಾ ರಾವಣರ ಸನ್ನಿವೇಶಗಳು ಒಂ... ನೆಲೆಯಲ್ಲಿ ವಿಷಮವಾಗಿಯೂ, ಇನ್ನೊಂದರಲ್ಲಿ ಪೂರಕವಾಗಿಯ... ಕಂಡುಬರುವುದೂ, ವಾಚ್ಯದಲ್ಲಿ ಸೀತೆ ರಾವಣನನ್ನು ದ್ವೇಷಿಸಿದ... ಧ್ವನಿಯಲ್ಲಿ ಗುಪ್ತವಾಗಿ ಅವನನ್ನು ಬಯಸುವಂತೆ ಕಾಣುವುದೂ ಮಾ... ಜೀವನದ ಜೀವನರೀತಿಯಲ್ಲೇ, ಸಂವೇದನೆಗಳ ಶೈಲಿಯಲ್ಲೇ ಇರು... ಸಂಕೀರ್ಣತೆ, ವೈವಿಧ್ಯತೆ, ವೈರುಧ್ಯತೆಗಳನ್ನು ವ್ಯಂಜಿಸುವ ಕಾವ್ಯಗ... ವೆಂಬುದು ಮನದಟ್ಟಾಗುತ್ತದೆ.

ನಾವು ಸೀತೆ ಲಕ್ಷ್ಮಣನನ್ನು ಬಯ್ಯುವುದು... ವಿಪರೀತವೆಂದು ತಬ್ಬಿಬ್ಬಾಗಿದ್ದೇವೆ, ಆದರೆ ಅ... ಅಂತರಂಗವೇನಿರಬಹುದು, ಅದನ್ನು ಕಾ... ಹೇಗೆ ವ್ಯಂಜಿಸಹೊರಟಿದೆ, ಹೇಗೆ ಆ ಅಂತರ... ರಾಮಾಯಣದುದ್ದಕ್ಕೂ ಹರಿದು ಬಂ... ಹೇಗೆ ಅದು ಲಕ್ಷ್ಮಣ ಸೀತೆಯನ್ನು ಕಾಡಿ... ಬಿಡುವಾಗ ಮತ್ತೆ ಪ್ರಬಲವಾಗಿ ತಲೆಯೆ... ತ್ತದೆ-ಇವು ಸಹೃದಯಿ ಓದುಗನ ಓ... ಕಾಂಕ್ಷೆಗಳು; ನಾವು ರಾಮನಿಗೆ ಸೀತೆಯ... ಹಾಗೆ ನೋಡಿದರೆ, ಒಟ್ಟಾರೆ ಸ್ತ್ರೀಯ... ಒಂದು ವಿಲಕ್ಷಣವಾದ ಉಪೇಕ್ಷೆ ... ಎನ್ನುವುದನ್ನು ನಮ್ಮ ಓದಿನಲ್ಲಿ ಕಂಡುಕೊ... ದ್ದೇವೆಯಾದರೆ ಸೀತೆಯ ಈ ಬಗೆಗಿನ ಲಕ್ಷ್ಮಣನಲ್ಲಿಯ ಇಷ್ಟ, ಆಸಕ್ತಿಗಳನ್ನು... ರಾವಣನ ಬಗೆಗಿನ ಗುಪ್ತ ಸಂವೇದನೆ ಅಥವಾ ಸಂವೇದನಾವಿಶೇ... ಅಥವಾ ವಿಚಿತ್ರ ವ್ಯಾಪಾರಗಳನ್ನೂ ನಾವು ಕಾವ್ಯದ ಸಾಕ್ಷ್ಯದ... ಕಾಣಬಹುದಾಗಿದೆ.

(ಮುಂದುವರೆಯುತ್ತದೆ)

ಯಾವುದು ಚೌಕಟ್ಟಲ್ಲ?

ಓ. ಎಲ್. ನಾಗಭೂಷಣ್ ಅವರ "ಚೌಕಟ್ಟನ್ನು ದಾಟಿ" ಎಂಬ ನಿಲುವು ಯಾವುದು ಚೌಕಟ್ಟಲ್ಲ ಎಂಬ ಪ್ರಶ್ನೆಯನ್ನು ಮುಖ್ಯವಾಗಿ ಎತ್ತುತ್ತದೆ. ಚೌಕಟ್ಟುಗಳನ್ನು ಮೀರುವ ಯುಟೋಪಿಯನ್ ನಿಲುವು ಯಾವುದೇ ಸೃಜನಾತ್ಮಕ ಕ್ರಿಯೆಗೆ ಭಾಷೆ, ನಾಡು, ದೇಶ, ಕಾಲ, ಲಿಂಗದ ಚೌಕಟ್ಟುಗಳಿದ್ದೇ ಇರುತ್ತವೆ ಎಂಬುದನ್ನು ಮರೆಯುವ ಸಾಧ್ಯತೆ ಇರುತ್ತದೆ.

■ ಸುಕನ್ಯಾ ಕನಾರಳ್ಳಿ

ಹೋದ ವಾರ ನಡೆದ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ "ಮಹಿಳಾ ವಾದದ ಚೌಕಟ್ಟನ್ನು ದಾಟಿ" ಎಂಬ ಓ.ಎಲ್.ನಾಗಭೂಷಣ ಸ್ವಾಮಿ ಅವರ ಕಿವಿಮಾತು ಹೊಸದಂತೇನೂ ಕೇಳಿಸುವುದಿಲ್ಲ. ಅಂಚಿಗೆ ಒತ್ತರಿಸಲ್ಪಟ್ಟ ಸಮುದಾಯಗಳು ತಮ್ಮನ್ನು ಸಂಘಟಿಸಿಕೊಳ್ಳುವ ಪ್ರಯತ್ನ ಮಾಡಿದಾಗಲ್ಲ ಸವಲತ್ತುಳ್ಳವರ ವಲಯದಿಂದ ಈ ರೀತಿಯ 'ಬುದ್ಧಿಮಾತು' ಕೇಳಿಬರುವುದು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಹೇಳಬೇಕೆಂದರೆ ತೀರಾ ಪರಿಚಿತ. ಅಂಚಿಗೆ ತಳ್ಳಲ್ಪಟ್ಟ ಪ್ರಕ್ರಿಯೆಯ ಹಿಂದೆ ನಡೆದಿರಬಹುದಾದ ಸಾಂಸ್ಕೃತಿಕ ರಾಜಕೀಯದ ಜೊತೆ ಗಂಭೀರ ಸಂವಾದ ನಡೆಸುವ ಪ್ರಯತ್ನ ಮಾಡದೇ ಸಾರಾಸಗಟಾಗಿ ಕಿವಿಮಾತು ಹೇಳುವವರ ವಿವೇಕದಿಂದ ಈ ಒತ್ತರಿಸಲ್ಪಟ್ಟ ಸಮುದಾಯಗಳಿಗೆ ಹೆಚ್ಚಿನ ಪ್ರಯತ್ನವೇನೂ ಆಗದು. "ಬಂಡಾಯ ಸಾಹಿತಿಗಳು ಬರೀ ಬೊಬ್ಬೆ ಹೊಡೆಯುತ್ತಾರೆ" ಎನ್ನುವಾಗಲೂ, "ದಲಿತರು ಇನ್ನೂ ಹೆಚ್ಚಿನ ಸೂಕ್ಷ್ಮ ಸಂವೇದನೆಗಳನ್ನು ಬೆಳೆಸಿಕೊಳ್ಳಬೇಕು" ಎನ್ನುವಾಗಲೂ 'ವಿಶಾಲ ಮನೋಭಾವದ' ರಾಜಕೀಯವೇ ಕೆಲಸ ಮಾಡುತ್ತಿರುತ್ತದೆ. ಸೂಕ್ಷ್ಮವಾಗಿ ನೋಡಿದಾಗ ಈ ಚೌಕಟ್ಟುಗಳನ್ನು ದಾಟಿದ ವಿಶಾಲ ಮನೋಭಾವವೂ ಸಹ ಲಿಂಗ-ಜಾತಿ-ವರ್ಗದ ವಾಸನೆಗಳಿಂದ ಮುಕ್ತವಾಗಿರುವುದಿಲ್ಲ. ದಾಖಲಿತ ಕನ್ನಡ ಸಾಹಿತ್ಯ ಚರಿತ್ರೆಯನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು.

ಸಾಹಿತ್ಯ ಚರಿತ್ರೆಯೆನ್ನುವುದು ಕಾಲಕಾಲಕ್ಕೆ ಪ್ರಭಾವೀ ಕೇಂದ್ರಗಳು ಪ್ರಜ್ಞಾಪೂರ್ವಕವಾಗಿಯೋ ಅಥವಾ ಅಲ್ಲದೆಯೋ ನಿರ್ಮಿಸಿದ ಒಂದು ಹೆಣಿಗೆ. ಈ ಅರ್ಥದಲ್ಲಿ ಸಾಹಿತ್ಯ ಚರಿತ್ರೆಯೆನ್ನುವುದು ಕಥಾನಕಗಳ ಮೂಲಕ ನಿರ್ಮಿಸಲ್ಪಟ್ಟ ಹೆಣಿಗೆ. ಘಟನೆಗಳ ಮೂಲಕ ಸಿದ್ಧಾಂತಗಳು ರೂಪುಗೊಳ್ಳುತ್ತವೋ ಅಥವಾ ಸಿದ್ಧಾಂತದ ಮೂಲಕ ಘಟನೆಗಳು ಸಂಭವಿಸುತ್ತವೋ ಎಂಬುದು ಬೀಜ-ವೃಕ್ಷದ ಜಿಜ್ಞಾಸೆಯಷ್ಟೇ ವಿವಾದಾಸ್ಪದ. ಏನೇ ಇರಲಿ, ಹೆಣೆದ ಚರಿತ್ರೆಯ ಹಿಂದೆ ಯಾವ್ಯಾವ ತಾತ್ವಿಕ ಕಾರಣಗಳು ಕೆಲಸ ಮಾಡಿವೆ ಎನ್ನುವುದು ಯಾವ ಚರಿತ್ರೆ ಸುಳ್ಳು ಅಥವಾ ಯಾವುದು ನಿಜ ಎನ್ನುವುದಕ್ಕಿಂತ ಹೆಚ್ಚು ಉಪಯುಕ್ತವಾಗಬಲ್ಲದೆನಿಸುತ್ತದೆ.

ಕನ್ನಡದಲ್ಲಿಯೂ ಸಹ ಒಂದು ಸಾಹಿತ್ಯಕ ಚರಿತ್ರೆಯಲ್ಲ, ಒಂದಕ್ಕಿಂತ ಜಾಸ್ತಿಯೇ ಇವೆ. ಆದರೂ ಒಂದು ರೀತಿಯ ಚರಿತ್ರೆ, ತನ್ನ ಮುಖ್ಯ ಧ್ವನಿಯನ್ನು ರೂಪಿಸಿಕೊಂಡು ಮುಖ್ಯವಾಹಿನಿ ಪಟ್ಟವನ್ನು ಧರಿಸಿಬಿಟ್ಟಿದೆ. 'ಶ್ರೀ ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'ಯಿಂದ ಹಿಡಿದು 'ಭಾರತೀಯ ಸಾಹಿತ್ಯ ಚರಿತ್ರೆ' ಯಂತಹ ಅಕಾಡೆಮಿಕ್ ಪ್ರಾಜೆಕ್ಟ್‌ನಲ್ಲಿ ಸಹ ಹೆಚ್ಚುಕಡಿಮೆ ಒಂದೇ ರೀತಿಯ ತಾತ್ವಿಕ ಹಂದರವಿದೆ. ಈ ಹಂದರದ ಸಾಮಾಜಿಕ ಸಾಂಸ್ಕೃತಿಕ ಒತ್ತಡಗಳೇನು? ಇದು ತನಗೆ ಹೊಂದಿಕೊಳ್ಳದ ಧ್ವನಿಗಳನ್ನು ಹೇಗೆ ಮೌನವಾಗಿಸಿದೆ? ಯಾರು ಯಾರಿಗೆ ಯಾವ್ಯಾವ ಸ್ಥಾನವನ್ನಿತ್ತು 'ಗೌರವಿಸಿದೆ'? ಇದರ ಹಿಂದಿನ ಲಿಂಗ-ಜಾತಿ-ವರ್ಗದ ರಾಜಕೀಯವೇನು? ಬಹುಶಃ ಈ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನದಲ್ಲಿ ಕನ್ನಡದ ಸಾಹಿತ್ಯಕ ವ್ಯಾಖ್ಯಾನಗಳು ಹೇಗೆ ಸಾಹಿತ್ಯಕ ಘಟನೆಗಳನ್ನು ರೂಪಿಸಿವೆ ಎಂಬುದನ್ನು ಸ್ವಲ್ಪ ವಿವರವಾಗಿ ಅರ್ಥ ಮಾಡಿಕೊಳ್ಳಬಹುದು ಅಂತ ಅನ್ನಿಸುತ್ತೆ.

ವಿಮರ್ಶೆಯ ಕೆಲಸ ಬರೀ ವಿಮರ್ಶಿಸುವುದಷ್ಟೇ ಅಲ್ಲ, ನೋಡುವ ದೃಷ್ಟಿಕೋನವನ್ನು ರೂಪಿಸುವುದು ಎನ್ನುವುದು ಓದುಗರಿಗೆ ಗೊತ್ತಿರುವ ವಿಷಯ. ಚರಿತ್ರಕಾರ ವಿಮರ್ಶಕನೂ ಹೌದು. ಸಾಹಿತ್ಯಕ ಚರಿತ್ರಕಾರ ಚರಿತ್ರೆಯನ್ನು ಬರೆಯುವ ರಾಜಕೀಯಕ್ಕಷ್ಟೇ ಅಲ್ಲ ವಿಮರ್ಶೆಯ ರಾಜಕೀಯಕ್ಕೂ ಪಕ್ಕಾಗಿರುತ್ತಾನೆ. ಆದ್ದರಿಂದಲೇ ಚರಿತ್ರೆಗೆ ಬೇಕಾದ ಸತ್ಯವನ್ನು ಹೆಣೆಯುವುದಷ್ಟೇ ಅಲ್ಲ, ಜೊತೆಗೆ ಯಾರಿಗೆ ಯಾವ ಸ್ಥಾನ ಸಲ್ಲಬೇಕು ಎಂದು ಶ್ರೀಮದ್ಗಾಂಭೀರ್ಯದಿಂದ ಸೂಚಿಸುತ್ತಾ ಮುನ್ನಡೆಯುತ್ತಾನೆ. ಹಾಗಂದ ಮಾತ್ರಕ್ಕೆ ಅದರ ಹಿಂದೆ ಒಂದು ಘನವಾದ ಹುನ್ನಾರವಿದೆ ಎಂದರ್ಥವಲ್ಲ. ಚರಿತ್ರೆ- ವಿಮರ್ಶೆಗಳ ರಾಜಕೀಯಕ್ಕೆ ಪಕ್ಕಾಗುವುದು ಎಂದು ಸೂಚಿಸಿದ್ದು ಅದಕ್ಕೇ. ಈ ರಾಜಗಾಂಭೀರ್ಯಕ್ಕೆ ಅನಿವಾರ್ಯವಾಗಿಯೋ ಏನೋ, 'ಪರ್ಯಾಯ'ವೆಂದು ತೋರುವ ಪರಂಪರೆಗಳ ಎಗ್ಗು ಜಾಸ್ತಿ ಇರುವುದಿಲ್ಲ. ಹಾಗಾಗಿಯೇ ಎಲ್ಲೋ ಚುಟುಕಾಗಿ ಅವುಗಳ ಸಾಹಿತ್ಯದ ಬಗ್ಗೆ 'ಇವು ಶ್ರೇಷ್ಠ ಸಾಹಿತ್ಯವೆಂದು ಹೇಳಲಾಗುವುದಿಲ್ಲ, ಆದರೆ ಪ್ರಾಮಾಣಿಕ ಪ್ರಯತ್ನ ಅಂದು ಹೇಳಬಹುದೇನೋ' ಎಂದೋ ಅಥವಾ 'ಶ್ರೇಷ್ಠ ಅಂತೂ ಅಲ್ಲ, ಆದರೆ 'ಯಶಸ್ವಿ' ಅಥವಾ 'ಜನಪ್ರಿಯ' ಪಟ್ಟಿಗೆ ಸೇರಿಸಬಹುದು' ಎಂಬ ಘನಗಾಂಭೀರ್ಯದ ತೀರ್ಮಾನ ನೀಡಿ ಮುಂದೆ ಸಾಗುತ್ತದೆ.


ಹಿಂತಿರುಗಿ ನೋಡುವ ಹಂಗುಳ್ಳ ಚರಿತ್ರಕಾರನ ದೃಷ್ಟಿಗೆ ಕೆಲವು ಹ್ಯಾಂಡ್ ಪೋಸ್ಟ್‌ಗಳ ಅಗತ್ಯವಿರುತ್ತದೆ. ಇಲ್ಲದಿದ್ದರೆ ಕಾಲ ಕಲಸುಮೇಲೋಗರವಾಗಿ ಬಿಡುವ ಅಪಾಯವೇ ಹೆಚ್ಚು. ಹೆಚ್ಚಿನಂಶ ಈ ಹ್ಯಾಂಡ್‌ಪೋಸ್ಟ್‌ಗಳು ಒಂದು ಜನಾಂಗದ ಸಾಮಾಜಿಕ ಮತ್ತು ಸಾಂಸ್ಕೃತಿಕ ತಿರುವುಗಳಾಗಿರುತ್ತವೆ. ಆದರೆ ಮುಖ್ಯವಾಹಿನಿ ಚರಿತ್ರೆಯ ಸಾಮಾಜಿಕ ಚೌಕಟ್ಟಿನಲ್ಲಿ ಇಲ್ಲದಿರುವವರ ಚರಿತ್ರೆಯ ಗತಿಯೇನು? ಅವರ ಸಾಹಿತ್ಯದ ದಾಖಲೆಯ ಸ್ಥಿತಿಯೇನು? ಕನ್ನಡ ಸಾಹಿತ್ಯ ವಿಮರ್ಶೆಯ ಚೌಕಟ್ಟು ನವ್ಯದ ಎಳೆಗಳೊಂದಿಗೆ ಇನ್ನಿಲ್ಲದಂತೆ ತಳುಕು ಹಾಕಿಕೊಂಡಿರುವುದರಿಂದ ಪರ್ಯಾಯ ಪರಂಪರೆಗಳ ಧ್ವನಿಗಳೂ ಸಹ— ಅವು ಪ್ರಗತಿಶೀಲದ್ದಾಗಿರಲಿ, ಬಂಡಾಯದ್ದಾಗಿರಲಿ, ಅಥವಾ ಸ್ತ್ರೀವಾದದ್ದೇ ಆಗಿರಲಿ— ಇದರ ಒರೆಗಲ್ಲಿಗೇ ತಿಕ್ಕಲ್ಪಟ್ಟು, ತಾವು ಶ್ರೇಷ್ಠವೋ, ಜನಪ್ರಿಯವೋ, ಕನಿಷ್ಠವೋ ಎಂದು ತೀರ್ಮಾನಿಸಲ್ಪಡುತ್ತಿರುತ್ತವೆ. ಹಾಗೆ ಸಿದ್ಧವಾಕ್ಯಗಳಲ್ಲಿ 'ಸ್ಪಷ್ಟ'ವಾದ ತೀರ್ಮಾನವನ್ನು ಕೊಡಲಾಗದಿದ್ದಾಗ ಈ ಮುಖ್ಯವಾಹಿನಿ ಧ್ವನಿ ಪಡೆದುಕೊಳ್ಳುವ ರೂಪಗಳು ಕುತೂಹಲಕಾರಿಯಾಗಿರುತ್ತವೆ. ಈ ದಿಸೆಯಲ್ಲಿ ತನಗೆ ಸೆಡ್ಡು ಹೊಡೆದು ನಿಂತ ಧ್ವನಿಗಳನ್ನು ಸಹ 'ಮೂಲತಃ ನಮ್ಮವೇ' ಎಂದು 'ಉದಾರ'ವಾಗಿ ತನ್ನ ತೆಕ್ಕೆಗೆ ತೆಗೆದುಕೊಂಡು ತನ್ನ ಸ್ಥಾನವನ್ನು ಸ್ಥಿರೀಕರಿಸಿಕೊಳ್ಳುವ ಅಥವಾ ತನ್ನ ಹರವನ್ನು ಹೆಚ್ಚಿಸಿಕೊಳ್ಳುವ ಹುನ್ನಾರ ಇದರ ಒಂದು ರೂಪವಾದರೆ, ಬಂಡಾಯ ಲೇಖಕರನ್ನು (ಇಲ್ಲಿ ಲೇಖಕಿಯರು ಇರುವುದೇ ಇಲ್ಲ) ಒಂದೇ ಚೌಕಟ್ಟಿಗೆ ಸೀಮಿತಗೊಳಿಸಲಾಗದಿದ್ದಾಗ ಅವರನ್ನು 'ಸಮನ್ವಯ' ಬರಹಗಾರರೆಂದು ಕರೆದು ಸಮನ್ವಯಿಸುವುದು ಇದರ ಉದಾರತೆಯ ಇನ್ನೊಂದು ರೀತಿ ಅಥವಾ ಈ ವ್ಯಾಖ್ಯಾನಕ್ಕೂ ಸಿಲುಕದ 'ಮುರಿದ್ಭಾಷಕರ' ಘಟನೆಯೇನಾದರೂ ಸಂಭವಿಸಿ

ಇದರ ಪ್ರಕಾರ ಶ್ರೇಷ್ಠರಲ್ಲದ ಲೇಖಕರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೆಂದು ಆರಿಸಲ್ಪಟ್ಟಲ್ಲಿ 'ಸಾಹಿತ್ಯದಲ್ಲಿ ಶ್ರೇಷ್ಠತೆಯೇ ಮುಖ್ಯ' ಎಂದು ವಿಜೃಂಭಿಸಿ ಪರ್ಯಾಯ ಸಮ್ಮೇಳನ ನಡೆಸುವುದರ ಮೂಲಕ ತನ್ನ 'ಶ್ರೇಷ್ಠತೆಯ ವ್ಯಸನ'ವನ್ನು ಬಹಿರಂಗಪಡಿಸಿಕೊಳ್ಳುವುದು ಇನ್ನೊಂದು ಪರಿ.

'ಕಿವಿಮಾತು' ಹೇಳುವ ವಿಮರ್ಶಕರಿಗೆ ತಮ್ಮ ನಿಲುವಿನ ಹಿಂದೆ ಮತ್ತು ಸಿದ್ಧಚರಿತ್ರೆಯಲ್ಲಿನ ಹಂದರವನ್ನು ರಚಿಸಬೇಕಾದ ಅನಿವಾರ್ಯತೆ ಒದಗುತ್ತದೆ. ಹಾಗಾಗಿ ಸಾಹಿತ್ಯಕ ಚರಿತ್ರೆಯ ಕಥಾನಕದಲ್ಲಿ ಸ್ತ್ರೀಬರಹಗಾರರಿಗೆ ಯಾವ 'ಚೌಕಟ್ಟನ್ನು' ನೀಡಿ ಎಲ್ಲಿ ಇರಿಸಲಾಗಿದೆ ಎಂಬುದು ಪ್ರಸ್ತುತವಾಗುತ್ತದೆ. ಒಂದು ಉದಾಹರಣೆಯನ್ನು ನೋಡೋಣ:

"ಬೇರೆ ವಿಷಯಗಳತ್ತ ತಿರುಗುವ ಮುನ್ನ ಆರನೆಯ ದಶಕದ ಮಧ್ಯಭಾಗದ ವಿಶಿಷ್ಟ ಬೆಳವಣಿಗೆಯೊಂದನ್ನು ಗಮನಿಸಬೇಕು. 'ತ್ರಿವೇಣಿ' ಎಂಬ ಕಾವ್ಯನಾಮದಿಂದಲೇ ಹೆಚ್ಚು ಪರಿಚಿತರಾದ ಅನಸೂಯಾ ಶಂಕರ್ (1928-63) ಈ ದಶಕದಲ್ಲಿ ಬರೆಯಲಾರಂಭಿಸಿದರು. ಅವರು ಅಪೂರ್ವ ಜನಪ್ರಿಯತೆಯನ್ನು ಪಡೆದರು. ಇಂದಿಗೂ ಅವರ ಓದುಗರದು ವಿಶಾಲವಾದ ವೃತ್ತ. ಮಧ್ಯಮವರ್ಗದ ಕುಟುಂಬಗಳ ಬದುಕನ್ನು ಚಿತ್ರಿಸುವುದರಲ್ಲಿ ಅವರು ತೃಪ್ತಿ ಕಂಡರು. ಸ್ತ್ರೀಯರಲ್ಲಿ ಗಾಢವಾಗಿ ಬೇರೂರಿರುವ ಪ್ರೀತಿಯ ಹಸಿವು ಮತ್ತು ತಾಯ್ತನದ ಬೆಂಬಲಕ್ಕೆ ಅಭಿವ್ಯಕ್ತಿ ಕೊಟ್ಟಿದ್ದರಿಂದ ಅವರ ಜನಪ್ರಿಯತೆ ಏರುತ್ತಾ ಹೋಯಿತು. ಮನೋವಿಜ್ಞಾನದ ಔಪಚಾರಿಕ ಬಳಕೆಯನ್ನೂ ಅವರು ಕಾದಂಬರಿಗೆ ತಂದರು. ಕೆಲವು ಶಾಸ್ತ್ರೀಯ ಮನೋವಿಜ್ಞಾನದ ತುಂಡುಗಳೇ ಸಿಕ್ಕುತ್ತವಾದರೂ 'ಶರಪಂಜರ' ದಂತಹ ಕಾದಂಬರಿಯಲ್ಲಿ ಮನೋವಿಜ್ಞಾನ ಕಥೆಯಲ್ಲಿ ಹಾಸುಹೊಕ್ಕಾಗಿದೆ. ಸಾಹಿತ್ಯ ಜಗತ್ತಿನಲ್ಲಿ ತ್ರಿವೇಣಿಯವರು ಕಾಣಿಸಿಕೊಂಡ ನಂತರ, ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಕಾದಂಬರಿಗಳನ್ನು ಬರೆದಿದ್ದಾರೆ. ಅವರ ಸೃಷ್ಟಿಯ ವ್ಯಾಪ್ತಿ ಸಾಕಷ್ಟು ವಿಶಾಲವಾಗಿಲ್ಲ, ಅವರ ಸಾಧನೆಯೂ ಮಿತವಾಗಿದೆ. ಆದರೆ ಈಚೆಗಿನ ವರ್ಷಗಳಲ್ಲಿ ಅವರು ಪ್ರಯೋಗಶೀಲತೆಯನ್ನು, ಸ್ವತಂತ್ರ ವಿಚಾರ ರೀತಿಯನ್ನು ತೋರುತ್ತಿದ್ದಾರೆ."

1984ರಲ್ಲಿ ಪ್ರಕಟವಾದ 'ಭಾರತೀಯ ಸಾಹಿತ್ಯ ಸಮೀಕ್ಷೆ'ಯ ಕನ್ನಡ-ಕಾದಂಬರಿ ವಿಭಾಗದಲ್ಲಿ 'ಕಾದಂಬರಿಕಾರ್ತಿಯರು' ಎಂಬ ಶೀರ್ಷಿಕೆಯಡಿ ಬರುವ ಒಂದೇ ಒಂದು ಪುಟ್ಟ ಪ್ಯಾರಾ ಇದು. ಕಾದಂಬರಿ ಪ್ರಕಾರದ ಹುಟ್ಟು, ಬೆಳವಣಿಗೆ, ಅದರ ರಾಜಕೀಯ-ಸಾಂಸ್ಕೃತಿಕ-ಸಾಮಾಜಿಕ ಒತ್ತಡಗಳನ್ನು ವಿವರವಾಗಿ ದಾಖಲಿಸುವ ಚರಿತ್ರಕಾರರು ಪ್ರಗತಿಶೀಲ ಮತ್ತು ನವ್ಯ ವಿಭಾಗಗಳ ನಡುವೆ ಸೇರಿಸಿರುವ (ಮರೆತಿದ್ದನ್ನು ಜ್ಞಾಪಿಸಿಕೊಂಡಂತೆ?) ಈ ಶೀರ್ಷಿಕೆಯಲ್ಲಿ ಮಹಿಳಾ ಬರಹಗಾರರ ಬಗ್ಗೆ -ಚಾರಿತ್ರಿಕ ಕಾರಣಗಳಿಗಾಗಿಯಾದರೂ ಸಹ- ಇನ್ನೇನೂ ಹೇಳುವುದಿಲ್ಲ. ಈ ತೆರನಾದ ಚರಿತ್ರೆಯ ಪ್ರಕಾರ 'ಕಾಣಿಸಿಕೊಳ್ಳುವ' ಲೇಖಕಿಯರಿಗೆ ಮತ್ತು ಸರ್ವಕಾಲಿಕ ಕುಟುಂಬದ ದೈನಿಕತೆಯ ಬಗ್ಗೆ ಬರೆಯುವ ಮಹಿಳಾ ಬರಹಗಾರರಿಗೆ ಯಾವ ಚಾರಿತ್ರಿಕ, ರಾಜಕೀಯ ಘಟನೆಗಳ ಹಂಗು ಇದ್ದಂತಿಲ್ಲ. ಚರಿತ್ರೆ ಹೇಗೆ 'ಹಿಸ್ ಸ್ಟೋರಿ' ಯೋ ವಿಮರ್ಶೆಯೂ ಅಷ್ಟೇ. ಅದಕ್ಕೇ ಅವಳಿಗೆ ಈ ಕಥಾನಕದಲ್ಲಿ ಒಂದು ರೀತಿಯ 'ಪೋಸ್ಟ್‌ಸ್ಕ್ರಿಪ್ಟ್' ಸ್ಥಾನ— ಅಬ್ಬಬ್ಬ ಅಂದರೆ ಅವಳು 'ಜನಪ್ರಿಯ'ಳು ಅಷ್ಟೇ, ಆದರೆ ಗಂಭೀರವಾಗಿ ಪರಿಗಣಿಸತಕ್ಕವಳಲ್ಲ. 84ರ ಅಂದಿನ ಸಾಹಿತ್ಯ ಚರಿತ್ರೆಗೂ ಇಂದಿಗೂ ತಾತ್ವಿಕವಾಗಿ ಹೆಚ್ಚು ವ್ಯತ್ಯಾಸವಿಲ್ಲ. ಆಶಾದೇವಿ ಒಂದು ಕಡೆ ಹೇಳಿದಂತೆ 'ಅವಳ' ಕಥೆಗಳನ್ನು ಅವಳ ಬಿಡಿಬಿಡಿ ಅನುಭವಗಳನ್ನಾಗಿ ನೋಡುವ ಪ್ರಯತ್ನಕ್ಕೇ ಸೀಮಿತಗೊಳಿಸುವುದು ವಿಮರ್ಶೆಯ ಇಂದಿನ ನಿಲುವು.



ಈ ರೀತಿಯ ಅ-ಚಾರಿತ್ರಿಕ ವಿಮರ್ಶೆ ಒಂದೆಡೆಯಾದರೆ, ಇನ್ನೊಂದು ಕಡೆ ಚರಿತ್ರೆ ಕಥಾನಕದಲ್ಲಿರುವ ಸಿದ್ಧ ಯೂನಿಟ್‌ಗಳ ವ್ಯಾಪ್ತಿಯ ಒಳಗಡೆಯೇ ಆಕೆ ಬರೆದಾಗ ಆ ಕಾಲವಿತ್ತು ಎಂಬ ಕಾರಣಕ್ಕೆ ಆಕೆಯನ್ನು ನವೋದಯದ ಬರಹಗಾರ್ತಿ ಅಂತಲೋ ಅಥವಾ ನವ್ಯದ ಕವಯಿತ್ರಿ ಅಂತಲೋ ಅನಾಯಾಸವಾಗಿ ಕರೆಯಲಾಗುತ್ತದೆ. ಅ-ಚಾರಿತ್ರಿಕಗೊಳಿಸುವುದರ ಇನ್ನೊಂದು ತಾತ್ವಿಕ ರೂಪ ಇದು. 'ನವೋದಯ' ಯಾರದ್ದಾಗಿತ್ತು?

ಬದುಕನ್ನು ಕೌಟುಂಬಿಕ ಮತ್ತು ಸಾಮಾಜಿಕ ಎಂಬ ಎರಡು ವಲಯಗಳನ್ನಾಗಿ ವಿಭಾಗಿಸಿ ಹೆಣ್ಣನ್ನು ವೈಯಕ್ತಿಕ ಮತ್ತು ಕೌಟುಂಬಿಕ ನೆಲೆಯ ಜವಾಬ್ದಾರಳನ್ನಾಗಿ ಮಾಡಿ ಸಂಪ್ರದಾಯವನ್ನು ಸಂರಕ್ಷಿಸುವ ಹೊಣೆಯನ್ನು ಹೊರೆಸಿ ಆ ಮೂಲಕ ಅ-ಚಾರಿತ್ರಿಕತೆಯನ್ನು, ಅ-ಸಾಮಾಜಿಕತೆಯನ್ನು ದಯಪಾಲಿಸುವುದರ ಮೂಲಕ ಪಿತೃ-ಪ್ರಧಾನತೆಯದೇ ಇನ್ನೊಂದು ರೂಪವನ್ನು ಸೃಷ್ಟಿಸಿದ ನವೋದಯದಲ್ಲಿ ಆದದ್ದು ಯಾವ ಲಿಂಗದ, ಯಾವ ಜಾತಿಯ, ಯಾವ ವರ್ಗದ ನವೋದಯ? ನವ್ಯ ಯುಗದಲ್ಲಿ ಬರೆದ ಸ್ತ್ರೀ ಬರಹಗಾರರಿಗೆ, ನವ್ಯಕ್ಕೆ ವಿಶಿಷ್ಟವಾದ 'ಅಂತರ್ಮುಖತೆ', 'ತಾನು ನಿಜವಾಗಬೇಕೆನ್ನುವ ತುದಿತ', 'ಗೀಳಾದ ಕಾಮ', 'ಕಾಡುವ ಬೇರುಗಳನ್ನರಸುತ್ತಾ ಹೊರಡುವ ಆತ್ಮಾರಾಮತೆ', 'ರಾಜಕೀಯ-ಆಧ್ಯಾತ್ಮಿಕ ಭ್ರಮನಿರಸನ' ಇತ್ಯಾದಿ ಇತ್ಯಾದಿ ತೆವಲುಗಳ ಹಂಗಿಲ್ಲದಿದ್ದರೂ ಸಹ 'ನವ್ಯ' ಎಂಬ ಹಣೆಪಟ್ಟಿ ಅಂಟಿಸುವುದು ಎಷ್ಟು ಸರಿ?

ತುಳಿತಕ್ಕೊಳಪಟ್ಟವರ ಧ್ವನಿಯನ್ನು ಎತ್ತಿ ಹಿಡಿದ ಬಂಡಾಯದ ಅಜೆಂಡಾದಲ್ಲಿ ಸಹ ವರ್ಗ ಸಂಘರ್ಷಕ್ಕೆ ಸಿಗುವಷ್ಟು ಮಹತ್ವ ಲಿಂಗಾಧಾರಿತ ಶೋಷಣೆಗೆ ಯಾಕೆ ಸಿಗುವುದಿಲ್ಲ? ಯಾರ ಬಂಡಾಯವಿದು? ಯಾರ ಚರಿತ್ರೆಯಿದು? ಈ ಚರಿತ್ರೆ ಯಾರ ಸಾಹಿತ್ಯವನ್ನು ಹೇಗೆ ವಿಮರ್ಶಿಸುತ್ತದೆ? ಸ್ತ್ರೀಯರಿಂದ ರಚಿಸಲ್ಪಟ್ಟ ಸಾಹಿತ್ಯ ಮತ್ತು ಸ್ತ್ರೀವಾದೀ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನಕ್ಕೂ ಮುಂಚೆ ಚರಿತ್ರೆಯ ವಿಮರ್ಶೆಯ ಮೂಲಕ ವಿಮರ್ಶೆಯ ರಾಜಕೀಯವನ್ನು ನಿರಚನಗೊಳಿಸುವ ಪ್ರಯತ್ನವಾಗಬೇಕು. ಬಹುಶಃ ಆಗ ಮಾತ್ರ ಈ ಪರ್ಯಾಯ ಧ್ವನಿಗಳನ್ನು ಆಲಿಸುವ ಬೌದ್ಧಿಕ ತಾಳ್ಮೆ ಮತ್ತು ಪ್ರಾಮಾಣಿಕತೆ ಸಾಧ್ಯವಾದೀತು. ವಿಮರ್ಶೆಯ ಕೆಲಸವೇ ತನಗೆ ಬೇಕಾದಂಥ ಓದುಗಳನ್ನು ಸೃಷ್ಟಿಸುವುದು. ಇಂಥ ಹುನ್ನಾರಕ್ಕೆ ಏನೇ ತಾತ್ವಿಕ ಮುಗ್ಧತೆಯ ಸೋಗು ಹಾಕಿದರೂ ಅರ್ಥಗಳು ತಾನೇತಾನಾಗಿ ಹುಟ್ಟುವುದಿಲ್ಲ, ಅವುಗಳನ್ನು ಹೊಸೆಯಬೇಕು ಎಂಬ ಪ್ರಜ್ಞೆ ಇದ್ದೇ ಇರುತ್ತದೆ. ಈ ಅರ್ಥಗಳನ್ನು ಹೊಮ್ಮಿಸುವ ಸಂಜ್ಞಾತ್ಮಕ ಮಾದರಿಗಳು ಸಾಂಸ್ಥಿಕ ರಚನೆಗಳ ಬಲದಿಂದಲೇ ಅಸ್ತಿತ್ವದಲ್ಲಿರುತ್ತವೆ. ಈ ಅರ್ಥದಲ್ಲಿ ಪಠ್ಯವೆಂದರೇ ಅರ್ಥಗಳು ಹೊಸೆಯಲ್ಪಡುವ ಒಂದು ಎನ್‌ಕೌಂಟರ್ ಸ್ಪೇಟ್.

ವೈದೇಹಿಯವರನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ವೈದೇಹಿ ಅವರನ್ನು ಕೆಲವೊಮ್ಮೆ 'ನವ್ಯದ' ಲೇಖಕಿ ಎಂದು ಕರೆಯಲಾಗುತ್ತದೆ. ಯಾವ ಸೀರಿಯಸ್ ಆದ ಬೌದ್ಧಿಕ ವಿಶ್ಲೇಷಣೆ ಅಥವಾ ತಾಳ್ಮೆ ಇಲ್ಲದೆ ಮಾಡುವ ಅವಸರದ ವರ್ಗೀಕರಣ ಇದು. ಹಾಗೆ ನೋಡಿದರೆ ಚರಿತ್ರೀಕರಣದ ಈ ಸಿದ್ಧ ಮಾನದಂಡಗಳನ್ನು ಮಹಿಳಾ ಬರಹಗಾರರಿಗೇ ಅನ್ವಯಿಸುವುದೇ ತಪ್ಪು. ಈ ಕಾಲಘಟ್ಟಗಳನ್ನು ಸಮಾಜದಲ್ಲಿ 'ಹೊರ' ಪ್ರಪಂಚದಲ್ಲಿ ನಡೆಯುತ್ತಿದ್ದ 'ಘನ'ವಾದ ಸಾಮಾಜಿಕ/ರಾಜಕೀಯ ವಿದ್ಯಮಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿರುವಂಥವು. ಲೈಂಗಿಕತೆಯೆಂದರೆ ಪುರುಷಲೈಂಗಿಕತೆ ಎಂಬ ಸ್ವ-ಸೂಚಿತ ಪರಿಕಲ್ಪನೆ ಎಂಬಂತೆ ವಿಜೃಂಭಿಸಿ ಮಾತನಾಡುವ, ನಾನು ಅಥೆಂಟಿಕ್ ಆಗಬೇಕು ಎಂದು ಎಷ್ಟೇ ಗೋಳಿಟ್ಟರೂ ವಾಚ್ಯದಲ್ಲೂ ಸ್ಖಲಿಸಲಾಗದ ನವ್ಯದ ಲೇಖಕರಿಗೂ, ಲೈಂಗಿಕತೆಯ ನಿರಚನೆಗೆ ಸಂಬಂಧಪಟ್ಟಂತೆ ಪ್ರಚಂಡ ವಿದ್ರೋಹಕಾರಿ ಪಾತ್ರಗಳನ್ನು ತಣ್ಣಗೆ ಮೂಡಿಸುವ ವೈದೇಹಿಗೂ ತುಂಬ ವ್ಯತ್ಯಾಸವಿದೆ. ಈ ವ್ಯತ್ಯಾಸದ ಎಳೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, 'ಹಿಸ್ ಸ್ಟೋರಿ' ಯ ಮಾನದಂಡಗಳನ್ನು ಪ್ರಶ್ನೆಗೊಳಪಡಿಸುವುದು ಸಾಧ್ಯವಾಗುತ್ತದೆ.

ಎಲ್ಲ ಲೇಖಕಿಯರದು ಸ್ಪಷ್ಟವಾಗಿಯೇ ಜೆಂಡರ್ಡ್ ಆದಂತಹ ಬರವಣಿಗೆ. ಅಂದರೆ ತನಗೆ ಯಾವ ಚೌಕಟ್ಟುಗಳೂ ಬೇಡ ಎಂದು ಸೋಗು ಹಾಕುವ ಬರವಣಿಗೆ ಅಲ್ಲ. 'ಸಾರ್ವತ್ರಿಕ' ಮಾನದಂಡಗಳನ್ನು ಉಪಯೋಗಿಸಿದರೆ ಅವಸರದ ವರ್ಗೀಕರಣ ಆಗಬಲ್ಲದೇ ಹೊರತು, ಒಳನೋಟಗಳು ದಕ್ಕುವುದು ಅನುಮಾನಾಸ್ಪದ. ಚೌಕಟ್ಟುಗಳ ಹಂಗೇ ಬೇಡವೆಂಬ ನಿಲುವಿನಿಂದ ವೈದೇಹಿ 'ನವ್ಯ', 'ಬಂಡಾಯ' ಇತ್ಯಾದಿ ವರ್ಗೀಕರಣಗಳನ್ನು ಮೀರಿದವರು ಎಂಬ ವ್ಯಾಖ್ಯಾನೆಯೂ ಅಷ್ಟೇ ಭೋಳೆತನದ್ದಾಗಿರುತ್ತದೆ ಅಥವಾ ವೈದೇಹಿಯ 'ಆಧ್ಯಾತ್ಮಿಕ ಪ್ರೀತಿ' ಅಕ್ಕಮಹಾದೇವಿಯ ಚೆನ್ನಮಲ್ಲಿಕಾರ್ಜುನ ಪ್ರೀತಿಯಂತೆ ಎಂದು ಅಕ್ಕನ ವಚನಗಳ ಕ್ರಾಂತಿಕಾರಿ ಸಾಧ್ಯತೆಗಳ ಅಂಚನ್ನು ಮೊಂಡುಗೊಳಿಸಿದಂತೆ ವೈದೇಹಿಯ ಧ್ವನಿಯನ್ನೂ ಅಪ್ರಾಪ್ರಿಯೇಟ್ ಮಾಡಿಕೊಳ್ಳುವುದು 'ದಿವ್ಯ ನಿರ್ಲಕ್ಷ್ಯ'ಕ್ಕಿಂತಲೂ ಅಪಾಯಕಾರಿಯೇನೋ. ಸಾಹಿತ್ಯ ಚರಿತ್ರೆಯಲ್ಲಿ ವಿಮರ್ಶೆಯಲ್ಲಿ ವೈದೇಹಿಯನ್ನು ಸ್ಥಾನೀಕರಿಸಿರುವ ರಾಜಕೀಯ, ಅಂಥ ಪ್ರಯತ್ನಗಳ ಪೂರ್ವಗ್ರಹಗಳ ಮೇಲೂ ಬೆಳಕು ಚೆಲ್ಲಬಹುದು.

ಓ. ಎಲ್. ನಾಗಭೂಷಣ್ ಅವರ "ಚೌಕಟ್ಟನ್ನು ದಾಟಿ" ಎಂಬ ನಿಲುವು ಯಾವುದು ಚೌಕಟ್ಟಲ್ಲ ಎಂಬ ಪ್ರಶ್ನೆಯನ್ನು ಮುಖ್ಯವಾಗಿ ಎತ್ತುತ್ತದೆ. ಚೌಕಟ್ಟುಗಳನ್ನು ಮೀರುವ ಯುಟೋಪಿಯನ್ ನಿಲುವು ಯಾವುದೇ ಸೃಜನಾತ್ಮಕ ಕ್ರಿಯೆಗೆ ಭಾಷೆ, ನಾಡು, ದೇಶ, ಕಾಲ, ಲಿಂಗದ ಚೌಕಟ್ಟುಗಳಿದ್ದೇ ಇರುತ್ತವೆ ಎಂಬುದನ್ನು ಮರೆಯುವ ಸಾಧ್ಯತೆ ಇರುತ್ತದೆ. ಹಾಗೆ ಮರೆತಾಗ ಜನಸಂಖ್ಯೆಯಲ್ಲಿ ಶೇಕಡಾ ಐವತ್ತು ಭಾಗವಿರುವ ಹೆಂಗಸರಿಗೆ ಕೇವಲ ಶೇಕಡಾ ಮೂವತ್ತ್ಮೂರು ಮೀಸಲಾತಿಯ ಬಗ್ಗೆಯೂ ನಮ್ಮ ರಾಜಕಾರಣಿಗಳು "ಹೆಂಗಸರು ಮೀಸಲಾತಿಯಂತಹ ಕ್ಷುಲ್ಲಕ ವಿಷಯಗಳನ್ನು ಬಿಟ್ಟು ಗಹನವಾದ ಸಂಗತಿಗಳತ್ತ ದೃಷ್ಟಿ ಹರಿಸಬೇಕು" ಎಂಬ ಬೋಧಿಸುವ ಕಿವಿಮಾತಿನಂತೆಯೇ ಕೇಳಿಸುವ ಅಪಾಯ ಹೆಚ್ಚಾಗಿರುತ್ತದೆ. ●

ಅಂಬರೀಷಣ್ಣಂಗೆ ರಾಜೀನಾಮೆ ಕೊಡೋದೆ ಗೊತ್ತಿಲ್ವಂತೆ!

ಅಂಬರೀಷ್ಣ ರಾಜೀನಾಮೆ ನೀಡಿದರು!

ದಿಗ್ಭ್ರಮೆಗೊಂಡಿತು ಅಭಿಮಾನಿ ಸಮೂಹ.


ಅಂಬರೀಷ್ ಯಾಕೆ ರಾಜೀನಾಮೆ ನೀಡಿದರು?

ಕಾವೇರಿ ನೀರಿಗಾಗಿಯೇ? ತಾನು ಪ್ರತಿನಿಧಿಸುವ ಜನರ ಒಳಿತಿಗಾಗಿಯೆ? ಇಲ್ಲ. ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಹೋಗಿದ್ದ ಅವರಿಗೆ ಬೆಂಗಳೂರಿನ ಕೆಲವು ವಕೀಲರು ದಿಗ್ಬಂಧನ ಹಾಕಿದ್ದರು; ರಾಜೀನಾಮೆ ನೀಡುವಂತೆ ಒತ್ತಾಯಿಸಿದ್ದರು. ಬೇಸರ ಆಯಿತು ಈ ಮಂಡ್ಯದ ಗಂಡಿಗೆ. ರಾಜೀನಾಮೆ ಕೆರೆದು ಬಿಸಾಕಿದರು. ಅಷ್ಟಕ್ಕೇ ತೆಪ್ಪಗಾದರು ಅಂತೀರಾ ಆ ವಕೀಲರು. ಅಂಬರೀಷಣ್ಣಾರ ರಾಜೀನಾಮೆ ತಂತ್ರ ತಿಳಿದಿದ್ದರು ಅಂತ ಕಾಣುತ್ತೆ. ಕೆಣಕಿದರು- "ಯಾರಿಗೆ ಕೊಟ್ಟರಿ ರಾಜೀನಾಮೆ?"

'ಸ್ಪೀಕರ್‌ಗೆ, ಪ್ರಧಾನಿಗೆ, ಸೋನಿಯಾ ಅವರಿಗೆ' ಉತ್ತರಿಸಿದರು ಅಂಬರೀಷ್. ಛೇ ಆಗ ನೋಡಬೇಕಿತ್ತು ಅವರ ಮುಖಾನ. ಏಯ್ ಮಂಕು ನನ ಮಕ್ಳಾ ನನಗೆ ಅಷ್ಟೂ ತಿಳಿಯದೆ ಅನ್ನುವ ಧೋರಣೆ! ಸಿನಿಮಾಗಳಲ್ಲಿ ಖಳನಾಯಕನನ್ನ ಹಂಗಿಸುವಾಗ ನಾಯಕನ ಮುಖ ಇರುತ್ತಲ್ಲ ಥೇಟ್ ಹಂಗೇ ಕಂಗೊಳಿಸುತ್ತಿತ್ತು. ಮಂಕಾಯಿತು ಪ್ರತಿರೋಧ ವೃಂದ. ಆದರೆ....

ಅಂಬರೀಷ್ ರಾಜೀನಾಮೆ ಪತ್ರ ತಿರಸ್ಕೃತ ಆಯಿತು. ಯಾಕೆಂದರೆ ಅದು ನಿರ್ದಿಷ್ಟ ನಮೂನೆಯಲ್ಲಿರಲಿಲ್ಲವಂತೆ!

ಮೂರು ಸಲ ಸಂಸದ ಆದವರಿಗೆ ರಾಜೀನಾಮೆ ನೀಡುವ ಕನಿಷ್ಠ ವಿವರಗಳಾದರೂ ತಿಳಿದಿಲ್ಲವೆ ಅಂದರೆ... ರಾಜೀನಾಮೆ ನೀಡಿ ಅವರಿಗೆ ಅನುಭವ ಇಲ್ಲ ಎಂದು ಕೆಲವರೂ, ಅವರು ರಾಜೀನಾಮೆ ನೀಡುವುದೇ ಒಪ್ಪಿಗೆಯಾಗದಂತಿರಲಿ ಎಂದು ಮತ್ತೆ ಕೆಲವರೂ; ಅವರು ಈ ವಯಸ್ಸಿನಲ್ಲಿ ರಾಜೀನಾಮೆ ನೀಡಿ ಏನು ಮಾಡ್ತಾರೆ ಪಾಪ, ಆ ಕಡೆ ಸಿನಿಮಾಗಳಲ್ಲಿ ಅವಕಾಶ ಇಲ್ಲ ಈ ಕಡೆ ಮಂತ್ರಿ ಪದವೀನೂ ಹೋದರೆ ಜೀವನ ಹೇಗೆ ಸಾಗಿಸಬೇಕು ಅದಕ್ಕೆ ಹೀಗೆ ಮಾಡಿದಾರೆ ಅಂತ ಹಲವರು.... ಹೀಗೆ ತಮ್ಮ ತಮ್ಮ ಭಾವಕ್ಕೆತಕ್ಕಂತೆ ಹಲುಬುತ್ತಿದ್ದಾರೆ.



ಇರಲಿ. ಈಗಿನ ಪ್ರಶ್ನೆ ಏನು ಅಂದರೆ ರಾಜೀನಾಮೆಯನ್ನು ಅಂಬರೀಷ್ ಮಾತ್ರ ಅಲ್ಲ, ಇತರೆ ಸಂಸದರು ನೀಡಬೇಕೋ, ಬೇಡವೋ ಎನ್ನುವುದು. ಸಂಸದರು ರಾಜೀನಾಮೆ ನೀಡಿ ಸಾಂವಿಧಾನಿಕ ಬಿಕ್ಕಟ್ಟು ಉಂಟುಮಾಡಲಿ ಅಂತ ಕೆಲವರು ಹೀಗೆ ಹೇಳುವವರಲ್ಲಿ ಹಲವಾರು ಸಂಸದರು ಅನುಭವಿಸುತ್ತಿರುವ ಸೌಲಭ್ಯಗಳನ್ನು ಕಂಡು ಆ ಸೌಲಭ್ಯ ನಮಗಿಲ್ಲವಲ್ಲ ಅಂತ ಹೊಟ್ಟೆ ಉರಿದುಕೊಳ್ಳುವವರು ಎಂಬ ಅಭಿಪ್ರಾಯವೂ ಇದೆ. ಸಂಸದರು ರಾಜೀನಾಮೆ ನೀಡಿ ಸಾಧಿಸುವುದು ಏನೂ ಇಲ್ಲ, ಅವರು ಸಂಸತ್ತಿನ ಒಳಗೆ ಹೋರಾಡಲಿ ಎಂಬ ಅಭಿಪ್ರಾಯ ವ್ಯಕ್ತಪಡಿಸುವವರೂ ಇದ್ದಾರೆ. ಈ ಗುಂಪಿನವರಿಗೆ ಸಂಸದರ ಕಷ್ಟ ಅರಿವಾಗುವುದಿಲ್ಲ, ಯಾವುದೇ ಸಮಸ್ಯೆ ಕುರಿತು ಸಂಸತ್ತಿನಲ್ಲಿ ವಾದ ಮಂಡಿಸಬೇಕಾದರೆ ಅದರ ಪರಿಚಯ ಸಂಪೂರ್ಣವಾಗಿ ಇರಬೇಕು. ಆಳವಾದ ಅಧ್ಯಯನ ಮಾಡಿರಬೇಕು. ನಂತರ ಅದನ್ನು ಸಮರ್ಥವಾಗಿ ಮಂಡಿಸುವ ಸಾಮರ್ಥ್ಯ ಇರಬೇಕು. ಹೀಗೆ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಯಂತೆ ಹಗಲೂ ರಾತ್ರಿ ಓದಿ, ವಿಷಯ ಅರ್ಥ ಮಾಡಿಕೊಳ್ಳುವ ಹಾಗಿದ್ದರೆ ಅವರೇಕೆ ಸಂಸದರಾಗಬೇಕಿತ್ತು? ಐಎಎಸ್ ಪಾಸು ಮಾಡಿ ಅಧಿಕಾರದ ಮಜ ಅನುಭವಿಸುತ್ತಿದ್ದರು ಎನ್ನುವವರೂ ಉಂಟು!

ಇದೇ ಗೊಂದಲದಲ್ಲಿದ್ದವನಿಗೆ ಮಂಡ್ಯ ಜಿಲ್ಲಾ ರೈತರ ಹಿತರಕ್ಷಣಾ ಸಮಿತಿ ಬೆಂಗಳೂರಿನಲ್ಲಿ ಕರೆದಿದ್ದ ಸಂಸದರ ಸಭೆಯಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿತ್ತು. ಅಲ್ಲಿ ಎದುರಾದ ಸಂಸದರೊಬ್ಬರಿಗೆ ಕೇಳಿದೆ-

'ನೀವು ರಾಜೀನಾಮೆ ನೀಡ್ತೀರಾ?'

'ಇನ್ನೇನ್ರಿ ಮತ್ತೆ. ನಮ್ಮನ್ನೆಲ್ಲ ನಿಮ್ಮ ಕಡೆಯೋರು ನಾಯಿ, ಕತ್ತೆಗಳು ಎಂದೆಲ್ಲ ಬಂಬಿಸುತ್ತಿದ್ದೀರಲ್ರಿ'. ಅಂತ ನೊಂದುಕೊಂಡರು. ಅವರ ಮಾತಿನಲ್ಲಿ ವ್ಯಥೆ ತುಂಬಿತ್ತು. ಪಾಪ ಮೊದಲ ಬಾರಿಗೆ ಸಂಸದ ಆಗಿದ್ದವರಂತೆ. ಇನ್ನೂ ಆತ್ಮಸಾಕ್ಷಿ ಅನ್ನೋದು ಉಳಿದಿತ್ತು. ಅದಕ್ಕೆ ಹೀಗೆಲ್ಲ ಕೊರಗಿದ್ದರು.

'ಹಾಗಾದರೆ ರಾಜೀನಾಮೆ ಕೊಡ್ತೀರಿ ಅನ್ನಿ?'

'ಸಮಸ್ಯೆ ಬಗೆಹರಿಯುತ್ತೆ ಅಂದರೆ ಕೊಡ್ತೀನಿ' ಈಸ್ ಆಗಿದ್ದವನು ವಾಸ್ ಆಗಿಬಿಡ್ತೀನೇನೋ ಅನ್ನೋ ಗಾಬರಿ ದನಿ ಇರುತ್ತಲ್ಲ ಹಾಗಿತ್ತು ಅವರ ದನಿ.

'ಕಾವೇರಿ ಸಮಸ್ಯೇನ ಸಂಸತ್ತಿನಲ್ಲಿ ಎತ್ತುತ್ತೀರಾ?'

'ಎಲ್ರಿ ಎರಡು ವರ್ಷ ಆತಲ್ರಿ ಅಲ್ಲಿಗೋಗಿ. ಇನ್ನೂ ಬಾಯಿ ತೆರ್‍ಯಾಕ ಸಮಯ ಸಿಕ್ಕಲ್ರಿ. ಇನ್ನು ಕಾವೇರಿ ಎಲ್ಲಿ ಎತ್ತದ್ರಿ?'

ಅಂದರೆ ಸಂಸದರು ಒಳಗಿದ್ದರೂ ಹೊರಗಿದ್ದರೂ ಪರಿಣಾಮ ಮಾತ್ರ ಒಂದೇ ಅಂದ ಹಾಗಾಯಿತು!

ಇದು ಕೇಂದ್ರದ ನಾಯಕರ ಸಮಾಚಾರ ಆಯಿತು. ಮುಖ್ಯಮಂತ್ರಿಯವರು ಅಂದಿನ ಸಭೆಗೆ ಬಂದಿದ್ದರು. ಅವರ ವಿಷಯ ಏನು ತಿಳಿಯೋಣ ಎಂದು ಕಿವಿ ಎರಡನ್ನೂ ನಿಮಿರಿಸಿ ಕಾಯ್ತಿದ್ದೆ. ಅವರು ತುಟಿ ಎರಡು ಮಾಡಲಿಲ್ಲ. ಕೆಲವರು ಮಾತನಾಡುತ್ತಿದ್ದುದ್ದನ್ನು ಕೇಳಿಸಿಕೊಂಡವರೇ 'ಬರ್‍ತೀನಿ' ಅಂತ ಹೊರಟುನಿಂತರು. ಸರ್ಕಾರದ ನಿಲುವು ತಿಳಿಸಿ ಅಂತ ಆಗ್ರಹಿಂಸಿದ್ದಕ್ಕೆ. ಏನು ಹೇಳಿರಬಹುದು.... ಅದೇ ಸೂಕ್ತ ಸಮಯದಲ್ಲಿ ವಿವರಿಸುತ್ತೇನೆ... ಸಾರ್ವಜನಿಕವಾಗಿ ಇದನ್ನು ಚರ್ಚಿಸಲು ಸಾಧ್ಯ ಇಲ್ಲ.... ಈ ಸಭೆ ತೆಗೆದುಕೊಂಡ ತೀರ್ಮಾನಕ್ಕೆ ಸರ್ಕಾರ ಬದ್ಧ.... ಇಂತಹ ಧ್ವನಿಮುದ್ರಿತ ಮಾತುಗಳಂತಹವು! ಅಲ್ಲಾ ಮುಖ್ಯಮಂತ್ರಿಯವರೇ ಹೇಳಲಿ ಅಂತ ಸಭೆ ಸಮಾರಂಭ ಏರ್ಪಡಿಸಿ ಅವರನ್ನು ಕಾಯುತ್ತ ಕೂರುವುದಕ್ಕಿಂತ ಅವರ ಧ್ವನಿಮುದ್ರಿತ ಭಾಷಣವನ್ನೇ ಬಳಸಬಹುದಲ್ಲಾ.... ಅವೆಲ್ಲ ಒಂದೇ ರೀತಿಯಾಗಿರುತ್ತವಲ್ಲಾ... ಚರ್ವಿತಚರ್ವಣ ಅಂತಾರಲ್ಲ ಹಾಗಿರುತ್ತಲ್ಲಾ ಅಂತ!

ಅಣಕ

ಮುಖ್ಯಮಂತ್ರಿಯವರಿಗೆ ಹೀಗೆ ಮಾತನಾಡುವುದು ಜಾಣತನ ಅನ್ನಿಸಿರಬಹುದು. ಆದರೆ ಕೇಳುಗರ ಕಿವಿಗಳಿಗೆ ದಡ್ಡತನದ ಮಾತಾಗಿ ಬೀಳುತ್ತವೆ. ಇಂತಹ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಗೃಹಮಂತ್ರಿಯವರು ಕುಳಿತಿದ್ದರು. ಶ್ರೀಮದ್ ಗಾಂಭೀರ್ಯದಿಂದ 'ನಾನು ಏನನ್ನೂ ಹೇಳಲು ಬಯಸುವುದಿಲ್ಲ' ಅಂದರು. ನೀವು ಮಾತನಾಡಲೇಬೇಕು ಅಂತ ಕೆಲವು ಸಭಿಕರು ಒತ್ತಾಯಿಸುತ್ತಿದ್ದರು. 'ಯಾಕಪ್ಪಾ ಹೀಗೆ ಅವರನ್ನ ಹಿಂಸಿಸುತ್ತೀರಿ. ಸಿಎಂ ಹೇಳಿದ ಮಾತನ್ನೇ ಅವರಿಂದ ಕೇಳಬೇಕೆ' ಅಂದದ್ದಕ್ಕೆ..'ಹಾಗಲ್ಲ ಸಾರ್... ನಮ್ಮ ಪ್ರಕಾಶರು ಬುದ್ಧಿಜೀವಿ ಅಲ್ಲವಾ. ಈ ಸಮಸ್ಯೆ ಪರಿಹಾರಕ್ಕೆ ಯಾವ ದಾರ್ಶನಿಕರನ್ನು ಎಳೆದು ತರುತ್ತಾರೆ ಅನ್ನೋ ಕುತೂಹಲ' ಅನ್ನಬೇಕೆ.... ಥೂ ಹಲ್ಕಾಗಳು ಕಣ್ರಿ....

ಉಚ್ಚೆ ಹುಯ್ದೀರಿ ಹುಷಾರ್!

ಕಾವೇರಿ ನ್ಯಾಯಮಂಡಳಿಯ ಐತೀರ್ಪು ಬಂದಿದೆ.

ಬೆಂಗಳೂರಿಗೆ ಕುಡಿಯುವ ನೀರು?

ಧಾರಾಳವಾಗಿ ನೀಡಿದೆ! ಪೂರ್ತಿ ಬೆಂಗಳೂರಿನ ಜನರಿಗಲ್ಲ, 1/3 ಭಾಗ ಜನರಿಗೆ!

ಯಾಕೆ? ಅವರೇನು ಮಾಡಿದ್ದರು ಪಾಪ?

ಅವರು ಕಾವೇರಿ ಕಣಿವೆಯ ಜನ ಅಲ್ಲ! ಅಂದರೆ ಅವರಿಗೆ ನೀರು ಇಲ್ಲ!

ಕೃಷ್ಣಾ ನದಿಯಿಂದ ತಮಿಳುನಾಡಿಗೆ ಪ್ರತಿವರ್ಷ 5 ಟಿಎಂಸಿ ನೀರು ಕೊಡುತ್ತಿದ್ದೇವಲ್ಲ, ಕನ್ನಡದ ಜನ? ಅದು ಕೃಷ್ಣಾ ಕೊಳ್ಳದಲ್ಲಿ ಇದೆಯ?

ಇಲ್ಲ.

ಹಾಗಿದ್ದರೂ ನಾವು ನೀಡುತ್ತಿದ್ದೇವಲ್ಲ?

ಅದು ಕನ್ನಡಿಗರ ಮೂರ್ಖತನ!

ಆಯಿತು. 1/3 ಭಾಗ ಬೆಂಗಳೂರಿಗರಿಗೆ ನೀಡುವ ನೀರು ಎಷ್ಟು?

ಶೇ. 25 ಜನರಿಗೆ ಒಂದು ದಿನಕ್ಕೆ ಒಬ್ಬರಿಗೆ 135 ಲೀಟರ್ ನೀರು. ಉಳಿದವರಿಗೆ ದಿನಕ್ಕೆ ಒಬ್ಬರಿಗೆ 100 ಲೀಟರ್ ನೀರು.

ಇಷ್ಟಾದರೂ ಪೂರ್ಣ ಸಿಕ್ಕುವುದೆ?

ಇಲ್ಲ, ಇದರಲ್ಲಿ ಶೇ. ಇಪ್ಪತ್ತು ಭಾಗ ಮಾತ್ರ!

ಯಾಕೆ ಹೀಗೆ?

ನಾವು ಬಳಸುವ ನೀರಿನಲ್ಲಿ ಇಷ್ಟು ಮಾತ್ರ ವ್ಯಯ ಆಗುವುದು!

ಉಳಿದ ನೀರು ಏನಾಗುವುದು?

ರಸ್ತೆ ಚರಂಡಿಗಳ ಮೂಲಕ ಮತ್ತೆ ಕಾವೇರಿ ಕಣಿವೆಗೆ ಸೇರುವುದು!

ಆಹಾ, ಎಂತಹ ವೈಜ್ಞಾನಿಕತೆ!

ನ್ಯಾಯಮಂಡಳಿಗೆ ಒಂದು ಸಲಹೆ. ಜನರು ಬಳಸುವ ಶೇ. 80 ಭಾಗ ನೀರು ಮತ್ತೆ ಕಾವೇರಿ ಕಣಿವೆಗೆ ಸೇರಬಹುದಾದರೂ ಅದು ಅಲ್ಲಲ್ಲಿ, ವ್ಯರ್ಥ ಆಗುವ ಸಾಧ್ಯತೆಗಳಿವೆ. ಆದುದರಿಂದ ಇಲ್ಲಿನ ಜನರೆಲ್ಲರೂ ತಮ್ಮ ದೈಹಿಂಬಾಧೆಗಳನ್ನು ಕಾವೇರಿ ನದಿ, ಉಪನದಿಗಳಲ್ಲಿ ಮಾತ್ರ ತೀರಿಸಿಕೊಳ್ಳಬೇಕು ಎಂಬ ಕಟ್ಟುನಿಟ್ಟಿನ ಕಾಯಿದೆ ರೂಪಿಸಿದರೆ ನೀರಿನ ಉಪಯೋಗ ಬಹಳಷ್ಟು ಸುಧಾರಿಸಿದಂತಾಗುವುದು!

ಒಂದು ಸಮಸ್ಯೆ: ಬೆಂಗಳೂರಿಗೆ ಪ್ರವಾಸಿಗರ ಸಂಖ್ಯೆ ಬಹಳ. ಮನೆಗಳಿಗೆ ನೆಂಟರು ಇಷ್ಟರು ಸಾಮಾನ್ಯ, ಅವರೆಲ್ಲ ಬಳಸುವ ನೀರಿನ ಪುನರ್ಬಳಕೆ ಹೇಗೆ?

ಉತ್ತರ: ನ್ಯಾಯಮಂಡಳಿ ಈ ಸಮಸ್ಯೆಗೆ ಪರಿಹಾರ ನೀಡಿಲ್ಲವಾದರೂ, ವಾದ ಸರಣಿಯನ್ನು ಪರಿಶೀಲಿಸಿ ಹೀಗೆ ಹೇಳಬಹುದಾಗಿದೆ: ಇಂತಹ ಆಗಂತುಕರು ನ್ಯಾಯಮಂಡಳಿಯ ಆದೇಶದಂತೆ ತಾವು ಬಳಸಿದ ನೀರು ಸಂಪೂರ್ಣವಾಗಿ ಕಾವೇರಿ ಕೊಳ್ಳಕ್ಕೆ ಸೇರುವವರೆವಿಗೆ ಆ ಪ್ರದೇಶವನ್ನು ಬಿಟ್ಟು ಹೋಗಬಾರದು! ಒಂದು ವೇಳೆ ಬೆಂಗಳೂರಿಗರೇ ಬೇರೆ ಪ್ರದೇಶಗಳಿಗೆ ಹೋಗಬೇಕಾಗಿ ಬಂದರೂ ತಾವು ಉಪಯೋಗಿಸದ ಕಾವೇರಿ ನೀರು ಬೇರೆ ಕೊಳ್ಳಗಳಿಗೆ ಸೇರದಂತೆ ಎಚ್ಚರಿಕೆ ವಹಿಸಬೇಕು. ದೈಹಿಕ ನೋವು ಎಷ್ಟೇ ಆದರೂ ಕಾವೇರಿ ಕೊಳ್ಳಕ್ಕೆ ಬಂದೇ ಈ ಬಾಧೆ ತೀರಿಸಿಕೊಳ್ಳಬೇಕು! ಬೇರೆಲ್ಲಾದರೂ ಉಚ್ಚೆ ಹುಯ್ದೀರಿ ಹುಷಾರ್!

ಆಧುನಿಕ ಜಾತಿವಿನಾಶ ತಂತ್ರ

ಕಾವೇರಿ ವಿವಾದದಲ್ಲಿ ಕರ್ನಾಟಕ ಸೋತು ಸುಣ್ಣ ಆಗಿದೆ.

ಈ ಸೋಲನ್ನು ಗೆಲುವಾಗಿ ಪರಿವರ್ತಿಸಲು ಸೂತ್ರ ಇರುವುದೆ?

ಇದೆ!

ಯಾವುದು?

ಚನ್ನಪಟ್ಟಣ-ಶ್ರೀರಂಗಪಟ್ಟಣ ಹೆದ್ದಾರಿಯ ರೈತರಿಗೆ ಸೂತ್ರ: ರಸ್ತೆಯಲ್ಲಿ ಬಿರ್ಯಾನಿ ಮಾಡಿ ಹಂಚುವುದು!!

ಇದು ಅಬ್ರಾಹ್ಮಣ ಸೂತ್ರ ಆಯಿತು. ಬ್ರಾಹ್ಮಣ ಸೂತ್ರ ಇರುವುದೆ?

ಇದೆ! ಅಖಿಲ ಭಾರತ ಬ್ರಾಹ್ಮಣರ ಸಂಘಕ್ಕೆ ಹೊಳೆದಿದೆ ಇದು!

ಏನದು?

ಕೋಟೆ ಆಂಜನೇಯ ದೇವಸ್ಥಾನದಲ್ಲಿ ಹೋಮ!!

ಬಿರ್ಯಾಣಿ ಹೆಸರಿನಲ್ಲಿ ಹಣದ ವಸೂಲಿ ಅಲ್ಲಿ! ಹೋಮದ ಹೆಸರಿನಲ್ಲಿ ವಸೂಲಿ ಇಲ್ಲಿ! ಇಲ್ಲಿ ಆಗಿದೆ ಜಾತಿ ವಿನಾಶ!

-ಎಚ್.ಎಲ್. ಕೇಶವಮೂರ್ತಿ

ಸ್ವಾಮಿಗಳಂತೆನ್ನಿಸಿಕೊಂಡರೂ ಪಾಪಯೋನಿಗಳು ಪಾಪಯೋನಿಗಳೇ

ಸನಾತನ ಧರ್ಮವೆಂದು ಸ್ವಯಂ ತಾರೀಫು ಮಾಡಲ್ಪಡುತ್ತಿರುವ (ಸ-ನಾತ= ಅಸ್ಪೃಶ್ಯತೆ ತಾರತಮ್ಯಗಳೆಂಬ ನಾತದಿಂದ ಕೂಡಿರುವ ಎಂದೆನ್ನಲೂಬಹುದು) ಹಿಂದೂ ಧರ್ಮದ ಅಡಿಪಾಯವೇ ಕರ್ಮಸಿದ್ಧಾಂತ. ಈ ಕಾರಣದಿಂದಾಗಿ ಶೂದ್ರರನ್ನು ಮಧ್ವನಂತವರು ನಿಕೃಷ್ಟಾರಕಿಗಳು ಎಂದು ಹೊಗಳಿದರೆ, ಭಗವದ್ಗೀತೆ ಪಾಪಯೋನಿಗಳು ಎಂದು ಸ್ತುತಿಸಿದೆ (ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಪಿ ಸ್ಯು ಪಾಪಯೋನಯಃ ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಸ್ತೇಪಿ ಯಾಂತಿ ಪರಾಂ ಗತಿಂ-ಗೀತೆ 9 ನೇ ಅಧ್ಯಾಯ 32 ನೇ ಶ್ಲೋಕ). ವೈದಿಕರ ಅಡಿಯಾಳು ರಾಮನಂತೂ ಶಂಭೂಕನಂತ ಶೂದ್ರಪಾತಕಿಗೆ ಸೀದಾ ಮುಕ್ತಿಯನ್ನೇ ಕೊಟ್ಟರೆ ಮನು ಶೂದ್ರರನ್ನು ಹೊಗಳಲು ಸಾವಿರ ಜನ್ಮವೇ ಸಾಲದು ಎಂದುಬಿಟ್ಟ. ಆದರೆ ಇದೀಗ ಅಧಃಪತನಕ್ಕಿಳಿಯುತ್ತಿರುವ ಮನುಧರ್ಮವನ್ನು ಮರುಸ್ಥಾಪಿಸಲೋಸುಗ ಕೆಲ ಬ್ರಾಹ್ಮಣಶಾಹಿ ಮನಸ್ಸುಗಳು ಸಮಾಜೋತ್ಸವವೆಂಬ ಡೊಂಬರಾಟವನ್ನು ಅಲ್ಲಲ್ಲಿ ಆಯೋಜಿಸುತ್ತಿವೆ. ಮೇಲ್ವರ್ಗದ ಹುನ್ನಾರವನ್ನು ತಿಳಿದೂ ಕೂಡ ಭಾಗ ವಹಿಸಿದ ಶೂದ್ರ ಸ್ವಾಮೀಜಿಗಳು ಇಂಗು ತಿಂದ ಮಂಗನಂತೆ ಸಾರ್ವಜನಿಕವಾಗಿ ಅವಮಾನಿತರಾಗಿ ಎಚ್ಚೆತ್ತಿದ್ದಾರೆ. ಅಂತಹವರಲ್ಲಿ ಕೊಲ್ಯರಮಾನಂದ ಸ್ವಾಮೀಜಿಯೂ ಒಬ್ಬರು.

ಈ ಸಂಬಂಧ ವಾರದ ಕನ್ನಡಿಯಲ್ಲಿ ಹೇಳಲ್ಪಟ್ಟಂತೆ ಶ್ರೀ ರಮಾನಂದ ಸ್ವಾಮಿಯವರ ಮಾತನ್ನ ಎಲ್ಲಾ ಶೂದ್ರ ಸ್ವಾಮಿಗಳೂ ಮನನ ಮಾಡಬೇಕಿದೆ. ಕೆಲವೊಮ್ಮೆ ಹಿಂದೂತ್ವದ ಪಕ್ರಾರನಂತೆ ವರ್ತಿಸುವುದಿದ್ದರೂ ಕೂಡ ಕರಾವಳಿ ಜಿಲ್ಲೆಯಲ್ಲಿ ಮಾನವೀಯ ಮೌಲ್ಯಗಳಿಗೆ ಬೆಲೆ ನೀಡುವಂತಹವರಲ್ಲಿ ಶ್ರೀ ಕೊಲ್ಯ ರಮಾನಂದರೂ ಒಬ್ಬರು ಎಂಬುದರಲ್ಲಿ ಎರಡು ಮಾತಿಲ್ಲ. ಇಂತಹವರು ಇನ್ನಾದರೂ ಕೆಲ ಸೋಗಿನ ಸ್ವಾಮಿಗಳ (ಬಡ್ಡಿ ಪೇಜಾವರರಂತಹ) ಹಿಡಿತದಿಂದ ಹೊರಬರುವುದೊಳಿತು.

ನೇತ್ರಾವತಿ,
ಕುಮಾರಧಾರಾ
ನದಿಗಳು
ಉಪ್ಪಿನಂಗಡಿಯಲ್ಲಿ
ಸಂಗಮಗೊಂಡು
ರಭಸದಿಂದ
ಮುನ್ನುಗ್ಗುವ
ನದಿಪಾತ್ರವು
ಮಳೆಗಾಲದಲ್ಲಿ ತೀರಾ
ಅಪಾಯಕಾರಿಯಾದುದು. ಕಳೆದ ಆಗಸ್ಟ್ ತಿಂಗಳ ಪ್ರವಾಹ ಕಾಲದಲ್ಲಿ ಮಗಳ ಸಮೇತ ಹಾಗೆ ಮಂಗಳೂರು ಸೇತುವೆಯಿಂದ ನದಿಗೆ ಹಾರಿದ ಹಿಂದೂ ವ್ಯಕ್ತಿಗಳನ್ನು ಪ್ರಾಣದ ಒತ್ತೆಯಿಟ್ಟು ರಕ್ಷಿಸಲು ತಾವೂ ನದಿಗೆ ಹಾರಿ ಹೆಣಗಾಡಿದ ಮುಸ್ಲಿಂ ಯುವಕರ ಮನೆಗೆ ಹೋಗಿ ಇದೇ ರಮಾನಂದರು ಆ ಸಾಹಸಿಗಳ ಬೆನ್ನು ತಟ್ಟಿ ಬಂದಿದ್ದರು. ಬೇರಾವನಿಗೂ ಇದರ ನೆನಪೇ ಬಂದಿರಲಿಲ್ಲ. ಒಟ್ಟಾರೆ ಇಂತಹ ಸಾಮಾಜಿಕ ಕಳಕಳಿಯುಳ್ಳ ಸ್ವಾಮೀಜಿ ಸೋಗುಗಾರರ ಗುಂಪನ್ನು ಇನ್ನಾದರೂ ಬಿಟ್ಟಾರು ಎಂದು ಅವರನ್ನು ನಂಬುವವರು ಇದೀಗ ಹಾರೈಸುತ್ತಿದ್ದಾರೆ.

ಒಂದು ಪತ್ರ

ಅಂದು ವೇದಿಕೆಯಲ್ಲಿ ಶೂದ್ರನೊಬ್ಬನನ್ನು ರಾಮ ಅಪ್ಪುವ ಚಿತ್ರ ಹಾಗು ಅಸ್ಪೃಶ್ಯತಾ ನಿವಾರಣೆಯ ಘೋಷಣೆ ಇದ್ದರೂ ವಾಸ್ತವವಾಗಿ ನಡೆದದ್ದು ತದ್ವಿರುದ್ಧ ಸಂಗತಿ. ಒಟ್ಟಾರೆ ಬ್ರಹ್ಮತ್ವವನ್ನ ಬಯಸಿ ತಪಗೈದ ಶಂಭೂಕನ ತಲೆ ಕಡಿಯುವ ರಾಮನ ಚಿತ್ರವೇ ಇಲ್ಲಿ ನೂರಕ್ಕೆ ನೂರು ಒಪ್ಪುವಂತಿತ್ತು.

-ರವಿ ಪುತ್ತೂರು,
ದಕ್ಷಿಣ ಕನ್ನಡ



ಭೂಗತ ಲೋಕದಿಂದ ಬಿಡುಗಡೆ ಇಲ್ಲ

ಹಿಂದೆಲ್ಲಾ ಪ್ರೇಮಕತೆಗಳಲ್ಲಿ ನಟಿಸುತ್ತಿದ್ದಾಗ ಚಿತ್ರೀಕರಣಕ್ಕೆ ಪಿಕ್‌ನಿಕ್‌ಗೆ ಹೋದಂತೆ ಹೋಗುತ್ತಿದ್ದ ನನಗೆ 'ಓಂ' ಸಿನಿಮಾದ ಚಿತ್ರೀಕರಣದ ತಾಣಕ್ಕೆ ಹೋಗುವುದೆಂದರೆ ಭೂಗತ ಲೋಕದೊಳಕ್ಕೆ ಹೋಗಿಬಂದ ಅನುಭವವಾಗುತ್ತಿತ್ತು. ಒಂಥರಾ ಟೆನ್ಷನ್, ಆತಂಕ, ಭಯ ಇಡೀ ಸೆಟ್ ಅನ್ನು ಕೆಲವು ಬಾರಿ ಆವರಿಸುತ್ತಿತ್ತು. ಇದನ್ನೆಲ್ಲ ನಾನು ತುಂಬ ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಆದರೆ ನಿರ್ದೇಶಕ ಉಪೇಂದ್ರ ಮತ್ತು ಅವರ ಸಹಚರರು ತಮ್ಮ ಪಾಡಿಗೆ ತಾವು ಕೆಲಸ ಮಾಡುತ್ತಿದ್ದರು.


ಮೊದಲೇ ಹೇಳಿದಂತೆ ಈ ಚಿತ್ರದಲ್ಲಿ ತನ್ವೀರ್, ಬೆಕ್ಕಿನ ಕಣ್ಣು ರಾಜೇಂದ್ರ, ಕೊರಂಗು, ಜೇಡರಹಳ್ಳಿ ಕೃಷ್ಣಪ್ಪ ಸೇರಿದಂತೆ ಭೂಗತ ಲೋಕದ ಹಲವಾರು ಜನರು ಈ ಚಿತ್ರದಲ್ಲಿ ನಟಿಸಿದ್ದರು. ಅವರೆಲ್ಲರೂ ನನ್ನೊಂದಿಗೆ ಅತ್ಯಂತ ಗೌರವದಿಂದಲೇ ವರ್ತಿಸುತ್ತಿದ್ದರು. ಪ್ರತಿಯೊಬ್ಬರೂ ಶೂಟಿಂಗ್ ಸಮಯದಲ್ಲಿ ಅಪ್ಪಾಜಿಯ ಬಗ್ಗೆ ಮಾತನಾಡುವುದನ್ನು ಇಷ್ಟಪಡುತ್ತಿದ್ದರು. ಅಪ್ಪಾಜಿಯ ಸಿನಿಮಾಗಳು, ಗೋಕಾಕ್ ಚಳವಳಿ ಸಮಯದಲ್ಲಿ ಅವರು ಓಡಾಡಿದ್ದು ಇತ್ಯಾದಿ ಇತ್ಯಾದಿ ವಿಷಯಗಳನ್ನು ಅವರು ತುಂಬಾ ರಸವತ್ತಾಗಿ ವರ್ಣಿಸುತ್ತಿದ್ದರು. ನನ್ನ ಅಪ್ಪಾಜಿ ಇಂಥವರ ಹೃದಯವನ್ನೂ ಗೆದ್ದಿದ್ದಾರೆ ಎಂದು ನನಗೆ ಗೊತ್ತಾಗಿದ್ದೇ ಆಗ.

ಈ ಭೂಗತ ಲೋಕದ ಜನ ಸೆಟ್ಟಿಗೆ ಬರುವುದನ್ನು ನೋಡುವುದೇ ಮಜವಾಗಿರುತ್ತಿತ್ತು. ಮುಖ್ಯಮಂತ್ರಿ ಬರುವ ಮೊದಲು ಹೇಗೆ ಪೈಲಟ್ ಕಾರ್ ಬರುತ್ತದೋ ಹಾಗೆ ಇವರು ಸೆಟ್ಟಿಗೆ ಬರುವ ಮುನ್ನ ಎರಡೆರಡು ಪೈಲಟ್ ಕಾರುಗಳು ಬರುತ್ತಿದ್ದವು. ಅದರ ಹಿಂದೆ ಈ ಭೂಗತ ಲೋಕದ ಜನರ ಕಾರ್ ಬರುತ್ತಿತ್ತು. ಅವರು ಕಾರಿನಿಂದ ಇಳಿಯುವ ಮೊದಲು ಪೈಲಟ್ ಕಾರ್‌ನಿಂದ ದಬದಬನೆ ಇಳಿಯುತ್ತಿದ್ದ ಅವರ ಬಾಡಿಗಾರ್ಡ್‌ಗಳು ಅವರ ಹಿಂದೆ-ಮುಂದೆಲ್ಲಾ ಸುತ್ತುವರೆಯುತ್ತಿದ್ದರು. ಕೆಲವೊಮ್ಮೆ ಈ ಬಾಡಿಗಾರ್ಡ್‌ಗಳ ಕೈಗಳಲ್ಲಿ ಲಾಂಗು, ಮಚ್ಚುಗಳೂ ಇರುತ್ತಿದ್ದವು.


ವಿಚಿತ್ರ ಯಾವುದೆಂದರೆ, ಇವರನ್ನೆಲ್ಲ ಮಾತನಾಡಿಸಿದಾಗ, ಇವರೇನಾ ಭೂಗತ ಲೋಕದವರು? ಎನ್ನುವಷ್ಟು ಆಶ್ಚರ್ಯವಾಗುತ್ತಿತ್ತು. ಅಷ್ಟೊಂದು ನಯ, ನಾಜೂಕು, ಗೌರವ ಅವರಲ್ಲಿರುತ್ತಿತ್ತು. ನಮ್ಮ ಸಂಸ್ಥೆಯ ಸಂಪ್ರದಾಯದಂತೆ ಚಿತ್ರೀಕರಣದ ಸಮಯದಲ್ಲಿ "ನಾವೆಲ್ಲಾ ಒಟ್ಟಿಗೇ ಊಟ ಮಾಡೋಣ ಬನ್ನಿ" ಎಂದು ಅವರನ್ನು ಕರೆಯುತ್ತಿದ್ದೆ. ಆದರೆ ಅವರೆಲ್ಲ "ಬೇಡ ಶಿವಣ್ಣಾ, ನಮ್ಗೆ ಊಟ ಮನೆಯಿಂದಲೇ ಬರುತ್ತೆ. ನಮ್ ಜೊತೆ ತುಂಬಾ ಜನ ಹುಡುಗ್ರೂ ಇದ್ದಾರೆ. ಅವರಿಗೂ ಊಟ ಬರುತ್ತೆ. ನೀವೂ ನಮ್ಮೊಂದಿಗೆ ಬಂದು ಜಾಯಿನ್ ಆಗಿ" ಎಂದು ನನ್ನನ್ನೇ ಕರೆಯುತ್ತಿದ್ದರು. ಆಗ ನನಗೆ ಏನು ಹೇಳಬೇಕು ಅಂತಾನೇ ಗೊತ್ತಾಗುತ್ತಿರಲಿಲ್ಲ.

ಅವರೆಲ್ಲಾ ಕ್ರಿಮಿನಲ್ಸ್‌ಗಳು, ನಿಜ. ಆದರೆ ಅವರೂ ಕೂಡ ನಮ್ಮ ಹಾಗೆಯೇ ಮನುಷ್ಯರಲ್ಲವೇ? ಅವರೆಲ್ಲಾ ಯಾವ್ಯಾವ ಸಂದರ್ಭದಲ್ಲಿ, ಯಾವ್ಯಾವ ಕಾರಣಕ್ಕಾಗಿ ಈ ಫೀಲ್ಡಿಗೆ ಬಂದರು ಎಂದು ಗೊತ್ತಾದರೆ ಅವರ ಬಗ್ಗೆ ಆಕ್ರೋಶಕ್ಕಿಂತ ಹಲವೊಮ್ಮೆ ಅನುಕಂಪವೇ ಹೆಚ್ಚಾಗುತ್ತದೆ.

ಅವರುಗಳಲ್ಲಿ ತನ್ವೀರ್ ಅಂತೂ ಅನೇಕ ಬಾರಿ ನನ್ನ ಬಳಿ ಅತ್ಯಂತ ಪಶ್ಚಾತ್ತಾಪದಿಂದ ಫ್ಲ್ಯಾಶ್‌ಬ್ಯಾಕ್ ತನ್ನ ಕತೆಯನ್ನು ಹೇಳಿಕೊಳ್ಳುತ್ತಿದ್ದರು. ಹೇಗಾದರೂ ಮಾಡಿ ಈ ಕ್ಷೇತ್ರದಿಂದ ಹೊರಬರಬೇಕು ಎಂದು ಪ್ರಯತ್ನಿಸುತ್ತಿದ್ದರು. ಆದರೂ ಈ ಫೀಲ್ಡಿಗೆ ಕಾಲಿಟ್ಟವರು ಮತ್ತೆ ಹೊರಹೋಗಲು ಸಾಧ್ಯವೇ ಇಲ್ಲ ಎಂದು ಅವರೇ ಹೇಳುತ್ತಿದ್ದರು. ಹೀಗೆ ನಾನು ಸಿನಿಮಾ ನಟನಾದರೂ ಕೂಡ, ಅನೇಕ ಸಿನಿಮಾಗಳಲ್ಲಿ ನಟಿಸಿದ್ದರೂ ಕೂಡ ನನಗೆ ಈ ಸಿನಿಮಾದಲ್ಲಿ ನಟಿಸುವ ಸಂದರ್ಭದಲ್ಲಿ ಮತ್ತೊಂದು ಸಿನಿಮಾವನ್ನು ನೋಡಿದ ಅನುಭವವಾಯಿತು.



ರಾಜೇಂದ್ರ



ಜೇಡರಹಳ್ಳಿ ಕೃಷ್ಣಪ್ಪ

ಈ ಭೂಗತ ಲೋಕದ ಜನರ ಭಾಷೆ, ಅವರ ಮ್ಯಾನರಿಸಂ ಮತ್ತು ಅವರ ಓಡಾಟಗಳನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ನನ್ನ ಅನೇಕ ಚಿತ್ರಗಳಲ್ಲಿ ನಾನು ಹತ್ತಿರದಿಂದ ಕಂಡ ಈ ಭೂಗತ ಜನರನ್ನು ಅನುಕರಿಸಿದ್ದೇನೆ. ಹೀಗಾಗಿ ಅವರೂ ಕೂಡ ನನಗೆ ಪರೋಕ್ಷವಾಗಿ ಸಹಾಯ ಮಾಡಿದ್ದಾರೆ ಎಂದು ಹೇಳಬಹುದು.

ಭೂಗತಲೋಕದಲ್ಲಿ ಪಕ್ಕಾ ವೈರಿಗಳಾಗಿದ್ದ ಹಲವರು ಈ ಚಿತ್ರದಲ್ಲಿ ನಟಿಸಿದ್ದರಿಂದ ಶೂಟಿಂಗ್ ಸಮಯದಲ್ಲಿ ಗಲಾಟೆಗಳಾಗಬಹುದೆಂದು ಹಲವರು ಅಂದುಕೊಂಡಿದ್ದರು. ಆದರೆ ದೇವರ ದಯೆಯಿಂದ ಯಾವುದೇ ತೊಂದರೆ ಇಲ್ಲದೆ 'ಓಂ' ಚಿತ್ರದ ಚಿತ್ರೀಕರಣ ಮುಗಿಯಿತು. ರೌಡಿಗಳು ಚಿತ್ರದಲ್ಲಿ ನಟಿಸುತ್ತಾರೆ ಎಂಬ ಮಾತ್ರಕ್ಕೆ ಚಿತ್ರೀಕರಣ ತಾಣಗಳು ಕುರುಕ್ಷೇತ್ರವಾಗಬೇಕು ಎಂದೇನಿಲ್ಲ ತಾನೆ?

ಈ ಚಿತ್ರದ ಯಶಸ್ಸು ಸಂಪೂರ್ಣವಾಗಿ ನಿರ್ದೇಶಕ ಉಪೇಂದ್ರರಿಗೆ ಸಲ್ಲುತ್ತದೆ. ಯಾಕೆಂದರೆ ಇಡೀ ಚಿತ್ರವನ್ನು ಅವರು ರಿಯಾಲಿಸ್ಟಿಕ್ ಆಗಿ ತೆಗೆದರಲ್ಲದೆ, ಎಲ್ಲ ಕಲಾವಿದರಿಂದ ಸರಿಯಾದ ಪರ್‌ಫಾರ್ಮೆನ್ಸ್ ಸಿಗುವತನಕ ಅವರು ಬಿಡುತ್ತಿರಲಿಲ್ಲ. ಉದಾಹರಣೆಗೆ: ಸುದೀಪ್ ಅವರ ತಂದೆಯ ಸರೋವರ್ ಹೋಟೆಲ್‌ನಲ್ಲಿ ಫೈಟಿಂಗ್ ದೃಶ್ಯವೊಂದನ್ನು ಚಿತ್ರೀಕರಿಸಿದೆವು. ಬಿಯರ್ ಬಾಟಲಿಗಳನ್ನು ಎಸೆದಾಡುತ್ತಾ ಚಿತ್ರೀಕರಿಸಿದ ಆ ದೃಶ್ಯದ ಚಿತ್ರೀಕರಣ ಮುಗಿದಾಗ, ಇಡೀ ಜಾಗ ಗಾಜಿನ ಚೂರುಗಳಿಂದ ತುಂಬಿತ್ತು. ನಾನು ಬೆಳ್ಳಿಪರದೆಯ ಮೇಲೆ ಈ ದೃಶ್ಯವನ್ನು ನೋಡಿದಾಗ ನನಗೇ ಆಶ್ಚರ್ಯವಾಯಿತು. ಅಪ್ಪಾಜಿ ಕೂಡಾ ಈ ದೃಶ್ಯವನ್ನು ನೋಡಿ "ತುಂಬಾ ಚೆನ್ನಾಗಿ ಸ್ಟಂಟ್ ಮಾಡಿದ್ದೀಯಾ ಕಂದಾ.. ಇದೆಲ್ಲಾ ಮಾಡುವಾಗ ಹೆದರಿಕೆ ಆಗಲಿಲ್ಲವೇ?" ಎಂದು ಕೇಳಿದ್ದು ನನಗಿನ್ನೂ ನೆನಪಿದೆ.

ಇನ್ನೊಂದು ಕಡೆ ಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ನಾನು ಕೈಯಲ್ಲಿ ಲಾಂಗ್ ಹಿಡಿದು ರೌಡಿಗಳನ್ನು ಅಟ್ಟಿಸಿಕೊಂಡು ಹೊಡೆದಾಡುವ ದೃಶ್ಯದಲ್ಲಿ ಭಾಗವಹಿಸಿದ್ದೆ. ಇದೂ ಅಷ್ಟೇ ಅತ್ಯಂತ ನೈಜವಾಗಿ ಮೂಡಿಬಂದಿತ್ತು.

ಈ ಎಲ್ಲ ಕಾರಣದಿಂದ 'ಓಂ' ಚಿತ್ರ ತುಂಬಾ ಸಹಜವಾಗಿ ಮೂಡಿಬಂತು ಎಂಬುದು ನನ್ನ ಭಾವನೆ. ಈ ಕಾರಣಕ್ಕಾಗಿಯೇ ನಾನು ಉಪೇಂದ್ರ ಅವರನ್ನು ಮಣಿರತ್ನಂ ತರಹ ರಿಯಾಲಿಸ್ಟಿಕ್ ನಿರ್ದೇಶಕ ಎಂದು ಕೊಂಡಾಡಿದ್ದು. ಈ ಚಿತ್ರದ ಹಾರ್ಟ್ ಅಂಡ್ ಸೋಲ್ ಎರಡೂ ಅವರೇ. ನಾನು ಅವರು ಹೇಳಿದ ತರಹ ನಟಿಸಿದ್ದೇನೆ ವಿನಃ ಬೇರೇನೂ ಇಲ್ಲ.

ಇಷ್ಟೆಲ್ಲಾ ಆದಮೇಲೆ ಈ ಸಿನಿಮಾದ ಬಿಡುಗಡೆಯ ಸಂದರ್ಭದಲ್ಲಿ ಮತ್ತೊಂದು ಕಾಂಟ್ರೊವರ್ಸಿ ತಲೆಯೆತ್ತಿತು. ಹಿರಿಯ ಪತ್ರಕರ್ತರಾದ ವಿ.ಎನ್ ಸುಬ್ಬರಾವ್ ಅವರು ಮನೆಗೆ ಫೋನ್ ಮಾಡಿ "ಏನ್ ಶಿವಣ್ಣಾ ನನ್ ಮನೆಗೆಲ್ಲಾ ಯಾರ್ಯಾರೋ ರೌಡಿಗಳು, ಅಭಿಮಾನಿಗಳು ಫೋನ್ ಮಾಡಿ ಏನೇನೋ ಹೇಳುತ್ತಿದ್ದಾರೆ. ಅವರಿಗೆಲ್ಲಾ ಸ್ವಲ್ಪ ಬುದ್ಧಿ ಹೇಳಿ" ಎಂದು ನನ್ನನ್ನು ಕೇಳಿಕೊಂಡರು. ಆನಂತರ ಅವರೇ ಮಾತು ಮುಂದುವರೆಸಿ "ನಿಮ್ ಸಿನಿಮಾ ಸ್ವಲ್ಪ ವಾಯ್ಲೆಂಟ್ ಆಗಿದೆ. ಕೆಲವು ಭಾಗಗಳನ್ನು ಕತ್ತರಿಸಿ ಹಾಕಿದರೆ ಸೆನ್ಸಾರ್‌ನಿಂದ ಯಾವುದೇ ಸಮಸ್ಯೆಯಾಗುವುದಿಲ್ಲ" ಎಂದು ಹೇಳಿದರು.

ವಿ.ಎನ್. ಸುಬ್ಬರಾವ್ ಅವರು ಸೆನ್ಸಾರ್ ಸಮಿತಿ ಸದಸ್ಯರಾಗಿದ್ದರಿಂದ ಈ ಮಾತನ್ನು ಹೇಳಿದ್ದರು. ಆದರೆ ಅವರಿಗೆ ಯಾರ್ಯಾರೋ ಫೋನ್ ಮಾಡಿದ್ದಕ್ಕೆ ನಾವು ಜವಾಬ್ದಾರರಲ್ಲ ಎಂದು ಹೇಳಿದೆವು. ಆದರೆ ನಾವು ಈ ಚಿತ್ರದಲ್ಲಿ ಯಾವುದೇ ಭಾಗವನ್ನು ಕತ್ತರಿಸಲು ತಯಾರಿಲ್ಲ. ಬೇಕಾದರೆ ನಾವು ದೆಹಲಿಯ ಸೆನ್ಸಾರ್ ಮಂಡಳಿಯವರೆಗೂ ಹೋಗಿ ಫೈಟ್ ಮಾಡಲು ತಯಾರಿದ್ದೇವೆ ಎಂದು ನಮ್ಮ ಮನೆಯವರು ಅವರಿಗೆ ಹೇಳಿದರು.


"ರೌಡಿಸಂ ಮಾಡಿ ಎಂದು ನಾವು ಇಡೀ ಚಿತ್ರದಲ್ಲಿ ಎಲ್ಲೂ ಹೇಳಿಲ್ಲ. ರೌಡಿಸಂ ಮಾಡಬಾರದು ಎಂಬುದೇ ಚಿತ್ರದ ಕೊನೆಯಲ್ಲಿರುವ ಸಂದೇಶ. ಆ ಸಂದೇಶವೇ ಚಿತ್ರ ನೋಡಿದ ನಂತರ ಮನಸ್ಸಿನಲ್ಲಿ ಉಳಿಯುತ್ತದೆ" ಎಂದು ಸುಬ್ಬರಾವ್‌ರವರಿಗೆ ಹೇಳಿದೆ.

ಈ ಎಲ್ಲ ಸಮಸ್ಯೆಗಳಿಂದಾಗಿ ಸೆನ್ಸಾರ್ ಸರ್ಟಿಫಿಕೇಟ್ ನಮ್ಮ ಕೈ ಸೇರಿರಲಿಲ್ಲವಾದ್ದರಿಂದ ಚಿತ್ರ ಬಿಡುಗಡೆಯಾಗುವ ದಿನವನ್ನು ಮುಂಗಡವಾಗಿ ಅನೌನ್ಸ್ ಮಾಡಲು ಸಾಧ್ಯವಾಗಿರಲಿಲ್ಲ. ಸಿನಿಮಾ ಬಿಡುಗಡೆಗೆ ಇನ್ನೇನು ಮೂರು-ನಾಲ್ಕು ದಿನ ಇದೆ ಎನ್ನುವಾಗ ಸೆನ್ಸಾರ್‌ನವರು ಸರ್ಟಿಫಿಕೇಟ್ ನೀಡಿದರು. ನಿಜವಾಗಲೂ ನಮಗೆ ಸೆನ್ಸಾರ್‌ನವರು ಮಾಡಿದ ಉಪಕಾರವನ್ನು ನಾನಿಲ್ಲಿ ಸ್ಮರಿಸಲೇಬೇಕು. ಅದರಲ್ಲೂ ವಿ.ಎನ್. ಸುಬ್ಬರಾವ್ ಅವರೇ ನಮ್ಮ ಚಿತ್ರದ ಪರವಾಗಿ ವಾದ ಮಂಡಿಸಿದ್ದರಿಂದ ಅವರಿಂದಲೇ ಈ ಚಿತ್ರ ಹೊರಬರಲು ಸಾಧ್ಯವಾಯಿತು.

ಬಿಡುಗಡೆ ದಿನಾಂಕ ಮತ್ತು ಥಿಯೇಟರ್ ಅನೌನ್ಸ್ ಮಾಡಿರದಿದ್ದರೂ 'ಓಂ' ಚಿತ್ರ ನೋಡಲು ಜನ ಕಾಯುತ್ತಿದ್ದರು. ಥಿಯೇಟರ್‌ಗಳ ಮುಂದೆ ಜನಜಂಗುಳಿ ಜಾಸ್ತಿಯಾಗಿದ್ದರಿಂದ ಗುರುವಾರವೇ ಟಿಕೆಟ್ ನೀಡಲು ಪ್ರಾರಂಭಿಸಿದರು. ಆ ಜನಸಾಗರ, ಅವರ ಸಂತೋಷ, ಇವನ್ನೆಲ್ಲಾ ನಾನು ಎಂದೂ ಮರೆಯಲು ಸಾಧ್ಯವೇ ಇಲ್ಲ. 'ಓಂ' ಬಗ್ಗೆ ಎಂತಹ ಹವಾ ಕ್ರಿಯೇಟ್ ಆಗಿತ್ತೆಂದರೆ, ಅದು ಇಡೀ ರಾಜ್ಯಕ್ಕೆ ಹರಡಿತ್ತು.

ನಿರೂಪಣೆ: ಸದಾಶಿವ ಶೆಣೈ

40



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಇನ್ನೊಂದು ವಿಶೇಷವೆಂದರೆ ಮೊದಲ ಆರು ವಾರಗಳ ಕಾಲ ಎಲ್ಲ ಕಡೆ ಈ ಚಿತ್ರದ ಗಳಿಕೆ ಒಂದೇ ಮಟ್ಟದಲ್ಲಿತ್ತು. ಆ ಸಂದರ್ಭದಲ್ಲಿ ಈ ಚಿತ್ರದ ರೈಟ್ಸ್ ಪಡೆಯಲು ತಮಿಳು ಮತ್ತು ತೆಲುಗು ಚಿತ್ರರಂಗದಿಂದ ಜನರು ಓಡೋಡಿ ಬಂದರು. ಅವರಲ್ಲಿ ಕೆಲವರು ತಮಿಳು ಮತ್ತು ತೆಲುಗಲ್ಲಿ ನೀವೇ ಈ ಚಿತ್ರದಲ್ಲಿ ನಟಿಸಿ ಎಂದು ಆಹ್ವಾನಿಸಿದರು. ಆದರೆ ನಾವು ಕೊನೆಯಲ್ಲಿ ತೆಲುಗಿನ ರಾಜಶೇಖರ್ ಅವರಿಗೆ ಚಿತ್ರದ ಹಕ್ಕನ್ನು ನೀಡಿದೆವು.

ಈ ಚಿತ್ರ ಬಿಡುಗಡೆಯಾದ ಸಂದರ್ಭದಲ್ಲಿ ಒಮ್ಮೆ ನಾನು ಮತ್ತು ನನ್ನ ಪತ್ನಿ ಗೀತಾ ಎಂ.ಜಿ. ರಸ್ತೆಗೆ ಶಾಪಿಂಗ್‌ಗೆಂದು ಹೋಗಿದ್ದೆವು. ಆಗ ನನ್ನನ್ನು ದೂರದಿಂದ ನೋಡಿದ ಹುಡುಗಿಯೊಬ್ಬಳು ಬೈಕ್‌ನಲ್ಲಿ ವೇಗವಾಗಿ ಬಂದು ನನ್ನ ಬಳಿ ಸಡನ್ನಾಗಿ ಬ್ರೇಕ್ ಹಾಕಿ ನಿಂತುಬಿಟ್ಟಳು. ಹಾಗೆ ಬಂದವಳೇ ಏನು ಹೇಳಿದಳು ಗೊತ್ತಾ? ಆಕೆಯ ಮಾತಿಗೆ ನನ್ನ ಪತ್ನಿ ಗೀತಾ ಹೇಗೆ ಸ್ಪಂದಿಸಿದಳು ಗೊತ್ತಾ? ಎಂ.ಜಿ. ರೋಡ್‌ನ ಆ ಘಟನೆ ನಾನು ಮರೆಯಲು ಸಾಧ್ಯವೇ ಇಲ್ಲ.....!


(ಮುಂದುವರೆಯುತ್ತದೆ)



'ಪ್ರೀತಿಗಾಗಿ' ಏನಾಗಿದೆ?

ಕೋಟಿ ಖ್ಯಾತಿಯ ರಾಮು ನಿರ್ಮಾಣದ 'ಪ್ರೀತಿಗಾಗಿ' ಎಂಬ ಚಿತ್ರ ತಯಾರಾಗಿ ಸುಮಾರು ನಾಲ್ಕು ತಿಂಗಳುಗಳಾಗಿವೆ. ಆದರೂ ಮುರಳೀ ನಟಿಸಿರುವ, ಎಸ್. ಮಹೇಂದರ್ ನಿರ್ದೇಶಿಸಿರುವ ಈ ಚಿತ್ರ ಇನ್ನೂ ಬಿಡುಗಡೆಗೊಂಡಿಲ್ಲ.

ಒಂದಿಲ್ಲ, ಒಂದು ಫೋನ್ ಮಾಡುವ ಮೂಲಕವೇ ಕರ್ನಾಟಕದ ಮೂಲೆಮೂಲೆಗಳಲ್ಲಿ ಥಿಯೇಟರ್‌ಗಳನ್ನು ಬುಕ್ ಮಾಡುವ ಶಕ್ತಿ ಹೊಂದಿದ್ದ ರಾಮು ಯಾಕೆ ಹೀಗೆ ಮೂಲೆಗುಂಪಾಗಿದ್ದಾರೆ? ಎಂದು ಇಡೀ ಗಾಂಧಿನಗರ ಮಾತನಾಡುತ್ತಿದೆ. ಈ ಮಾತು, ಈ ಅಪಸ್ವರ ರಾಮುಗೆ ಇನ್ನೂ ಕೇಳಿಸದಿರುವುದೇ ಆಶ್ಚರ್ಯದ ಸಂಗತಿ.



ಜಗ್ಗೇಶ್‌ಗೆ ಪ್ರಮೋಶನ್

ಸ್ವಯಂಘೋಷಿತ ನವರಸ ನಾಯಕ ಜಗ್ಗೇಶ್ ಯಾನೆ 'ಮನ್ಮಥ' ಸಿಕ್ಕಾಪಟ್ಟೆ ಖುಷಿಯಲ್ಲಿದ್ದಾರೆ. ಅವರು ಈ ವರ್ಷ ಏಳು ಚಿತ್ರಗಳಲ್ಲಿ ನಟಿಸುತ್ತಿರುವುದೊಂದೇ ಇದಕ್ಕೆ ಕಾರಣವಲ್ಲ. ಇದರ ಜೊತೆಜೊತೆಗೆ ಅವರ ಬಹುದಿನಗಳ ಕನಸೊಂದು ಈಗ ನನಸಾಗುತ್ತಿದೆ.

ಇದೇ ಮೊದಲ ಬಾರಿಗೆ ಸಾಹಸಸಿಂಹ ವಿಷ್ಣುವರ್ಧನ್ ರೊಂದಿಗೆ ನಟಿಸುವ ಅವಕಾಶ ಜಗ್ಗೇಶ್‌ಗೆ ಸಿಕ್ಕಿದೆ. ನಾಗಣ್ಣ ಈ ಚಿತ್ರವನ್ನು ನಿರ್ದೇಶಿಸಲಿದ್ದಾರಂತೆ. "ಇದು ಒಂದು ರೀತಿಯಲ್ಲಿ ನನಗೆ ಪ್ರಮೋಶನ್ ಸಿಕ್ಕಿದ ಹಾಗೆ" ಎಂದು ಜಗ್ಗೇಶ್ ಹೇಳಿಕೊಂಡು ತಿರುಗಾಡುತ್ತಿದ್ದಾರೆ.

ಆಂಟಿಯರ ಆರ್ಭಟ



ಮೊನ್ನೆ ಕಾವೇರಿ ತೀರ್ಪನ್ನು ವಿರೋಧಿಸಿ ಕಲಾವಿದರು ನಡೆಸಿದ ಪ್ರತಿಭಟನೆಯಲ್ಲಿ ನಡೆದ ತಮಾಷೆಯಿದು.

ರಾಜಭವನದ ಗೇಟ್ ಬಳಿ ಕೆಲವೇ ಕೆಲವು ಕಲಾವಿದರನ್ನು ಮಾತ್ರ ಪೊಲೀಸರು ಒಳಗಡೆ ಹೋಗಲು ಅನುಮತಿ ನೀಡಿದರು. ಆ ಸಂದರ್ಭದಲ್ಲಿ ಅಲ್ಲೇ ಇದ್ದ ರಾಷ್ಟ್ರಪ್ರಶಸ್ತಿ ವಿಜೇತೆ ತಾರಾ, ಮಾಲಾಶ್ರೀ, ಶೃತಿ, ಸುಧಾರಾಣಿ ಮತ್ತು ಪ್ರೇಮಾ ಇವರೆಲ್ಲರ ಸಿಟ್ಟು ನೆತ್ತಿಗೇರಿತ್ತು. ನಮಗೆ ಒಳಗೆ ಹೋಗಲು ಯಾಕೆ ಬಿಡುತ್ತಿಲ್ಲ ಎಂದು ತಾರಾ ನೇತೃತ್ವದಲ್ಲಿ ಈ ಕಲಾವಿದೆಯರು ಪೊಲೀಸರ ಜೊತೆ ಬೀದಿ ಕಾಳಗಕ್ಕೆ ಇಳಿದರು. ಮಾಲಾಶ್ರೀಯಂತೂ ಇಂಗ್ಲಿಷ್‌ನಲ್ಲೇ ಪೊಲೀಸರನ್ನು ತರಾಟೆಗೆ ತೆಗೆದುಕೊಂಡರು. ಈ ಸಂದರ್ಭದಲ್ಲಿ ತಾರಾ, ಮಾಲಾಶ್ರೀ ಮತ್ತು ಶೃತಿ ಇವರ ಯಜಮಾನರುಗಳು ಅವರ ಹಿಂದೆಯೇ ಮೂಕ ಪ್ರೇಕ್ಷಕರಾಗಿಯೂ ಮತ್ತು ಬೆಂಗಾವಲಾಗಿಯೂ ನಿಂತಿದ್ದರು. ಆದರೆ ಪಾಪ ಸುಧಾರಾಣಿ ಮತ್ತು ಪ್ರೇಮಾ ತಮ್ಮ 'ಯಜಮಾನ'ರುಗಳು ಸಿನಿಮಾದವರಲ್ಲದ ಕಾರಣ ಅಲ್ಲಿ ಹಾಜರಿರಲಿಲ್ಲ. ಹೀಗಾಗಿ ಇವರಿಬ್ಬರೂ ಅಷ್ಟೊಂದು ಆರ್ಭಟಿಸಲಿಲ್ಲ.

ರಾಜಭವನದ ಪೊಲೀಸರಂತೂ ಈ ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾವಿದೆಯರ ವರ್ತನೆಯಿಂದ ಹೈರಾಣಾಗಿ ಹೋಗಿದ್ದರು. ಒಂದು ರೀತಿಯಲ್ಲಿ ಮಧ್ಯಾಹ್ನದ ಮಟಮಟ ಬಿಸಿಲಿನಲ್ಲಿ ಅವರಿಗೆ ಪುಕ್ಕಟೆ ಮನರಂಜನೆಯೂ ದೊರೆಯಿತು. ಆದರೂ ಪೊಲೀಸರು ಮಾತ್ರ ಇವರನ್ನು ಗೇಟಿನ ಹೊರಗೇ ನಿಲ್ಲಿಸಿದರು.

R.B.P. LANKESH, Kannada Weekly Price Rs. 10/- 28-2-2007 RN1 No. KARKAN2005/14648 Regd.No.KA/BG(S)/2036/20



ಗುರುತು ಸಿಗದ ಪ್ರೇಮ್

ಈಗ ಕನ್ನಡ ಚಿತ್ರೋದ್ಯಮದ ನಾಯಕ ನಟರು ತಮ್ಮ ಹೇರ್ ಸ್ಟೈಲ್ ಬದಲಾಯಿಸುವ ಹೊಸ ಗಿಮಿಕ್ಕನ್ನು ಅಂಟಿಸಿಕೊಂಡಿದ್ದಾರೆ.

ಇದನ್ನು ಆರಂಭಿಸಿದ್ದು 'ಐಶ್ವರ್ಯ' ಚಿತ್ರದ ನಾಯಕ ಉಪೇಂದ್ರ. ಪೋಕರಿಗಳನ್ನು ಹೋಲುವ ತಮ್ಮ ಹಿಪ್ಪಿ ಹೇರ್ ಸ್ಟೈಲನ್ನು ಉಪ್ಪಿ ಕಟ್ ಮಾಡಿಸಿಕೊಂಡು ಬಹಳ ಫ್ಯಾಶನಬಲ್ ಆಗಿ ಕಾಣಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಅವರ ಬಗ್ಗೆ ಜನರಿಗಿದ್ದ ನಿರಾಸಕ್ತಿಯನ್ನು ಈ ಗಿಮಿಕ್‌ನಿಂದ ಬದಲಾಯಿಸಲಾಗಲಿಲ್ಲ.

ಅನಂತರ ತಮ್ಮ ಗೆಟಪ್ಪನ್ನು ಬದಲಾಯಿಸಿಕೊಂಡವರು ದರ್ಶನ್. 'ಭೂಪತಿ' ಚಿತ್ರಕ್ಕಾಗಿ ಬೆಕ್ಕಿನಕಣ್ಣಿನ ಕಾಂಟ್ಯಾಕ್ಟ್ ಲೆನ್ಸ್ ಗಳನ್ನು, ಡಿಂಗೋ ಹುಡುಗರಂತೆ ತಮ್ಮ ಕೂದಲ ಬಣ್ಣವನ್ನೂ ಬದಲಾಯಿಸಿದ ದರ್ಶನ್ ಹೊಸ ಸ್ಟೈಲ್ ಅನುಸರಿಸಿದರು. ಅವರ ಈ ಹೊಸ ಅವತಾರಕ್ಕೆ ಭಾರೀ ಪ್ರಚಾರ ಕೂಡ ಸಿಕ್ಕಿತು. ಆದರೆ ಚಿತ್ರ ನೋಡಿದ ನಂತರ ಜನ ಛೀಮಾರಿ ಹಾಕುತ್ತಿದ್ದಾರೆ.

ಈಗ ಹೊಸ ನಾಯಕ ಪ್ರೇಮ್ ಕೂಡ ಇದೇ ದಾರಿಯನ್ನು ಹಿಡಿದಿದ್ದಾರೆ. ತಮ್ಮ 'ಸವಿಸವಿ ನೆನಪು' ಚಿತ್ರಕ್ಕಾಗಿ ಪ್ರೇಮ್ ಮೀಸೆ ಬೋಳಿಸಿದ್ದಾನೆ, ಕೂದಲು ಕತ್ತರಿಸಿದ್ದಾನೆ. "ಇದು ಗಿಮಿಕ್‌ಗಾಗಿ ಮಾಡಿದ್ದಲ್ಲ, ಪಾತ್ರ ಈ ಲುಕ್‌ಅನ್ನು ಬಯಸುತ್ತದೆ" ಎಂದು ಪ್ರೇಮ್ ಸಬೂಬು ನೀಡುತ್ತಿದ್ದಾರೆ. ಆದರೆ ಇವರ ಹೊಸ ಗೆಟ್ ಅಪ್ ಹೇಗಿದೆ ಎಂದರೆ ಜನ ಅವರನ್ನು ಗುರುತಿಸುತ್ತಲೇ ಇಲ್ಲ ಎಂಬುದೂ ಈಗ ಒಂದು ಸಮಸ್ಯೆಯಾಗಿದೆ!

ಅದೆಲ್ಲ ಇರಲಿ, ಉಪ್ಪಿ ಮತ್ತು ದರ್ಶನ್‌ಗೆ ಸಿಗದ ಯಶಸ್ಸು ಪ್ರೇಮ್ ಪಾಲಾಗುತ್ತದೋ ನೋಡೋಣ!

ಆರತಿಗೊಬ್ಬ, ಕೀರತಿಗೊಬ್ಬ

ಹೊಸ ನಾಯಕರುಗಳಲ್ಲಿ ಪ್ರೇಮ್ ಮತ್ತು ಕಾಮಿಡಿ ಗಣೇಶ್ ಬಗ್ಗೆ ಒಂದು ಪುಟ್ಟ ಟಿಪ್ಪಣಿ:




ಪ್ರೇಂ ಸ್ವಮೇಕ್ ಪರವಾದರೆ, ಕಾಮಿಡಿ ಗಣೇಶ್ ರೀಮೇಕ್ ಸ್ಟಾರ್ ಆಗಲು ಹೊರಟಿದ್ದಾನೆ. ಹೀಗಾಗಿ ಗಣೇಶ್ ಹಿಂದೆ ಗಾಂಧಿನಗರದ ದೊಡ್ಡ ದೊಡ್ಡ ನಿರ್ಮಾಪಕರುಗಳ ದಂಡೇ ಇದೆ. ಮೊನ್ನೆ ಮೊನ್ನೆ 'ತಾಯಿಯ ಮಡಿಲು' ಚಿತ್ರ ನಿರ್ಮಿಸಿ ಕೈಸುಟ್ಟುಕೊಂಡಿರುವ ರೀಮೇಕ್ ವೀರ ಎಸ್. ನಾರಾಯಣ್ ಮೈಸೂರಲ್ಲಿ ಗುಟ್ಟಾಗಿ ಗಣೇಶ್ ಚಿತ್ರಕ್ಕೆ ಮುಹೂರ್ತ ನಡೆಸಿ ಬಂದಿದ್ದಾರೆ. ಹಾಗೆಯೇ ಹೊಸಬರನ್ನು ಹಾಕಿಕೊಂಡು ಸಿನಿಮಾ ಮಾಡುವೆ ಅಂದಿದ್ದ ಒರಿಜಿನಲ್ ರೀಮೇಕ್‌ಗಳ ಹರಿಕಾರ ದ್ವಾರಕೀಶ್ ಕೂಡ ಗಣೇಶ್ ಕಾಲ್ ಶೀಟ್ ಪಡೆಯುವ ಪ್ರಯತ್ನದಲ್ಲಿದ್ದಾರೆ. ಈ ಮಧ್ಯೆ 'ಹುಡುಗಾಟ' ಎಂಬ ಮತ್ತೊಂದು ರೀಮೇಕ್ ಚಿತ್ರ ಆರಂಭವಾಗಿದೆ. ಇನ್ನೂ ಕನಿಷ್ಟವೆಂದರೆ ಐದಾರು ರೀಮೇಕ್ ಚಿತ್ರಗಳಿಗೆ ಗಣೇಶ್ ಸದ್ಯದಲ್ಲೇ ಸಹಿ ಹಾಕುವ ಸಾಧ್ಯತೆಯಿದೆ.

ಇನ್ನೊಂದೆಡೆ ಪ್ರೇಮ್ ಹೊಸ ಚಿತ್ರ ಮತ್ತು ವಿಭಿನ್ನತೆಗಾಗಿ ಹಾತೊರೆಯುತ್ತಿದ್ದಾನೆ. 'ಸವಿಸವಿ ನೆನಪು' ಚಿತ್ರಕ್ಕಾಗಿ ತನ್ನ ಲುಕ್ಕನ್ನೇ ಬದಲಾಯಿಸಿಕೊಂಡ ಪ್ರೇಮ್ "ಯಾವುದೇ ಕಾರಣಕ್ಕೂ ನಾನು ರೀಮೇಕ್ ಚಿತ್ರಗಳಲ್ಲಿ ನಟಿಸುವುದಿಲ್ಲ" ಎಂದೇ ಪ್ರತಿಜ್ಞೆ ಕೈಗೊಂಡಿದ್ದಾನೆ. ಪ್ರೇಮ್‌ನ ಮುಂದಿನ ಚಿತ್ರದ ಹೆಸರು 'ಗುಣವಂತ' ಅದಾದ ನಂತರ ಮತ್ತೊಂದು ಚಿತ್ರ. ಇವರಿಬ್ಬರ ಕೆರಿಯರ್ ಗ್ರಾಫ್ ನೋಡಿದರೆ ಆರತಿಗೊಬ್ಬ-ಕೀರ್ತಿಗೊಬ್ಬ ಎಂಬ ಮಾತು ನೆನಪಾಗುತ್ತದೆ.

ಚಿತ್ರರಂಗದ ತಲೆಬುಡ ಗೊತ್ತಿಲ್ಲದಿದ್ದ ಎಂ.ಆರ್. ಪಟ್ಟಾಭಿರಾಮ್ ಎಂಬ ಆಸಾಮಿ 'ಕುಮಾರರಾಮ' ಎಂಬ ಬಂಡಲ್ ಚಿತ್ರಕ್ಕೆ ಎಂಟು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿರಬಹುದು. ಆದರೆ ವಾಸ್ತವವಾಗಿ ತಲೆ ನೆಟ್ಟಗಿರುವ ಯಾವ ನಿರ್ಮಾಪಕನೂ ಕನ್ನಡ ಸಿನಿಮಾವೊಂದಕ್ಕೆ ಮೂರು ಕೋಟಿಗಿಂತಲೂ ಹೆಚ್ಚು ವೆಚ್ಚ ಮಾಡುವುದಿಲ್ಲ, ಯಾಕೆಂದರೆ ಅದಕ್ಕಿಂತ ಹೆಚ್ಚು ಮಾರುಕಟ್ಟೆ ಕನ್ನಡ ಸಿನಿಮಾಗಳಿಗೆ ಇವತ್ತು ಕರ್ನಾಟಕದಲ್ಲೇ ಇಲ್ಲ.

ಇಂತಹ ಒಂದು ಸಂದರ್ಭದಲ್ಲಿ ಮೂಲತಃ ಕರ್ನಾಟಕದವರೇ ಆದ ರಜನೀಕಾಂತ್ ನಟಿಸಿರುವ 'ಶಿವಾಜಿ' ಎಂಬ ಚಿತ್ರವನ್ನು ನಮ್ಮ ಕರ್ನಾಟಕದಲ್ಲೇ ಪ್ರದರ್ಶಿಸಲು ಮೂರೂವರೆ ಕೋಟಿ ರೂಪಾಯಿಗಳನ್ನು ನೀಡಿ ಈಗಾಗಲೇ ಖರೀದಿಸಲಾಗಿದೆಯಂತೆ. ಅಷ್ಟೊಂದು ದುಬಾರಿ ರೇಟಿಗೆ ಖರೀದಿಸಿರುವುದು ಬೇರ್‍ಯಾರೂ ಅಲ್ಲ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ



'ಶಿವಾಜಿ'ಯ ಬೆಲೆ ನೂರು ಕೋಟಿ!

ಅಧ್ಯಕ್ಷ ಗಂಗರಾಜು! ಹಿರಿಯ ನಟ ಲೀಲಾವತಿಯವರ ದಯನೀಯ ಸ್ಥಿತಿಯನ್ನು ನೋಡಿ ರಜನೀಕಾಂತ್ ಅವರು ಈ ಚಿತ್ರದ ಕರ್ನಾಟಕದ ಹಂಚಿಕೆಯನ್ನು ನೀಡಿದ್ದಾರೆಂದು ಭಾರೀ ಪ್ರಚಾರವಾಗಿತ್ತು, ಈಗ 'ಕನ್ನಡದ ಕಂದ'ನ ತಾಯಿಯ ಸುದ್ದಿಯೇ ಇಲ್ಲ.

ಕನ್ನಡಿಗರ ಕರ್ನಾಟಕದಲ್ಲೇ ಕನ್ನಡ ಚಿತ್ರವೊಂದಕ್ಕೆ ಮೂರು ಕೋಟಿ ಮೌಲ್ಯವಿಲ್ಲ ಎಂಬ ಸ್ಥಿತಿ ಇರುವಾಗ, ತಮಿಳು ಸಿನಿಮಾವೊಂದನ್ನು ಮೂರೂವರೆ ಕೋಟಿಗೆ ಖರೀದಿಸಲಾಗಿದೆ ಎಂದರೆ ನಮ್ಮ ಕನ್ನಡ ಚಿತ್ರೋದ್ಯಮ ಯಾವ ಹಂತ ತಲುಪಿದೆ ಎಂಬುದಕ್ಕೆ ಸಾಕ್ಷಿ ಅಲ್ಲವೇ?

ಇವಿಷ್ಟೇ ಅಲ್ಲದೆ, 'ಶಿವಾಜಿ' ಚಿತ್ರ ಈಗಾಗಲೇ ಎಂತಹ ಅಲೆ ಎಬ್ಬಿಸಿದೆ ಅಂದರೆ ಇದನ್ನು ಕೇರಳದ ವಿತರಕರೊಬ್ಬರು ನಾಲ್ಕು ಕೋಟಿಗೆ ಖರೀದಿಸಿದ್ದರೆ, ತೆಲುಗಿಗೆ ಡಬ್ ಆಗಿರುವ ಆವೃತ್ತಿಯನ್ನು ಆಂಧ್ರದ ವಿತರಕರೊಬ್ಬ 14 ಕೋಟಿಗೆ ಖರೀದಿಸಿದ್ದಾರಂತೆ.

ಇದಿಷ್ಟೇ ಅಲ್ಲದೆ, 'ಶಿವಾಜಿ' ಸಂಪೂರ್ಣಗೊಳ್ಳುವ ಮುನ್ನವೇ ಅದರ ಟಿವಿ ಹಕ್ಕುಗಳನ್ನೂ ತಮಿಳುನಾಡಿನ ಸನ್ ಟಿವಿಯವರು 80 ಕೋಟಿ ರೂಪಾಯಿಗಳಿಗೆ ಖರೀದಿಸಿದ್ದಾರಂತೆ.

ಅಂದಹಾಗೆ 'ಶಿವಾಜಿ'ಯಲ್ಲಿ ನಟಿಸಿರುವ ರಜನೀಕಾಂತ್ ಪಡೆದಿರುವುದು 30 ಕೋಟಿ, ಅದನ್ನು ನಿರ್ದೇಶಿಸಲು ಶಂಕರ್ ಪಡೆದಿರುವುದೂ 30 ಕೋಟಿ. ಇನ್ನು ಸಿನಿಮಾ ನಿರ್ಮಾಣಕ್ಕೆ ವೆಚ್ಚವಾಗಿರುವುದು 30 ಕೋಟಿ ಎಂದು ಲೆಕ್ಕಹಾಕಿದರೆ, ಅದರ ನಿರ್ಮಾಪಕರಿಗೆ ಸಿನಿಮಾ ಬಿಡುಗಡೆ ಆಗುವುದಕ್ಕೆ ಮುನ್ನವೇ ಸಿಕ್ಕಿರುವ ಲಾಭ ಕೇವಲ ಹತ್ತು ಕೋಟಿಗಳು ಮಾತ್ರ!

ಆದರೆ ಸಿನಿಮಾ ಬಿಡುಗಡೆ ಆದನಂತರ ಹರಿದುಬರುವ ದುಡ್ಡನ್ನು ಇನ್ನೂ ಯಾರೂ ಲೆಕ್ಕ ಹಾಕಿಲ್ಲ.

ಕನ್ನಡ ಸಿನಿಮಾವೊಂದಕ್ಕೆ ಇಷ್ಟು ಬೇಡಿಕೆ ಬರುವುದೆಂದು?



ಪ್ರೇಮ್‌ನ ಪ್ರಚಾರದ ಗೀ


ಪ್ರೇಮ್ ಮತ್ತು ರಕ್ಷಿತಾ ಮದುವೆಯಾಗುತ್ತಿರುವುದು ಈ ಶತಮ ಮಹಾ ಸುದ್ದಿ ಎಂಬಂತೆ ದಿನಪತ್ರಿಕೆಗಳು ಬರೆಯುತ್ತಿವೆ. ಹಲವು ಟಿವಿ ಚಾನೆ ಈ ಸುದ್ದಿಯನ್ನು ಫ್ಲಾಶ್‌ನ್ಯೂಸ್ ಎಂದು ಪ್ರಸಾರ ಮಾಡುತ್ತಿವೆ. ಚಾನೆಲ್‌ಗಳಂತೂ ಇವರ ಮದುವೆಯ ಸುದ್ದಿಯನ್ನು ಲೈವ್ ಆಗಿ ಬಿತ್ತರಿ ಇವೆಲ್ಲವನ್ನೂ ಪ್ರೇಮ್ ಮತ್ತು ರಕ್ಷಿತಾ ಯಾವ ಲಜ್ಜೆಯಿಲ್ಲದೇ ಎಂ ಮಾಡುತ್ತಿದ್ದಾರೆ.

ಇದೆಲ್ಲವನ್ನು ನೋಡಿದರೆ ಪ್ರೇಮ್ ತಾನು ಅಭಿಷೇಕ್ ಬಚ್ಚನ್ ರಕ್ಷಿತಾ ತಾನು ವಿಶ್ವಸುಂದರಿ ಎಂದೂ ಭಾವಿಸಿರುವಂತಿದೆ. ಆದರಲ್ಲೂ ಐಶ ಮದುವೆಯ ಸುದ್ದಿಯನ್ನು ಮಾಧ್ಯಮಗಳು ಅಬ್ಬರವಾಗಿ ಪ್ರಚಾರ ಮಾಡುತ್ತಿರು ನೋಡಿ ಜನರಿಗೆ ವಾಕರಿಕೆ ಬಂದಿರುವಾಗ ಈಗ ಇವರಿಬ್ಬರ ಮದುವೆಯ ಜನರ ತಲೆ ಚಿಟ್ ಹಿಡಿಸಿದೆ.

"ಪೊಲ್ಲಾಚಿಯಲ್ಲಿ ತಮಿಳರು ನಮ್ಮ ಚಿತ್ರೀಕರಣಕ್ಕೆ ಅಡ್ಡಿ ಮಾ 'ಪ್ರೀತಿ ಏಕೆ ಭೂಮಿಮೇಲಿದೆ' ಚಿತ್ರೀಕರಣವನ್ನು ಅರ್ಧಕ್ಕೇ ನಿಲ್ಲಿಸಿ ಓಡಿಬಂ ಇದರಿಂದ ಲಕ್ಷಾಂತರ ರೂ. ನಷ್ಟವಾಗಿದೆ " ಎಂದು ಮೊನ್ನೆ ಟಿವಿಯಲ್ಲಿ ಹ ಬೊಬ್ಬೆ ಹಾಕಿದ್ದರು. ಆದರೆ ಇದಾದ ಎರಡೇ ದಿನಕ್ಕೆ "ತಮಿಳರು ತೊಂದರೆ ಕೊಟ್ಟಿಲ್ಲ, ಕಾವೇರಿ ಗಲಾಟೆ ಹಿನ್ನೆಲೆಯಲ್ಲಿ ಗಲಭೆಯಾಗಬಹು ಭಾವಿಸಿ ನಾವೇ ಓಡಿಬಂದೆವು" ಎಂದು ಸ್ಪಷ್ಟೀಕರಣ ನೀಡಿದರು.

ಹೀಗೆ ನೆಲ ಮತ್ತು ಜಲದ ವಿಷಯದಲ್ಲಿ ಕೂಡ ಪ್ರಚಾರ ಗಿಟ್ಟಿಸುವ ಹುಂಬತನಕ್ಕೆ ಏನೆನ್ನೋಣ?

ಖರಾಬ್ ಭೂಪತಿ



'ಭೂಪತಿ' ಚಿತ್ರ ದರ್ಶನ್ ನಟನೆಯ 25ನೆಯ ಚಿತ್ರ ಎಂದು ಭಾರೀ ಪ್ರಚಾರ ಗಳಿಸಿತ್ತು, ಆದರೆ ಇದನ್ನು ನೋಡಿದಾಗ ನಿಜಕ್ಕೂ ಕನ್ನಡ ಚಿತ್ರರಂಗ ಎಂತಹ ಅಧೋಗತಿಗೆ ಇಳಿದಿದೆ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕೊಂದು ಪುಟ್ಟ ಉದಾಹರಣೆ: ಈ ಚಿತ್ರದಲ್ಲಿ ಸ್ವತಃ ಮುಖ್ಯಮಂತ್ರಿಯೇ (ಪಾತ್ರಧಾರಿ) ಚಿತ್ರದ ನಾಯಕ ದರ್ಶನ್ ಜೊತೆ ಫೈಟ್ ಮಾಡುತ್ತಾರೆ. ಹೀಗೆ ಫೈಟ್ ಮಾಡುವಾಗ ಥಿಯೇಟರಿನಲ್ಲಿರು ಪ್ರೇಕ್ಷಕರೆಲ್ಲಾ ಕೇಕೆ ಹಾಕಿ ನಗುತ್ತಾರೆ!

ಇನ್ನು ಇದರ ಕತೆ, ಚಿತ್ರಕತೆ ಹಾಗು ಇನ್ನಿತರ ವಿಷಯಗಳನ್ನು ಹೇಳಿದರೆ ನೀವು ಮೂರ್ಛೆ ಹೋಗುವುದು ಗ್ಯಾರೆಂಟಿ. ಈ ಚಿತ್ರವನ್ನು ನಿರ್ದೇ ಎಸ್. ನಾರಾಯಣ್ ಸಹೋದರ ಎಸ್. ಗೋವಿಂದು. 'ಜೂಟ್' ಚಿತ್ರರಂಗಕ್ಕೆ ಬಂದ ಗೋವಿಂದು ಎಂಬ ಭೂಪತಿ ಇಷ್ಟೊಂದು ಖ ಆದ ಚಿತ್ರ ಮಾಡಬಾರದಿತ್ತು!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Indus